ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 3 ಮಂಗಳವಾರ 2026

46

ಸಂಪುಟ: 46 | ಸಂಚಿಕೆ: 312 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅಮೆರಿಕಾಕ್ಕೆ ಬ್ರಿಟನ್, ಫ್ರಾನ್ಸ್, ಜರ್ಮನಿ ಬೆಂಬಲ; ಖಮೇನಿ ಹತ್ಯೆಗೆ ರಷ್ಯಾ ಖಂಡನೆ; ಶತ್ರು ರಾಷ್ಟ್ರದ ಮಿತ್ರರತ್ತ ಇರಾನ್ ಬೆಂಕಿಯುಂಡೆ; ಸೌದಿ ಸೇರಿ ಗಲ್ಫ್ ರಾಷ್ಟ್ರಗಳಲ್ಲಿ ಕ್ಷಿಪಣಿ ಸುರಿಮಳೆ

ಯುದ್ಧ ವಿಶ್ವರೂಪ ಭೀತಿ



ಇರಾನ್ ಮಿತ್ರರಾಷ್ಟ್ರ ಲೆಬನಾನ್ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿಯಿಂದ ದಟ್ಟ ಹೊಗೆ.


ನವದೆಹಲಿ: ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಬಳಿಕ ಮಧ್ಯಪ್ರಾಚ್ಯದಲ್ಲಿ ಭುಗಿಲೆದ್ದಿರುವ ಯುದ್ಧದ ಜ್ವಾಲೆ ಇದೀಗ ಜಾಗತಿಕ ಸ್ವರೂಪ ಪಡೆದು ಕೊಳ್ಳುವ ಹಂತ ತಲುಪಿದೆ.

ಅಮೆರಿಕಾ–ಇಸ್ರೇಲ್ ಜಂಟಿ ಕ್ಷಿಪಣಿ ದಾಳಿಯಲ್ಲಿ ಸರ್ವೋಚ್ಚ ನಾಯಕ ಅಲಿ ಖಮೇನಿಯನ್ನು ಕಳೆದು ಕೊಂಡಿರುವ ಇರಾನ್, ಪ್ರತೀಕಾರದ ಪ್ರತಿಜ್ಞೆಯೊಂದಿಗೆ ಕ್ಷಿಪಣಿ ದಾಳಿಯನ್ನು ತೀವ್ರಗೊಳಿಸಿದೆ. ಅಮೆರಿಕಾ, ಇಸ್ರೇಲ್ ಜೊತೆಗೆ ಈ ಉಭಯ ದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಿರುವ ಹಲವು ದೇಶಗಳ ಮೇಲೂ ಮುಗಿಬಿದ್ದಿದೆ. ಮುಖ್ಯವಾಗಿ ಅಮೆರಿಕ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು, ಅದರ ಶಕ್ತಿ ಕುಂದಿಸುವ ಪ್ರಯತ್ನ ನಡೆಸಿದೆ. ಇದಕ್ಕೆ ಅಮೆರಿಕಾ ಮತ್ತು ಇಸ್ರೇಲ್ ಕೂಡ ಭಯಾನಕ ಪ್ರತ್ಯುತ್ತರ ನೀಡುತ್ತಿವೆ.

ರಷ್ಯಾ ಖಂಡನೆ: ಈ ನಡುವೆ ಖಮೇನಿ ಹತ್ಯೆಯನ್ನು ಖಂಡಿಸಿದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಖಮೇನಿ ಅವರನ್ನು ನಾವು ಶ್ರೇಷ್ಠ ನಾಯಕರೆಂದೇ ಸ್ಮರಿಸುವುದಾಗಿ ಹೇಳಿಕೆ ನೀಡಿದ್ದಾರೆ. ಇದರ ಬೆನ್ನಲ್ಲೇ ಇರಾನ್ ನಡೆಸುತ್ತಿರುವ ಸರಣಿ ಪ್ರತೀಕಾರದ ದಾಳಿಗಳನ್ನು ಮಟ್ಟಹಾಕಲು ವಿಶ್ವದ ಪ್ರಬಲ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿ ಈಗ ಅಮೆರಿಕದೊಂದಿಗೆ ಕೈಜೋಡಿಸಲು ಮುಂದಾಗಿರುವುದು ಪರಿಸ್ಥಿತಿಯನ್ನು ಮತ್ತಷ್ಟು ವಿಕೋಪಕ್ಕೆ ಕೊಂಡೊಯ್ಯುವ ಮುನ್ಸೂಚನೆ ನೀಡಿದೆ.

ಜಂಟಿಯಾಗಿ ಘೋಷಣೆ: ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮತ್ತು ಜರ್ಮನಿಯ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಭಾನುವಾರ ತಡರಾತ್ರಿ ಜಂಟಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಿ, ಇರಾನ್ ತನ್ನ ಮಿತ್ರ ರಾಷ್ಟ್ರಗಳ ಮೇಲೆ ನಡೆಸುತ್ತಿರುವ ಅಪಾಯಕಾರಿ ಮತ್ತು ಜವಾಬ್ದಾರಿರಹಿತ ದಾಳಿಗಳನ್ನು ಕಂಡು ಆಘಾತಕ್ಕೊಳಗಾಗಿದ್ದೇವೆ. ನಮ್ಮ ಹಿತಾಸಕ್ತಿಗಳನ್ನು ಮತ್ತು ಈ ಪ್ರದೇಶದಲ್ಲಿರುವ ನಮ್ಮ ಮಿತ್ರ ರಾಷ್ಟ್ರಗಳನ್ನು ರಕ್ಷಿಸಲು ನಾವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಿದ್ದೇವೆ. ಇರಾನ್ ತನ್ನ ಮೂಲದಿಂದಲೇ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಉಡಾವಣೆ ಮಾಡದಂತೆ ತಡೆಯಲು ನಾವು ಅಮೆರಿಕದೊಂದಿಗೆ ಒಟ್ಟಾಗಿ ಕೆಲಸ ಮಾಡಲು ನಿರ್ಧರಿಸಿದ್ದೇವೆ ಎಂದು ಗುಡುಗಿದ್ದಾರೆ. ಉದ್ವಿಗ್ನತೆ ನಡುವೆ ಇರಾನ್‌ನ ಶಸ್ತ್ರಾಸ್ತ್ರ ನೆಲೆಗಳನ್ನು ಮೂಲದಲ್ಲೇ ಧ್ವಂಸಗೊಳಿಸಲು ಅಮೆರಿಕದ ಎಪಿಕ್ ಫ್ಯೂರಿ ಕಾರ್ಯಾಚರಣೆಗೆ ಈ ಮಿತ್ರರಾಷ್ಟ್ರಗಳು ತಮ್ಮ ಸೇನಾ ಬೆಂಬಲ ಸೂಚಿಸಿರುವುದು ■ 6ನೇ ಪುಟಕ್ಕೆ

ಇನ್ನು ನಾಲ್ಕೈದು ವಾರ ಯುದ್ಧ




ವಾಷಿಂಗ್ಟನ್: ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸೇನಾ ಉದ್ವಿಗ್ನತೆಯ ಮಧ್ಯೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುದ್ದಿಗೋಷ್ಠಿ ನಡೆಸಿದರು. ಇರಾನ್ ವಿರುದ್ಧ ನಮ್ಮ ದಾಳಿಯನ್ನು ತೀವ್ರಗೊಳಿಸುತ್ತೇವೆ. ಈ ಯುದ್ಧ ಇನ್ನು 4–5 ವಾರಗಳ ಕಾಲ ನಡೆಯುತ್ತದೆ.

ಜಗತ್ತಿನಲ್ಲೇ ನಮ್ಮ ಸೇನೆ ಹೆಚ್ಚು ಬಲಶಾಲಿಯಾಗಿದ್ದು, ಈ ಯುದ್ಧದಲ್ಲಿ ಅಮೆರಿಕ ಮೇಲುಗೈ ಸಾಧಿಸಲಿದೆ. ಇರಾನ್ ಮೇಲೆ ದಾಳಿ ಮಾಡುವುದಕ್ಕೂ ಮುನ್ನ ಹಲವು ಬಾರಿ ನಾವು ಎಚ್ಚರಿಕೆ ನೀಡಿದ್ದೆವು. ಆದರೆ ಇರಾನ್ ನಮ್ಮ ಎಚ್ಚರಿಕೆ ನಿರ್ಲಕ್ಷ್ಯ ಮಾಡಿತ್ತು. ಇಷ್ಟಕ್ಕೆ ಸುಮ್ಮನಾಗದೇ ನಮಗೆ ಇರಾನ್ ಬೆದರಿಕೆ ಒಡ್ಡಿತ್ತು. ಹೀಗಾಗಿ ದಾಳಿ ಮಾಡಬೇಕಾಯಿತು. ಯುದ್ಧ ಮುಂದುವರೆದರೆ ಅಗತ್ಯಬಿದ್ದರೆ ನಾವು ಇರಾನ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರನ್ನು ನಿಯೋಜಿಸುತ್ತೇವೆ ಎಂದರು.



ಇರಾನ್ ಘನಘೋರ ಕ್ಷಿಪಣಿ ದಾಳಿಯಿಂದ ಇಸ್ರೇಲ್‌ನಲ್ಲಿ ಕಟ್ಟಡಗಳು ಧರೆಗುರುಳಿವೆ.

ಗಾಯಗೊಂಡಿದ್ದ ಖಮೇನಿ ಪತ್ನಿ ಮನ್ಸೌರೆ ಸಾವು



ನವದೆಹಲಿ, ಮಾ.2: ಇರಾನ್‌ನ ದಿವಂಗತ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಪತ್ನಿ ಮನ್ಸೌರೆ ಖೋಜಾಸ್ತೆ ಬಾಗರ್ಜಾಡೆ ಅವರು ಸೋಮವಾರ ನಿಧನರಾಗಿದ್ದಾರೆ. ಟೆಹ್ರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ವೈಮಾನಿಕ ದಾಳಿಯಲ್ಲಿ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆದಿದ್ದಾರೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ಅಯತೊಲ್ಲಾ ಅಲಿ ಖಮೇನಿ ಹಾಗೂ ಅವರ ಪತ್ನಿ ಮನ್ಸೌರೆ ಖೋಜಾಸ್ತೆ ಬಾಗರ್ಜಾಡೆ, ಆರು ಮಂದಿ ಮಕ್ಕಳನ್ನು ಅಗಲಿದ್ದಾರೆ. ಇವರ ಕೆಲವು ದೂರದ ಸಂಬಂಧಿಕರು ವಿದೇಶಗಳಲ್ಲಿ (ವರದಿಗಳ ಪ್ರಕಾರ ಪ್ಯಾರಿಸ್‌ನಲ್ಲಿ ಮೊಮ್ಮಕ್ಕಳು ಮತ್ತು ಸೋದರಳಿಯಂದಿರು) ನೆಲೆಸಿದ್ದಾರೆ ಎನ್ನಲಾಗಿದ್ದರೂ, ಇವರ ಹತ್ತಿರದ ಕುಟುಂಬ ಮಾತ್ರ ಇರಾನ್‌ನಲ್ಲಿಯೇ ನೆಲೆಸಿದೆ ಖಮೇನಿ ಪತ್ನಿ ಮನ್ಸೌರೆ ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು ತೀರಾ ವಿರಳವಾಗಿದ್ದವು. ಪತಿಯ ದಶಕಗಳ ಆಡಳಿತಾವಧಿಯುದ್ದಕ್ಕೂ ಅವರು ಬಹಳ ಲೋ–ಪ್ರೊಫೈಲ್ ಕಾಯ್ದುಕೊಂಡಿದ್ದರು. ಆದರೆ, ಅವರ ಕುಟುಂಬವು ಪ್ರಭಾವಿ ಸ್ಥಾನಗಳನ್ನು ಹೊಂದಿತ್ತು. ಮನ್ಸೌರೆ ಅವರ ತಂದೆ ಮೊಹಮ್ಮದ್ ಇಸ್ಮಾಯಿಲ್ ಖೋಜಾಸ್ತೆ ಬಾಗರ್ಜಾಡೆ ಅವರು ಮಶ್ಹಾದ್‌ನಲ್ಲಿ ದೊಡ್ಡ ಉದ್ಯಮಿಯಾಗಿದ್ದರು. ಇವರ ಸಹೋದರ ಹಸನ್ ■ 6ನೇ ಪುಟಕ್ಕೆ

ಕನ್ನಡಿಗರ ಸುರಕ್ಷತೆ ಸರ್ಕಾರದ ಆದ್ಯತೆ

ಬೆಂಗಳೂರು, ಮಾ. 2(ಕೆಎಂಶಿ)– ಅಮೆರಿಕ–ಇಸ್ರೇಲ್ ದಾಳಿ ಬಳಿಕ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಅಲ್ಲಿನ



ಕನ್ನಡಿಗರ ಸುರಕ್ಷತೆ ಮತ್ತು ಯೋಗ ಕ್ಷೇಮಕ್ಕೆ ಆದ್ಯತೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಪ್ರಸ್ತುತ ಸುಮಾರು 100 ಮಂದಿ ಪ್ರವಾಸಿ ಕನ್ನಡಿಗರು ದುಬೈನಲ್ಲೂ, 9 ಮಂದಿ ಬಹರೈನ್ ನಲ್ಲಿ ಸಿಲುಕಿದ್ದಾರೆ. ಇವರುಗಳನ್ನು ಸ್ವದೇಶಕ್ಕೆ ಕರೆತರಲು ರಾಜ್ಯ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ.

ರಾಜ್ಯ ತುರ್ತು ಕಾರ್ಯಾಚರಣೆ ಮತ್ತು ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರಗಳು ಸಕ್ರಿಯವಾಗಿವೆ. ಸರ್ಕಾರ ಕೇಂದ್ರ ವಿದೇಶಾಂಗ ಮತ್ತು ನಾಗರಿಕ ವಿಮಾನ ಯಾನ ಸಚಿವಾಲಯ, ಭಾರತೀಯ ರಾಯಭಾರ ಕಚೇರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದಿದ್ದಾರೆ.

ಸಂಘರ್ಷ ಪೀಡಿತ ಪ್ರದೇಶದಲ್ಲಿನ ನನ್ನ ಸಹೋದರ, ಸಹೋದರಿಯರು ಶಾಂತವಾಗಿರಿ. ನಿಮಗೆ ಯಾವುದೇ ತೊಂದರೆ ಆಗುವುದಿಲ್ಲ. ನಿಮ್ಮ ■ 6ನೇ ಪುಟಕ್ಕೆ

ಅಮೆರಿಕದ ಮೂರು ಫೈಟರ್ ಜೆಟ್ ಹೊಡೆದುರುಳಿಸಿದ್ದು ಕುವೈತ್; ಇರಾನ್ ಅಲ್ಲ

ತೆಹ್ರಾನ್: ಕುವೈತ್ ಆಕಸ್ಮಿಕವಾಗಿ ಅಮೆರಿಕದ ಮೂರು ಈ–15 ಫೈಟರ್ ಜೆಟ್‌ಗಳನ್ನು ಹೊಡೆದುರುಳಿಸಿದೆ ಎಂದು ಯುಎಸ್ ಮಿಲಿಟರಿ ಹೇಳಿದೆ. ಆದಾಗ್ಯೂ, ನಮ್ಮ ಪೈಲಟ್‌ಗಳು ಜೆಟ್‌ನಿಂದ ಹಾರಿದ್ದು ಅವರೆಲ್ಲಾ ಸುರಕ್ಷಿತರಾಗಿದ್ದಾರೆ ಎಂದಿದೆ. ಯುಎಸ್ ಸೆಂಟ್ರಲ್ ಕಮಾಂಡ್ ಈ ಮಾಹಿತಿಯನ್ನು ಸಾಮಾಜಿಕ ಮಾಧ್ಯಮ ಸೈಟ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಮಾರ್ಚ್ 1ರಂದು ರಾತ್ರಿ 11:03ಕ್ಕೆ, ಆಪರೇಷನ್ ಎಪಿಕ್ ಫ್ಯೂರಿಗೆ ಬೆಂಬಲವಾಗಿ ಹಾರುತ್ತಿದ್ದ ಮೂರು ಅಮೆರಿಕ ಎಫ್ –15 ಇ ಸ್ಟ್ರೈಕ್ ಈಗಲ್‌ಗಳನ್ನು ಕುವೈತ್ ಏರ್ ಡಿಫೆನ್ಸ್ ತಪ್ಪಾಗಿ ತಿಳಿದು ಹೊಡೆದುರುಳಿಸಿದೆ ಎಂದರು.

ಕುವೈತ್ ಕೂಡ ತನ್ನ ತಪ್ಪನ್ನು ಒಪ್ಪಿಕೊಂಡಿದೆ. ಈಗ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಅವರ ಬೆಂಬಲಕ್ಕೆ ಅಮೆರಿಕ ಕೃತಜ್ಞತೆ ಸಲ್ಲಿಸುತ್ತದೆ. ಘಟನೆಯ ಕಾರಣವನ್ನು ತನಿಖೆ ಮಾಡಲಾಗುತ್ತಿದೆ. ಏತನ್ಮಧ್ಯೆ, ಶನಿವಾರ ತನ್ನ ದಾಳಿಯನ್ನು ಪ್ರಾರಂಭಿಸಿದ ನಂತರ, ■ 6ನೇ ಪುಟಕ್ಕೆ

ಇರಾನ್ ನೂತನ ಸರ್ವಾಧಿಕಾರಿ ಅರಾಫಿ ಹತ್ಯೆ?

ತೆಹ್ರಾನ್: ಇರಾನ್‌ನ ಮಧ್ಯಂತರ ಸುಪ್ರೀಂ ನಾಯಕನಾಗಿ ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ಅಲಿರೆಜಾ



ಅರಾಫಿ ಅವರನ್ನು ವೈಮಾನಿಕ ದಾಳಿಯಲ್ಲಿ ಹತ್ಯೆ ಮಾಡಲಾಗಿದೆ ಎಂದು ಕೆಲವು ಇಸ್ರೇಲಿ ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

ಈ ವರದಿಗಳು ವ್ಯಾಪಕವಾಗಿ ಪ್ರಸಾರವಾಗಿವೆ. ಆದರೆ ಇರಾನಿನ ಸರ್ಕಾರಿ ಸ್ವಾಮ್ಯದ ಮಾಧ್ಯಮ ಅಥವಾ ಪ್ರಮುಖ ಅಂತರರಾಷ್ಟ್ರೀಯ ಸುದ್ದಿ ಸಂಸ್ಥೆಗಳು ಈ ಸುದ್ದಿಯನ್ನು ದೃಢಪಡಿಸಿಲ್ಲ. ಖಮೇನಿಯವರ ಹತ್ಯೆಯ ಸುತ್ತಲಿನ ಆರಂಭಿಕ ಗೊಂದಲದಂತೆಯೇ ಈ ಘಟನೆಯಲ್ಲೂ ಗೊಂದಲಗಳು ಮೂಡಿವೆ. ಈ ಹಿಂದಿನ ಸರ್ವೋಚ್ಚ ನಾಯಕ ಖಮೇನಿ ಹತ್ಯೆಯನ್ನು ಮೊದಲು ಇಸ್ರೇಲಿ ಅಧಿಕಾರಿಗಳು ದೃಢಪಡಿಸಿದ್ದರು ಮತ್ತು ನಂತರ ಇರಾನಿನ ಅಧಿಕಾರಿಗಳು ಒಪ್ಪಿಕೊಂಡರು. ಆದರೆ ನೂತನ ಸರ್ವಾಧಿಕಾರಿಯಾಗಿ ಆಯ್ಕೆಯಾಗಿದ್ದ ಅರಾಫಿಯವರ ಸಾವಿನ ಬಗ್ಗೆ ಪರಿಸ್ಥಿತಿ ಸ್ಪಷ್ಟವಾಗಿಲ್ಲ. ■ 6ನೇ ಪುಟಕ್ಕೆ

ದುಬೈ ವಿಮಾನ ನಿಲ್ದಾಣ ಬಂದ್: ಬಳ್ಳಾರಿ ಶಾಸಕ ಸೇರಿ 50ಕ್ಕೂ ಹೆಚ್ಚು ಪ್ರವಾಸಿಗರಿಗೆ ಸಂಕಷ್ಟ!

ಬಳ್ಳಾರಿ: ಇಸ್ರೇಲ್–ಇರಾನ್ ಯುದ್ಧದ ಹಿನ್ನೆಲೆಯಲ್ಲಿ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ಶಾಸಕ ಭರತ್ ರೆಡ್ಡಿ ಸೇರಿ ಬಳ್ಳಾರಿ ಜಿಲ್ಲೆಯ ಸುಮಾರು 50ಕ್ಕೂ ಹೆಚ್ಚು ಪ್ರವಾಸಿಗರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಶಾಸಕ ಭರತ್ ರೆಡ್ಡಿ ಕುಟುಂಬ ಸಮೇತ ಕಳೆದ ವಾರ ದುಬೈಗೆ ಪ್ರವಾಸಕ್ಕೆ ತೆರಳಿದ್ದರು. ಶಾರ್ಜಾದಿಂದ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶನಿವಾರ ಮಧ್ಯಾಹ್ನ ಆಗಮಿಸಿ, ರಾತ್ರಿ 9 ಗಂಟೆಗೆ ಭಾರತಕ್ಕೆ ಹಿಂತಿರುಗಬೇಕಿದ್ದ ವಿಮಾನವನ್ನು ಏರಲು ಸಿದ್ಧರಾಗಿದ್ದರು. ಆದರೆ, ಭದ್ರತಾ ಕಾರಣಗಳಿಂದ ವಿಮಾನ ನಿಲ್ದಾಣ ಕಾರ್ಯಾಚರಣೆ ಸ್ಥಗಿತಗೊಂಡಿದೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರಿಗೆ ಟರ್ಮಿನಲ್ ಪ್ರವೇಶ ನಿರಾಕರಿಸಲಾಗಿದೆ ಎಂದು ತಿಳಿದುಬಂದಿದೆ. ನಾವು ಮುಂಚಿತವಾಗಿ ಒಳಗೆ ಪ್ರವೇಶಿಸಿದ್ದರೆ ವಸತಿ ವ್ಯವಸ್ಥೆ ಸಾಧ್ಯವಾಗುತ್ತಿತ್ತು ಎಂದು ಅಧಿಕಾರಿಗಳು ಹೇಳಿದರು. ■ 6ನೇ ಪುಟಕ್ಕೆ

ಒಮನ್ ಕರಾವಳಿಯಲ್ಲಿ ತೈಲ ಟ್ಯಾಂಕರ್ ಮೇಲೆ ಡ್ರೋನ್ ದಾಳಿ, ಭಾರತ ಮೂಲದ ಸಿಬ್ಬಂದಿ ಸಾವು!

ನವದೆಹಲಿ: ಇಸ್ರೇಲ್–ಅಮೆರಿಕದ ಜಂಟಿ ದಾಳಿಗೆ ಇರಾನ್‌ನಿಂದ ಪ್ರತಿಕಾರದ ದಾಳಿ ನಡೆದಿದ್ದು, ಒಮನ್‌ನಲ್ಲಿ ತೈಲ ಟ್ಯಾಂಕರ್ ಮೇಲೆ ನಡೆದ ದಾಳಿಯಲ್ಲಿ ಓರ್ವ ಭಾರತೀಯ ಸಿಬ್ಬಂದಿ ಸಾವನ್ನಪ್ಪಿದ್ದಾರೆ.

ತೈಲ ಟ್ಯಾಂಕರ್ ಮೇಲಿನ ದಾಳಿಯ ಬಗ್ಗೆ ಒಮನ್‌ನಿಂದ ಮಾಹಿತಿ ಲಭ್ಯವಾಗಿದ್ದು, ಸುಲ್ತಾನ್ ಕಬೂಸ್ ಬಂದರು ಬಳಿ ತೈಲ ಟ್ಯಾಂಕರ್ ಮೇಲೆ ಇರಾನ್ ದಾಳಿ ನಡೆಸಿದೆ. ಇದರಲ್ಲಿ ಭಾರತೀಯ ಮೃತಪಟ್ಟಿರುವ ಬಗ್ಗೆ ಒಮನ್ ದೃಢಪಡಿಸಿದೆ. ಇದರ ವೀಡಿಯೊಗಳು ಕೂಡ ಹರಿದಾಡುತ್ತಿವೆ.

ಅಮೆರಿಕ ಮತ್ತು ಇಸ್ರೇಲ್ ದಾಳಿಗಳಿಗೆ ಪ್ರತಿಯಾಗಿ ಇರಾನ್ ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ನಡೆಸುತ್ತಿದ್ದು, ಅದರಂತೆ ಒಮನ್ ಮೇಲೂ ಇರಾನ್ ದಾಳಿ ನಡೆಸಿದೆ. ಒಮನ್ ಕರಾವಳಿಯಲ್ಲಿ ಮಾನವರಹಿತ ಡ್ರೋನ್‌ವೊಂದು ಹಡಗು ತೈಲ ಟ್ಯಾಂಕರ್‌ಗೆ ಅಪ್ಪಳಿಸಿದ ಪರಿಣಾಮವಾಗಿ ಸಂಭವಿಸಿದ ಸ್ಫೋಟದಲ್ಲಿ ಭಾರತೀಯ ಸಿಬ್ಬಂದಿಯೊಬ್ಬರು ■ 6ನೇ ಪುಟಕ್ಕೆ

ಮೈಸೂರಿನಲ್ಲಿ ಜನಪ್ರತಿನಿಧಿಗಳು, ತಂಬಾಕು ಖರೀದಿ ಕಂಪನಿಗಳ ಮಹತ್ವದ ಸಭೆ

ತಂಬಾಕಿಗೆ ನ್ಯಾಯಯುತ ಗರಿಷ್ಠ ಬೆಲೆ ನಿಗದಿ ಸಂಬಂಧ 2 ದಿನದಲ್ಲಿ ವರದಿ ನೀಡಿ

ತಂಬಾಕು ಮಂಡಳಿ ಅಧಿಕಾರಿಗಳಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಾಕೀತು

- ಬೆಲೆ ಇಳಿಕೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ
- ರೈತರಿಗೆ ಕೊಟ್ಟ ಮಾತನ್ನು ನೀವೆಲ್ಲಾ ಉಳಿಸಿಕೊಳ್ಳಿ
- ತೆರಿಗೆ ಹೆಚ್ಚಳವನ್ನು ರೈತರ ಮೇಲೆ ಹೊರಿಸಬೇಡಿ
- ಇಂದು ತಂಬಾಕು ಬೆಳೆಗಾರರ ಸಭೆ ನಡೆಸುತ್ತೇನೆ

ಮೈಸೂರು, ಮಾ.2(ಬಿಎಲ್ ಯು)– ತಂಬಾಕು ಖರೀದಿಸುವ ಸಿಗರೇಟ್ ತಯಾರಿಕಾ ಕಂಪನಿಗಳ ಅಸೋಸಿಯೇಷನ್ ಜೊತೆ ಸಮಾಲೋಚನೆ ನಡೆಸಿ ಇನ್ನೆರಡು ದಿನದಲ್ಲಿ ತಂಬಾಕಿಗೆ ನ್ಯಾಯಯುತ ಗರಿಷ್ಠ ಬೆಲೆ ನಿಗದಿ ಸಂಬಂಧ ನನಗೆ ವರದಿ ನೀಡಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಂಬಾಕು ಮಂಡಳಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಇಂದು ಕರ್ನಾಟಕದಲ್ಲಿ ಪ್ರಸ್ತುತ ನಡೆಯುತ್ತಿರುವ ಎಫ್ ಸಿವಿ ತಂಬಾಕು ಹರಾಜಿಗೆ ಸಂಬಂಧಿಸಿದ ವಿಷಯಗಳ ಕುರಿತು ಜನ ಪ್ರತಿನಿಧಿಗಳು ಹಾಗೂ ತಂಬಾಕು ವರ್ತಕರೊಂದಿಗೆ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ರೈತರ ಬೇಡಿಕೆಯಂತೆ ನ್ಯಾಯಯುತ ಬೆಲೆ ನಿಗದಿ ಮಾಡದಿದ್ದರೆ ಈ ಸಭೆ ನಡೆಸಿರುವುದು ವ್ಯರ್ಥವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಸಂಕ್ರಾಂತಿ ನಂತರ ತಂಬಾಕು ಬೆಲೆ ಬಹಳ ಕಡಿಮೆಯಾಗಿದೆ. ಇದರಿಂದ ತಂಬಾಕು ಬೆಳೆಯುವ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ನಾನು ಹೋದ ಕಡೆಯಲ್ಲೆಲ್ಲಾ ರೈತರು ಇದೇ ಸಮಸ್ಯೆ ಹೇಳುತ್ತಾರೆ. ರೈತರ ಹಿತ ಕಾಯುವುದು ನಮ್ಮ ಸರ್ಕಾರದ ಮೂಲ ಧ್ಯೇಯ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ರೈತರಿಗೆ ನೀವು ಮಾತುಕೊಟ್ಟಂತೆ ನಡೆದುಕೊಳ್ಳಬೇಕು. ನೆರೆ ರಾಜ್ಯ ಆಂಧ್ರ ಪ್ರದೇಶದಲ್ಲಿ ಇರುವಂತೆ ಇಲ್ಲಿಯೂ ಕೂಡ ಉತ್ತಮ ದರ ಕೊಟ್ಟು ತಂಬಾಕು ಖರೀದಿ ಮಾಡಿ ಎಂದು ಸಲಹೆ ನೀಡಿದರು.

ಕಡಿಮೆ ಬೆಲೆಗೆ ತಂಬಾಕು ಖರೀದಿ ಮಾಡಲು ಕೇಂದ್ರ ಸರ್ಕಾರ ಸಿಗರೇಟ್ ಸುಂಕ ಹೆಚ್ಚಳದ ಕಾರಣ ನೀಡುತ್ತೀರಾ. ಆದರೆ ಸುಂಕ ಏರಿಕೆ ಭಾರವನ್ನು ಗ್ರಾಹಕರ ಮೇರೆ ಹೊರಿಸುವ ■ 6ನೇ ಪುಟಕ್ಕೆ

ತಂಬಾಕು ಹರಾಜಿನಲ್ಲಿ ವಿದೇಶಿ ಕಂಪನಿಗಳಿಗೆ ಅವಕಾಶ ನೀಡಿ

ತಂಬಾಕು ಹರಾಜಿನಲ್ಲಿ ವಿದೇಶಿ ಕಂಪನಿಗಳು ಭಾಗಿಯಾಗಲು ಅವಕಾಶ ಕಲ್ಪಿಸಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್, ತಂಬಾಕು ಮಂಡಳಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ವಿದೇಶಿ ಕಂಪನಿಗಳು ಹರಾಜಿನಲ್ಲಿ ಭಾಗಿಯಾದರೆ ಬೆಲೆ ನಿಗದಿಯಲ್ಲಿ ಪೈಪೋಟಿ ಏರ್ಪಡುತ್ತದೆ ಇದರಿಂದ ಒಂದೇ ಕಂಪನಿ ಏಕಸ್ವಾಮ್ಯತೆ ಸಾಧಿಸುವುದು ತಪ್ಪುತ್ತದೆ. ಇದರಿಂದ ರೈತರಿಗೂ ಒಳ್ಳೆಯ ಬೆಲೆ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು. ನಕಲಿ ಸಿಗರೇಟ್ ಮಾರಾಟವನ್ನು ತಪ್ಪಿಸಬೇಕು. ಇದರಿಂದ ತಂಬಾಕು ಖರೀದಿ ಕಂಪನಿಗಳಿಗೂ ಹಾಗೂ ರೈತರಿಗೂ ಅನುಕೂಲವಾಗುತ್ತದೆ. ಅಲ್ಲದೆ ತೆರಿಗೆ ವಂಚನೆಗೆ ಕೂಡ ಕಡಿವಾಣ ಹಾಕಿದಂತಾಗುತ್ತದೆ ಎಂದು ಹೇಳಿದರು. ತಂಬಾಕು ಹರಾಜು ಕೇಂದ್ರಗಳಲ್ಲಿ ರೈತರು ಕೂರಲು, ವಿಶ್ರಾಂತಿ ಪಡೆಯಲು ಸೂರು ನಿರ್ಮಾಣ ಮಾಡಬೇಕು, ಶೌಚಾಲಯ, ಹೋಟೆಲ್ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಬೇಕು.



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಸೋಮವಾರ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯ ಸಚಿವ ಕೆ. ವೆಂಕಟೇಶ್ ಅವರು ತಂಬಾಕು ಹರಾಜಿಗೆ ಸಂಬಂಧಿಸಿದ ವಿಷಯಗಳ ಕುರಿತು ಜನ ಪ್ರತಿನಿಧಿಗಳು ಹಾಗೂ ತಂಬಾಕು ವರ್ತಕರೊಂದಿಗೆ ಸಭೆ ನಡೆಸಿದರು.

ನಮಗೆ ನಿಮ್ಮ ಕಥೆ ಬೇಡ ಗರಿಷ್ಠ ಬೆಲೆ ಕೊಡಿ ಅಷ್ಟೆ

ಸುಂಕ ಹೆಚ್ಚಳ ಸೇರಿದಂತೆ ಯಾವುದೇ ಕಥೆ ನಮಗೆ ಬೇಡ, ನಿಮ್ಮ ಸಬೂಬು ಕೇಳಲು ನಾವು ತಯಾರಿಲ್ಲ, ಮೊದಲು ಇದ್ದ ಬೆಲೆಯನ್ನು ಈಗಲೂ ಕೊಡಿ ಎಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ತಂಬಾಕು ಖರೀದಿ ಕಂಪನಿಗಳಿಗೆ ತಾಕೀತು ಮಾಡಿದರು. ಪ್ರತಿ ವರ್ಷ ಕೆಲವು ರೈತರನ್ನು ಎತ್ತಿ ಕಟ್ಟಿ ದೆಹಲಿಗೆ ಕಳುಹಿಸುತ್ತಾರೆ. ತಮಗೆ ಬೇಕಾದಂತೆ ಕೇಂದ್ರ ಸರ್ಕಾರದ ಬಳಿ ಹೇಳಿಸುತ್ತಾರೆ. ಈ ಮೂಲಕ ರೈತರ ಮೂಲಕ ತಂಬಾಕು ಖರೀದಿ ಕಂಪನಿಗಳು ದೊಡ್ಡ ಲಾಬಿ ಮಾಡುತ್ತಿವೆ ಎಂದು ಆರೋಪಿಸಿದರು. ಆಂಧ್ರ ಪ್ರದೇಶದಲ್ಲಿ ಉತ್ತಮ ಬೆಲೆ ಕೊಡುತ್ತೀರಾ. ಆದರೆ ■ 6ನೇ ಪುಟಕ್ಕೆ

ರೈತರು ತಂಬಾಕು ಬೆಳೆಯುವುದನ್ನೆ ನಿಲ್ಲಿಸಿದರೆ ಏನು ಮಾಡುತ್ತೀರಾ...

ತಂಬಾಕಿಗೆ ನ್ಯಾಯಯುತ ಬೆಲೆ ನೀಡದೆ ಇದ್ದರೆ ರೈತರು ತಂಬಾಕು ಬೆಳೆಯುವುದನ್ನೆ ನಿಲ್ಲಿಸಿದರೆ ನೀವು ಏನು ಮಾಡುತ್ತೀರಾ ಎಂದು ಅರಕಲಗೂಡು ಶಾಸಕ ಎ.ಮಂಜು ತಂಬಾಕು ಖರೀದಿ ಕಂಪನಿಗಳನ್ನು ಪ್ರಶ್ನಿಸಿದರು.

ಒಟ್ಟಾರೆ ಹರಾಜಾಗುವ ತಂಬಾಕಿನಲ್ಲಿ ಶೇಕಡ 70 ರಷ್ಟು ಐಟಿಸಿ ಕಂಪನಿಯೊಂದೇ ಖರೀದಿ ಮಾಡುತ್ತಿದೆ. ರೈತರಿಂದ ಕೋಟಿ ಕೋಟಿ ಸಂಪಾದನೆ ಮಾಡಿ ದೇಶ–ವಿದೇಶದಲ್ಲಿ ಪ್ರಸಿದ್ಧಿಯಾಗಿದ್ದೀರಾ. ಇದಕ್ಕೆಲ್ಲಾ ರೈತರು ಕಾರಣ ಎಂಬುದನ್ನು ಮರೆಯಬೇಡಿ.

ತಂಬಾಕಿಗೆ ಕಡಿಮೆ ಬೆಲೆ ನೀಡಲು ಸುಂಕ ಹೆಚ್ಚಳ ಸೇರಿದಂತೆ ಇತರೆ ಕಾರಣ ಹೇಳಿ ನಮ್ಮನ್ನು ಮೂರ್ಖರನ್ನಾಗಿ ಮಾಡಬೇಡಿ ಎಂದು ಮಂಜು ಕಂಪನಿಗಳನ್ನು ತೀವ್ರ ತರಾಟೆಗೆ ತೆಗೆದು ಕೊಂಡರು. ತಂಬಾಕು ಮಂಡಳಿಯ ವರಿಗೆ ರೈತರ ಹಿತ ಮುಖ್ಯ. ಆದರೆ ■ 6ನೇ ಪುಟಕ್ಕೆ

ಕೊಟ್ಟ ಮಾತಿನಂತೆ 90 ಮಿಲಿಯನ್ ಟನ್ ಖರೀದಿಸಿ

90 ಮಿಲಿಯನ್ ಟನ್ ತಂಬಾಕು ಖರೀದಿ ಮಾಡುತ್ತೇವೆ ಎಂದು ತಂಬಾಕು ಬೆಳೆಯಲು ರೈತರನ್ನು ಉತ್ತೇಜಿಸಿ, ತರುವಾಯ ಅಷ್ಟು ಖರೀದಿ ಮಾಡುವುದಿಲ್ಲ ಎಂದೇಳಿದರೆ ರೈತರ ಗತಿ ಏನು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಅವರು ತಂಬಾಕು ಖರೀದಿ ಕಂಪನಿಗಳನ್ನು ಪ್ರಶ್ನಿಸಿದರು. ನೀವು ಎಷ್ಟು ಖರೀದಿ ಮಾಡುತ್ತೇವೆ ಎಂದು ಹೇಳುತ್ತೀರೊ ಅಷ್ಟು ತಂಬಾಕು ಖರೀದಿ ಮಾಡಲೇಬೇಕು. ಈ ವರ್ಷದ ಕೊನೆವರೆಗೂ ಖರೀದಿ ಪ್ರಕ್ರಿಯೆ ಮುಂದು ವರೆಯಬೇಕು ಎಂದು ಹೇಳಿದರು.

ನೀವು ಖರೀದಿ ಮಾಡುವ ತನಕ ರೈತರು ತಂಬಾಕನ್ನು ಮನೆಯಲ್ಲೇ ಇಟ್ಟುಕೊಳ್ಳಲು ಸಾಧ್ಯವಿಲ್ಲ. ನೀವು ಖರೀದಿ ಮಾಡುವುದು ವಿಳಂಬವಾದರೆ ಅದರ ತೂಕ ಕಡಿಮೆಯಾಗುತ್ತದೆ. ಇತ್ತ ನ್ಯಾಯಯುತ ಬೆಲೆಯೂ ಸಿಗುತ್ತಿಲ್ಲ, ಅತ್ತ ತೂಕ ಕೂಡ ಕಡಿಮೆಯಾಗುತ್ತದೆ. ಇದರಿಂದ ರೈತರಿಗೆ ಆಗುವ ನಷ್ಟವನ್ನು ಯಾರು ತುಂಬಿ ಕೊಡುತ್ತಾರೆ ಎಂದು ಹರೀಶ್ ಗೌಡ ಅವರು ತಂಬಾಕು ಖರೀದಿ ಕಂಪನಿಗಳನ್ನು ತರಾಟೆಗೆ ತೆಗೆದುಕೊಂಡರು.

‘ಗುಪ್ತ’ ಮಾಹಿತಿಗಾಗಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಡುವೆ ಪೈಪೋಟಿ

ಮೈಸೂರಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ

- ತಮ್ಮದೆ ಶಾಸಕರ ಬಗ್ಗೆ ಗುಪ್ತಚಾರಿಕೆ ಇದೇ ಮೊದಲು
- ಗುಪ್ತಚರ ಅಧಿಕಾರಿಗಳು ಇಬ್ಬರ ಜೊತೆಗೂ ಚೆನ್ನಾಗಿದ್ದಾರೆ
- ಫೋನ್ ಟ್ಯಾಪಿಂಗ್ ಎಲ್ಲಾ ಸರ್ಕಾರದಲ್ಲಿ ಸರ್ವೆ ಸಾಮಾನ್ಯ

ಮೈಸೂರು, ಮಾ.2(ಬಿಎಲ್‌ಯು)–



ಹೆಚ್.ಡಿ.ಕುಮಾರಸ್ವಾಮಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರ ಉಳಿಸಿಕೊಳ್ಳಲು ಗುಪ್ತಚರ ಮಾಹಿತಿ ಪಡೆಯುತ್ತಿದ್ದರೆ, ಡಿ.ಕೆ. ಶಿವಕುಮಾರ್ ಅವರು ಸಿಎಂ ಅವರಿಂದ ಅಧಿಕಾರ ಕಿತ್ತುಕೊಳ್ಳಲು ಗುಪ್ತಚರ ಮಾಹಿತಿ ಪಡೆಯುತ್ತಿದ್ದಾರೆ. ಈ ಮೂಲಕ ಇಬ್ಬರೂ ಗುಪ್ತಚರ ಇಲಾಖೆಯನ್ನು ತಮ್ಮ ಸ್ವಾರ್ಥ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಗುಪ್ತಚರ ಇಲಾಖೆ ಅಧಿಕಾರಿಗಳು ಸಿದ್ದರಾಮಯ್ಯ ಅವರ ಜೊತೆಗೂ ಚೆನ್ನಾಗಿದ್ದಾರೆ, ಡಿ.ಕೆ. ಶಿವಕುಮಾರ್ ಅವರ ಜೊತೆಯೂ ಬಾಂಧವ್ಯದಿಂದ ಇದ್ದಾರೆ. ಅವರವರಿಗೆ ಅವಶ್ಯವಿರುವ ಮಾಹಿತಿಯನ್ನು ನೀಡುತ್ತಿದ್ದಾರೆ ಎಂದು ಹೇಳಿದರು.

ಶಾಸಕರ ಗುಂಪುಗಾರಿಕೆ, ರಹಸ್ಯ ಸಭೆ ಸೇರಿದಂತೆ ಇತರೆ ರಾಜಕೀಯ ಬೆಳವಣಿಗೆಗಳ ಬಗ್ಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೂ ಗುಪ್ತಚರ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಅವರದೇ ಶಾಸಕರ ಮೇಲೆ ಅವರದೆ ಸರ್ಕಾರದ ಸಚಿವರು ಗುಪ್ತಚಾರಿಕೆ ಮಾಡುತ್ತಿರುವುದು ಪ್ರಾಯಶಃ ಇದೇ ಮೊದಲು. ಆದರೆ ಮುಖ್ಯಮಂತ್ರಿ ಆಗಲೇಬೇಕೆಂದು ಗುಪ್ತಚಾರಿಕೆ ನಡೆಸುತ್ತಿರುವುದು ದುರಂತದ ಸಂಗತಿ ಎಂದು ಟೀಕಿಸಿದರು.

ಇದಿಷ್ಟೆ ಅಲ್ಲದೆ ಅಧಿಕಾರ ಹಸ್ತಾಂತರ ವಿಚಾರದಲ್ಲಿ ಈ ಸರ್ಕಾರದಲ್ಲಿ ಫೋನ್ ಟ್ಯಾಪಿಂಗ್ ಕೂಡ ನಡೆಯುತ್ತಿದೆ. ಇದು ಲ್ಲಾ ಸರ್ಕಾರದಲ್ಲೂ ಸರ್ವೆ ಸಾಮಾನ್ಯವಾಗಿದೆ. ಆದರೆ ಈ ಸರ್ಕಾರದಲ್ಲಿ ಇದು ಎಷ್ಟರ ಮಟ್ಟಿಗೆ ಹೆಚ್ಚಾಗಿದೆ ಎಂಬುದು ಮುಖ್ಯ ಎಂದರು. ಕೆಲವರು ಫೋನ್ ಟ್ಯಾಪಿಂಗ್ ಮಾಡಿಯೂ ಪತಿವ್ರತೆ ತರಹ ವರ್ತಿಸುತ್ತಾರೆ. ಆದರೆ, ನಾನು ಸತ್ಯ ಹೇಳುತ್ತಿದ್ದೇನೆ ಅಷ್ಟೆ. ಅಧಿಕಾರ ಹಸ್ತಾಂತರ ಸಂಬಂಧ ಈ ಸರ್ಕಾರದಲ್ಲಿ ಫೋನ್ ಟ್ಯಾಪಿಂಗ್ ಸಹ ನಡೆಯುತ್ತಿದೆ ಎಂದು ಕುಮಾರಸ್ವಾಮಿ ಪುನರುಚ್ಚರಿಸಿದರು.

ಯುದ್ಧ ನಿಲ್ಲುವ ತನಕ ಕನ್ನಡಿಗರ ಕರೆ ತರುವುದು ಕಷ್ಟ

ಇರಾನ್ ಸೇರಿದಂತೆ ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧ ನಿಲ್ಲುವವರೆಗೂ ಅಲ್ಲಿ ಸಿಲುಕಿರುವ ಕನ್ನಡಿಗರನ್ನು ಕರೆ ತರುವುದು ಬಹಳ ಕಷ್ಟ. ವಿಮಾನ ಹಾರಾಟ ಆರಂಭವಾದರೆ ಎಲ್ಲರನ್ನೂ ಬಹುಬೇಗ ಸುರಕ್ಷಿತವಾಗಿ ತಾಯ್ನಾಡಿಗೆ ಕರೆ ತರಬಹುದು. ಆದರೆ ವಿಮಾನಗಳ ಹಾರಾಟ ಯಾವಾಗ ಆರಂಭವಾಗುತ್ತದೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಅಲ್ಲಿರುವ ಭಾರತೀಯರ ಸುರಕ್ಷತೆಗೆ ಒತ್ತು ಕೊಟ್ಟಿದೆ. ರಾಜ್ಯ ಸರ್ಕಾರ ಕೂಡ ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸುತ್ತಿದೆ. ಅಲ್ಲಿರುವ ಕನ್ನಡಿಗರ ಜೊತೆ ನಾನು ನಿರಂತರ ಸಂಪರ್ಕದಲ್ಲಿದ್ದೇನೆ. ಪ್ರವಾಸಿಗರು ಸೇರಿದಂತೆ ಅಲ್ಲಿ ವಾಸ ಮಾಡುತ್ತಿರುವ ಕನ್ನಡಿಗರಿಗೆ ಊಟ–ತಿಂಡಿ, ವಾಸ್ತವ್ಯ ಸಮಸ್ಯೆ ಆಗಿಲ್ಲ. ಈ ಮೂಲಕ ಸದ್ಯಕ್ಕೆ ಎಲ್ಲರೂ ಸುರಕ್ಷಿತರಾಗಿದ್ದು, ಅವರ ಬಗ್ಗೆ ಆತಂಕ ಬೇಡ

–ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮೈಸೂರಲ್ಲಿ ಮೊದಲ ಅಕ್ಕ ಕೆಫೆ ಉದ್ಘಾಟನೆ

- ಸಂಪೂರ್ಣ ಮಹಿಳೆಯರಿಂದಲೇ ನಿರ್ವಹಣೆ ಆಗುವ ಉಪಹಾರ ಮಳಿಗೆ
- ಮೈಸೂರು ಜಿಪಂ ಆವರಣದಲ್ಲಿ ಕ್ಯಾರೆಟ್ ಹಲ್ವಾ ಸವಿದ ಸಚಿವ, ಇತರ ಗಣ್ಯರು



ಮೈಸೂರಲ್ಲಿ ಸೋಮವಾರ ‘ಅಕ್ಕ ಕೆಫೆ’ ಉದ್ಘಾಟಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕ್ಯಾರೆಟ್ ಹಲ್ವಾ ಸವಿದರು.

ಮೈಸೂರು,ಮಾ.2(ಎಂಕೆ)–ಮೈಸೂರು ಜಿಲ್ಲಾ ಪಂಚಾಯತ್ ಆವರಣದಲ್ಲಿ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ಅಭಿಯಾನ ನೂತನವಾಗಿ ನಿರ್ಮಿಸಿರುವ ‘ಅಕ್ಕ ಕೆಫೆ(ಒಲವಿನ ಊಟ)’ಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಉದ್ಘಾಟಿಸಿದರು.

ಮಹಿಳಾ ಸ್ತ್ರೀ–ಶಕ್ತಿ ಸ್ವ–ಸಹಾಯ ಸಂಘಗಳ ಮೂಲಕ ಮಹಿಳೆಯರ ಸಬಲೀಕರಣದ ಸದುದ್ದೇಶದೊಂದಿಗೆ ರಾಜ್ಯ ಸರ್ಕಾರದ ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ಮೈಸೂರಿನಲ್ಲಿ ಮೊಟ್ಟ ಮೊದಲ ‘ಅಕ್ಕ ಕೆಫೆ’ಗೆ ಟೇಪ್ ಕತ್ತರಿಸಿ, ಕ್ಯಾರೆಟ್ ಹಲ್ವಾ, ಉಪ್ಪಿಟ್ಟು ಮತ್ತು ಕೇಸರಿಬಾತ್ ಸವಿಯುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.

ದುಡಿಯುವ ಮಹಿಳೆಯರಿಗೆ ಕೆಲಸ ನೀಡುವುದರ ಜತೆಗೆ, ಜನರಿಗೆ ಶುಚಿ–ರುಚಿ ಹಾರ ದೊರೆಯಬೇಕು ಎಂಬುದು ಅಕ್ಕ ಕೆಫೆಯ ಉದ್ದೇಶವಾಗಿದ್ದು, ಜಿಪಂ ಆವರಣದಲ್ಲಿರುವ ಅಕ್ಕ ಕೆಫೆಯ ನಿರ್ವಹಣೆ ಜವಾಬ್ದಾರಿಯನ್ನು ನಾಗವಾಲದ ಶ್ರೀ ಗಂಗಾ ಸ್ತ್ರೀ–ಶಕ್ತಿ ಮಹಿಳಾ ಸ್ವ–ಸಹಾಯ ಸಂಘಕ್ಕೆ ನೀಡಲಾಗಿದ್ದು, ಸಂಘದ ಐದು ಮಂದಿ ಸದಸ್ಯರು ಮೊದಲ ದಿನವೇ ರುಚಿಕರ ತಿನಿಸುಗಳನ್ನು ತಯಾರಿಸಿ, ನೀಡುವ ಮೂಲಕ ಗಮನ ಸೆಳೆದರು. 15 ಲಕ್ಷ ರೂ.ವೆಚ್ಚದಲ್ಲಿ ನಿರ್ಮಾಣಗೊಂಡಿರುವ ‘ಅಕ್ಕ ಕೆಫೆ’ಯ ನವೀಕರಣ, ನೆಲಹಾಸು, ಗೋಡೆಗಳು ಮತ್ತು ಚಾವಣಿ, ಶೇಖರಣಾ ಕ್ಯಾಬಿನೆಟ್‌ಗಳು, ನೀರಿನ ವ್ಯವಸ್ಥೆ, ಸಿಸಿಟಿವಿ ಕ್ಯಾಮೆರಾ, ರಶೀದಿ ಯಂತ್ರ, ಪೀಠೋಪಕರಣಗಳು, ಬ್ರ್ಯಾಂಡಿಂಗ್ ವ್ಯವಸ್ಥೆಗೆ ಸರ್ಕಾರ ಅನುದಾನ ನೀಡಲಿದೆ. ಕೆಫೆಗೆ ಬೇಕಾದ ಪಾತ್ರೆಗಳು, ಓವನ್, ಗ್ಯಾಸ್ ಸಿಲಿಂಡರ್, ಸ್ಟವ್, ಮಿಕ್ಸಿ, ಗ್ರೈಂಡರ್, ರೆಫ್ರಿಜರೇಟರ್‌ಗಳನ್ನು ಸ್ವಸಹಾಯ ಸಂಘದ ಸದಸ್ಯರು ಖರೀದಿಸಬೇಕು.

ಆದಾಯ ಹಂಚಿಕೆ: ಜಂಟಿ ಖಾತೆ ಮೂಲಕ ಅಕ್ಕಕೆಫೆಯ ಹಣಕಾಸು ವ್ಯವಹಾರ ನಡೆಯಲಿದ್ದು, ಮಹಿಳಾ ಸ್ವ–ಸಹಾಯ ಸಂಘದ ಐವರು ಸದಸ್ಯರೂ ಕೆಫೆಯ ಮಾಲೀಕರಾಗಿ ಬರುವ ಆದಾಯವನ್ನು ಸಮಾನವಾಗಿ ಹಂಚಿಕೊಳ್ಳಲಿದ್ದಾರೆ. ಅಕ್ಕ ಕೆಫೆ ಮೇಲ್ವಿಚಾರಣೆಯನ್ನು ಜಿಪಂ ಸಿಇಓ ನೋಡಿಕೊಳ್ಳಲಿದ್ದಾರೆ. ಬೆಳಿಗ್ಗೆ ಇಡ್ಲಿ, ವಡೆ, ಖಾರಾಬಾತ್, ಕೇಸರಿಬಾತ್, ಪೊಂಗಲ್, ಮಧ್ಯಾಹ್ನ ಮಿನಿಮಿಲ್ಸ್, ಚಪಾತಿ, ಮುದ್ದೆ ಊಟದ ಮೆನು ಇರಲಿದ್ದು, ಮೊದಲ ದಿನ ಉಪ್ಪಿಟ್ಟು, ಕೇಸರಿಬಾತ್, ಕ್ಯಾರೆಟ್ ಹಲ್ವಾ ಸಿದ್ಧಪಡಿಸಲಾಗಿತ್ತು. ಶಾಸಕ ತನ್ವೀರ್ ಸೇಠ್, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಮಾ.7ರಿಂದ ರಾಜ್ಯಮಟ್ಟದ ಅಟಲ್ ಜೀ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಲೋಹಿತ್ ಮಾತನಾಡಿದರು.

ಮೈಸೂರು,ಮಾ.2(ಜಿಎ)–ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್‌ಗೌಡ ಹುಟ್ಟುಹಬ್ಬದ ಅಂಗವಾಗಿ ಮಾ.7ಮತ್ತು 8ರಂದು ರಾಜ್ಯ ಮಟ್ಟದ ಅಟಲ್ ಜೀ ಪ್ರೀಮಿಯರ್ ಲೀಗ್ 30 ಯಾರ್ಡ್ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಹಿತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನೇಗೌಡನ ಟೈಗರ್ಸ್ ವತಿಯಿಂದ 2 ದಿನಗಳ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದ್ದು, ಕುವೆಂಪುನಗರದ ಶ್ರೀ ಮರುಳೇಶ್ವರ ದೇವಸ್ಥಾನದ ಮೈದಾನದಲ್ಲಿ ಪಂದ್ಯಾವಳಿಗಳು ನಡೆಯಲಿವೆ. ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ನಗದು ಹಾಗೂ ಟ್ರೋಫಿ ಬಹುಮಾನವಿದ್ದು, ಪ್ರಥಮ ಸ್ಥಾನಕ್ಕೆ 75 ಸಾವಿರ ರೂ., ದ್ವಿತೀಯ 50ಸಾವಿರ ರೂ., ತೃತೀಯ ಬಹುಮಾನವಾಗಿ 25ಸಾವಿರ ರೂ.ಗಳನ್ನು ನೀಡಲಾಗುವುದು. ಪ್ರತಿ ತಂಡಕ್ಕೆ 5000ರೂ. ಪ್ರವೇಶ ಶುಲ್ಕವಿರುತ್ತದೆ ಎಂದರು.

5 ಓವರ್ ಪಂದ್ಯಾವಳಿಯಾಗಿದ್ದು, ಒಬ್ಬರಿಗೆ 2 ಓವರ್, ಇನ್ನುಳಿದ ಮೂರು ಓವರ್‌ಗಳು ತಲಾ ಒಬ್ಬರಿಗೆ ಒಂದು, ಒಂದು ತಂಡಕ್ಕೆ 7 ಆಟಗಾರರಿಗೆ ಅವಕಾಶ, ತಂಡ ತಡವಾಗಿ ಪಂದ್ಯಾವಳಿಗೆ ಆಗಮಿಸಿದಲ್ಲಿ ವಾಕ್ ಓವರ್ ನೀಡಲಾಗುತ್ತದೆ. 20ಕ್ಕೂ ಹೆಚ್ಚು ತಂಡಗಳು ಭಾಗವಹಿಸುವ ನಿರೀಕ್ಷೆಗಳಿವೆ. ಹೆಚ್ಚಿನ ಮಾಹಿತಿಗಾಗಿ. 8095860195, 9880414702 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಚಿನ್, ಮೋಹನ್, ಕಿರಣ್, ಅನಿಲ್, ಪ್ರವೀಣ್, ಕಾರ್ತಿಕ್, ರವಿ ಉಪಸ್ಥಿತರಿದ್ದರು.

ಈ ನೆಲದ ಸಾಂಸ್ಕೃತಿಕ ಅರಿವು ಯುವ ಸಮೂಹಕ್ಕೆ ಇರಬೇಕಿದೆ

ನ್ಯಾಯಾಧೀಶ ಆನಂದ ಪಿ.ಹೊಗಡೆ ಅಭಿಮತ



ಮೈ ಭಾರತ್ ಹೆಸರಿನ ಅಂತರ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮಕ್ಕೆ ಮೈಸೂರು ಎಫ್‌ಟಿಎಸ್‌ಸಿ ಸೆಷನ್ ನ್ಯಾಯಾಧೀಶರಾದ ಆನಂದ್ ಪಿ.ಹೊಗಡೆ ಉದ್ಘಾಟಿಸಿದರು.

ಮೈಸೂರು,ಮಾ.2(ಎಸ್‌ಪಿಎನ್)–ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಹೀಗೆ ಸಂವಿಧಾನದ ಅಂಶಗಳನ್ನು ಯುವ ಸಮೂಹ ತಿಳಿದುಕೊಳ್ಳಬೇಕು. ಜೊತೆಗೆ ಈ ನೆಲದ ಸಾಂಸ್ಕೃತಿಕ ವಿಚಾರಗಳ ಅರಿವು ಯುವ ಸಮೂಹಕ್ಕೆ ಇರಬೇಕಿದೆ ಎಂದು ಮೈಸೂರು ಎಫ್‌ಟಿಎಸ್‌ಸಿ ಸೆಷನ್ ನ್ಯಾಯಾಧೀಶ ಆನಂದ್ ಪಿ.ಹೊಗಡೆ ಅಭಿಪ್ರಾಯಪಟ್ಟರು.

ಮೈಸೂರು ಜಿಪಂ ಸಭಾಂಗಣದಲ್ಲಿ ಕೇಂದ್ರದ ಯುವಜನ ವ್ಯವಹಾರ, ಕ್ರೀಡಾ ಸಚಿವಾಲಯ, ಮೈಸೂರು ಜಿಲ್ಲಾಡಳಿತ, ಜಿಪಂ ಸಹಯೋಗದಲ್ಲಿ ಏರ್ಪಡಿಸಿದ್ದ ಮೈ ಭಾರತ್ ಹೆಸರಿನ ಅಂತರ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು. ಯುವ ಜನತೆಗೆ ಶಿಕ್ಷಣ ಎಂದರೆ ಕೇವಲ ಪದವಿಯಷ್ಟೇ ಅಲ್ಲ. ನೀವು ನಿಮ್ಮ ಜಿಲ್ಲೆಗಳಿಗೆ ಬ್ರಾಂಡ್ ಅಂಬಾಸಿಡರ್ ಆಗಿ ಬದುಕುವುದು ಸಹ ಶಿಕ್ಷಣದ ಒಂದು ಭಾಗ. ಪ್ರಸ್ತುತ ಡಿಜಿಟಲ್ ಸೇಫ್ಟಿ, ಆರ್ಥಿಕ ಜ್ಞಾನ ಪ್ರಮುಖವಾಗಿ ಯುವಸಮೂಹಕ್ಕೆ ಇರಬೇಕು. ಈ ಹಿಂದೆ ಪೋಷಕರು ಗಿಫ್ಟ್ ಡೀಡ್ ಮಾಡಿಕೊಟ್ಟರೆ ಮಕ್ಕಳಿಗೆ ಆಸ್ತಿ ಸೇರುತ್ತಿತ್ತು. ಆದರೆ, ಈಗ ಪರಿಸ್ಥಿತಿ ಹಾಗಿಲ್ಲ. ಗಿಫ್ಟ್ ಡೀಡ್ ರಿಮೂವ್ ಆಗುತ್ತದೆ. ಮೈಂಟೆನೆನ್ಸ್ ಆಫ್ ಸೀನಿಯರ್ ಸಿಟಿಜನ್‌ನಡಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರೆ ಮಗನಿಗೆ ಆಸ್ತಿ ಹೋಗಿದ್ದರೂ ಅದು ಹಿಂದಕ್ಕೆ ಬರಲಿದೆ ಇಂತಹ ಕನಿಷ್ಠ ಕಾನೂನು ಅರಿವು ಯುವ ಸಮೂಹಕ್ಕೆ ಇರಬೇಕಿದೆ ಎಂದರು. ಜಿಲ್ಲಾ ಯುವಜನ ಅಧಿಕಾರಿ ಪಿ.ಅಖಿಲ್, ಮೈಸೂರು ವಿವಿ ನಿವೃತ್ತ ಕುಲಪತಿ ಪ್ರೊ.ಪದ್ಮಾಶೇಖರ್, ಕನ್ನಡ ಸಂಶೋಧನಾ ಸಂಸ್ಥೆ ನಿರ್ದೇಶಕಿ ಪ್ರೊ.ಲೋಲಾಕ್ಷಿ, ಸಂಪನ್ಮೂಲ ವ್ಯಕ್ತಿ ಇಮ್ರಾನ್ ಅಹ್ಮದ್ ಬೇಗ್, ಗುರುಪ್ರಸಾದ್, ಅಮಿತ್‌ಕುಮಾರ್, ಚಿರಂಜೀವಿ, ಮಹದೇವ್ ಇನ್ನಿತರರು ಉಪಸ್ಥಿತರಿದ್ದರು.

550 ಪೋಕ್ಸೋ ಪ್ರಕರಣ: ಆತಂಕಕಾರಿ

ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹ ಹೆಚ್ಚಾಗುತ್ತಿದೆ. ಅದರಲ್ಲೂ ಎಚ್.ಡಿ.ಕೋಟೆ, ಹುಣಸೂರು ತಾಲ್ಲೂಕಿನ ಹಾಡಿಗಳಲ್ಲಿ ಹುಡುಗ ಹುಡುಗಿಯನ್ನು ಕಾಡಿಗೆ ಕರೆದೊಯ್ದರೆ ಮದುವೆ ಮಾಡಿಸುವ ಸಂಪ್ರದಾಯ ಜೀವಂತವಾಗಿದೆ. ಹೀಗೆ ಅರಿವಿಲ್ಲದ ಮದುವೆಯಾಗಿ ಕೊನೆಗೆ 9 ತಿಂಗಳ ಗರ್ಭಿಣಿಯಾಗಿ ಆಸ್ಪತ್ರೆಗೆ ಹೋದಾಗ ಬಾಲ್ಯ ವಿವಾಹ ಬೆಳಕಿಗೆ ಬಂದಿದೆ. ಆಗ ಯುವಕನನ್ನು ಜೈಲಿಗೆ ಹಾಕುವ ಸ್ಥಿತಿ ಎದುರಾಗಿದೆ. ಆತ ಅಮಾಯಕನಾಗಿದ್ದರೂ ಕೊಲೆ ಮಾಡಿದ, ವ್ಯಸನಿಗಳ ಜತೆ ಶಿಕ್ಷೆ ಅನುಭವಿಸಬೇಕಾದ ಸ್ಥಿತಿ ಬಂದಿದೆ. ಮೈಸೂರು ಜಿಲ್ಲೆ ಪೋಕ್ಸೋ ವಿಶೇಷ ನ್ಯಾಯಾಲಯದಲ್ಲಿ 550 ಪೋಕ್ಸೋ ಪ್ರಕರಣಗಳಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ವಿಚಾರಗಳ ಬಗ್ಗೆ ಯುವ ಸಮೂಹ ಸಮಾಜದಲ್ಲಿ ಜಾಗೃತಿ ಮೂಡಿಸುವ ಸಾಮಾಜಿಕ ಜವಾಬ್ದಾರಿ ತೋರಬೇಕಿದೆ.

–ನ್ಯಾ.ಆನಂದ್ ಪಿ.ಹೊಗಡೆ, ಎಫ್‌ಟಿಎಸ್‌ಸಿ ಸೆಷನ್ ನ್ಯಾಯಾಧೀಶ

ಚಿಕಿತ್ಸೆಗೆ ನೆರವು....



ಮೈಸೂರು ತಾಲೂಕು ಜಯಪುರ ಗ್ರಾಮದ ಟೈಲರ್ ರವಿ ಎಂಬುವವರಿಗೆ ಎರಡು ಕಿಡ್ನಿಗಳು ವಿಫಲಗೊಂಡಿದ್ದು, ಅವರ ಪತ್ನಿ ವೇದಾವತಿ ಒಂದು ಕಿಡ್ನಿ ನೀಡುತ್ತಿದ್ದು, ಚಿಕಿತ್ಸಾ ವೆಚ್ಚಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ವೈಯುಕ್ತಿಕವಾಗಿ 50 ಸಾವಿರ ರೂ. ನೆರವಿನ ಚೆಕ್ ಅನ್ನು ಶಾಸಕ ಜಿ.ಟಿ.ದೇವೇಗೌಡ ಪತ್ನಿ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರ ಮೂಲಕ ಹಸ್ತಾಂತರಿಸಿದರು. ಈ ವೇಳೆ ಮುಖಂಡರಾದ ದಾರಿಪುರ ಬಸವಣ್ಣ, ಜವರನಾಯಕ ಮತ್ತು ರಂಗಸ್ವಾಮಿ ಉಪಸ್ಥಿತರಿದ್ದರು.

ಮೈಸೂರಿನ ಯೋಗಾಚಾರ್ಯರಿಗೆ ಗೌರವ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಚೇರಿ ಬೆಂಗಳೂರಿನ ಗಾಯತ್ರಿ ಭವನದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ, ಸಾಧಕರಿಗೆ ಗೌರವ ಕಾರ್ಯಕ್ರಮದಲ್ಲಿ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಘದ ಅಧ್ಯಕ್ಷ ಮೈಸೂರಿನ ಯೋಗಾಚಾರ್ಯ ಡಾ.ಪಿ.ಎನ್.ಗಣೇಶ್‌ಕುಮಾರ್ ಅವರನ್ನು ಮಹಾಸಭಾದ ರಾಜ್ಯಾಧ್ಯಕ್ಷ ಎಸ್.ರಘುನಾಥ್ ಗೌರವಿಸಿದರು. ಹಿರಿಯ ಉಪಾಧ್ಯಕ್ಷ ಲಕ್ಷ್ಮೀಕಾಂತ್, ಪ್ರಧಾನ ಕಾರ್ಯದರ್ಶಿ ಡಾ.ಎನ್.ಸತ್ಯಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

ನಿಧನ

ಮಂಗಳಾ



ಮೈಸೂರು, ಮಾ.2–ಮೈಸೂರಿನ ದೇವರಾಜ ಮೊಹಲ್ಲಾ ನಿವಾಸಿ ಮಂಗಳಾ (60) ಅವರು ಸೋಮವಾರ ಬೆಳಗ್ಗೆ ನಿಧನರಾದರು. ಇವರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.3.2026 ಮಂಗಳವಾರ, ಮಳೆ ನಕ್ಷತ್ರ: ಶತಭಿಷ 19.02.2026ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನಲ್ಲಿ ಸೋಂಕು ಶಿಬಿರ, ಕಣ್ಣಿನಲ್ಲಿ ಮಾಂಸ ಬೆಳವಣಿಗೆ, ಮತ್ತು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ನೀರು ಸೋರುವುದು, ಕಣ್ಣು ತುರಿಸುವುದು, ಶುಷ್ಕನೇತ್ರ, ಮಕ್ಕಳಲ್ಲಿ ಕಂಡುಬರುವ ಕಲಿಕೆಯಲ್ಲಿನ ಸಮಸ್ಯೆಗಳು ಹಾಗೂ ಏಕಾಗ್ರತೆಯ ಕೊರತೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ
- **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ :** ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಸಂತ ಫಿಲೋಮಿನಾ ಕಾಲೇಜು (ಸ್ವಾಯತ್ತ), ಕನ್ನಡ ವಿಭಾಗ ಮತ್ತು ನವ ಕರ್ನಾಟಕ ಪ್ರಕಾಶನ ಮೈಸೂರು:** ಬೃಹತ್ ಪುಸ್ತಕ ಪ್ರದರ್ಶನ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10 ಗಂಟೆಗೆ.
- **ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಕರ್ನಾಟಕ ರಾಜ್ಯ ರೇಷ್ಮೆ ಇಲಾಖೆ :** ರೇಷ್ಮೆ ಕೃಷಿ ಮೇಳ, ಸ್ಥಳ: ಅನುಗ್ರಹ ಸಮುದಾಯ ಭವನ, ಹೆಚ್.ಡಿ.ಕೋಟೆ ರಸ್ತೆ, ಉದ್ಬೂರು, ಬೆಳಗ್ಗೆ 10.30ಕ್ಕೆ.
- **ಅನ್ವೇಷಣಾ ಸೇವಾ ಟ್ರಸ್ಟ್ :** ಚುಟುಕುರತ್ನ ಡಾ. ಎಂ. ಅಕಬರ ಅಲಿ 101ನೇ ಹುಟ್ಟುಹಬ್ಬ, ಅರಸು ಪತ್ರಿಕೆ 13ನೇ ವರ್ಷದ ವಿಶೇಷ ಸಂಚಿಕೆ ಬಿಡುಗಡೆ ಸಮಾರಂಭ, ಉದ್ಘಾಟನೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾವ್, ಅಕಬರ ಅಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಮಾಜಿ ಸಚಿವ ಎಂ. ಶಿವಣ್ಣ, ಅಧ್ಯಕ್ಷತೆ : ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವಿಶ್ರಾಂತ ಜಂಟಿ ನಿರ್ದೇಶಕ ಶ್ರೀನಿವಾಸ ಬಹದ್ದೂರ್, ಉಪಸ್ಥಿತರು : ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ. ಎಂ.ಜಿ.ಆರ್. ಅರಸ್, ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ. ಬಿ.ಆರ್. ನಟರಾಜ ಜೋಯಿಸ್, ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥ ರಾಜೇ ಅರಸ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗೆ 10.45ಕ್ಕೆ.
- **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ ಚಂದ್ರಗ್ರಹಣ ಗೋಚರವಾಗುವುದರಿಂದ ಧಾರ್ಮಿಕ ಕಾರ್ಯಕ್ರಮಗಳು ಇರುವುದಿಲ್ಲ. ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೆಪೇಟೆ.
- **ಸಪಸ ಸಂಗೀತ ವಿದ್ಯಾಲಯ :** ಚಲನಚಿತ್ರಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11 ಮತ್ತು ಸಂಜೆ 5 ರಿಂದ.
- **ಶ್ರೀ ಕೈವಾರ ತಾತಯ್ಯ ಬಣಜಿಗ (ಬಲಿಜ) ಯುವಕರ ಸಂಘ :** ಕಾಲಜ್ಞಾನಿ ಕೈವಾರ ತಾತಯ್ಯನವರ (ಯೋಗಿ ನಾರಾಯಣ ಯತೀಂದ್ರ)ರ 300ನೇ ಜಯಂತ್ಯೋತ್ಸವ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕರಾದ ಹರೀಶ್‌ಗೌಡ, ಎಚ್. ವಿಶ್ವನಾಥ್, ಮಾಜಿ ಸಂಸದ ಪ್ರತಾಪ್ ಸಿಂಹ, ಮೈಲ್ಯಾಕ್ ಮಾಜಿ ಅಧ್ಯಕ್ಷ ಎಚ್.ಎ. ವೆಂಕಟೇಶ್, ಜೈನಗರ ಬಣಜಿಗ ಸಂಘದ ಅಧ್ಯಕ್ಷರಾದ ಮೀನಾ ತೂಗುದೀಪ್, ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಪರಮೇಶ್‌ಗೌಡ, ಸ್ಥಳ: ಡಿ. ದೇವರಾಜ ಅರಸು ರಸ್ತೆ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಚಕೋರ ಸಾಹಿತ್ಯ ವಿಚಾರ ವೇದಿಕೆ :** ಮಹಿಳಾ ದಿನಾಚರಣೆ–ವಿಶೇಷ ಉಪನ್ಯಾಸ ಮಾಲಿಕೆ–12, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ : ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷರು, ವಿಶ್ರಾಂತ ಕುಲಪತಿ ಡಾ. ಸಬಿಹಾ ಭೂಮಿಗೌಡ, ಅಧ್ಯಕ್ಷತೆ : ಅಕಾಡೆಮಿ ಅಧ್ಯಕ್ಷ ಪ್ರೊ. ಎಲ್.ಎನ್. ಮುಕುಂದರಾವ್, ಸ್ಥಳ: ಬಿಜಿಎಸ್ ಬಿ.ಇಡಿ ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಪಿ.ಆರ್. ತಿಪ್ಪೇಸ್ವಾಮಿ ಪೀಠದ ವತಿಯಿಂದ ಜಲವರ್ಣ ಚಿತ್ರ ರಚನಾ ಸ್ಪರ್ಧೆ, ವಿಷಯ : ಪರಿಸರ ರಕ್ಷಣೆ, ಬಹುಮಾನ ವಿತರಣಾ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಆರ್. ಸುನಂದಮ್ಮ, ಉಪಸ್ಥಿತರು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ. ಎನ್.ಕೆ. ಲೋಲಾಕ್ಷಿ, ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 12ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಖೇಡಾ ವೇದವ್ಯಾಸಚಾರ್ ಅವರಿಂದ ರುಕ್ಮೇಶ ವಿಜಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀ ಪುರಂ, ಸಂಜೆ 5 ರಿಂದ.
- **ಪರಂಪರೆ ಸಂಸ್ಥೆ, ಸುಧರ್ಮಾ ಸಂಸ್ಕೃತ ದಿನ ಪತ್ರಿಕೆ:** ಉಪನ್ಯಾಸ ಸರಣಿ, ಶಾರದಾ ಕಲಾಕೇಂದ್ರದಿಂದ ವಾಚನ, ವಿದ್ವಾನ್ ಡಾ.ಹೆಚ್.ವಿ.ನಾಗಾರಾಜರಾವ್ ಅವರಿಂದ ಶ್ರೀ ವೇದಾಂತ ದೇಶಿಕರಿಂದ ವಿರಚಿತ ಶ್ರೀ ಪಾದುಕಾಸಹಸ್ರಂ ಕುರಿತು ಉಪನ್ಯಾಸ. ಸ್ಥಳ: ಶ್ರೀನಿವಾಸ ಪದ್ಮಜಾರಾವ್ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ, ರಾಘವೇಂದ್ರ ಸ್ವಾಮಿ ಮಠದ ಪಕ್ಕ, ಕೃಷ್ಣಮೂರ್ತಿಪುರಂ, ಸಂಜೆ 6 ಗಂಟೆಗೆ.
- **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–289, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಕಾರ್ತಿಕ್ ಮತ್ತೂರ್ ಅವರಿಂದ ಗಾಯನ, ವಿದ್ವಾನ್ ಅನಿರುದ್ಧ ಭಾರದ್ವಾಜ್–ವಯೋಲಿನ್, ವಿದ್ವಾನ್ ಫಣೀಂದ್ರ ಭಾಸ್ಕರ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತುಸಂಜೆ 6.10 ಸಾಧಕರ ಸೋಪಾನ– ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಹಂಸಿನಿ ಎಸ್. ಕುಮಾರ್ ಹಾಗೂ ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಭಾಷಾಂತರ ಅಧ್ಯಯನ ಮತ್ತು ವಿದೇಶಿ ಭಾಷಾ ಅಧ್ಯಯನ ಕುರಿತು ವಿಭಾಗದ ಸಂಯೋಜಕರಾದ ಡಾ. ಅವರೆಕಾಡು ವಿಜಯಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಲಕ್ಷ್ಮೀ ನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 9.05 ಜೀವ ಜಗತ್ತು–ವಿಶ್ವ ವನ್ಯಜೀವಿ ದಿನದ ಸಂದರ್ಭದಲ್ಲಿ ವಿಶೇಷ ರೂಪಕ, ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಗೀತಾ ವೈ ಪುಟ್ಟಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ–ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ ಬಿ.ಜಿ. ಕವಿತಾ ಹಾಗೂ ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ವೈಷ್ಣವಿ ದತ್ತ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಹರಿಣಾಕ್ಷಿ ಜಿ.ಎಸ್., 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಾಲಾಜಿ ಶಂಕರ್ – ಹಾಡುಗಾರಿಕೆ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ –ಉಮಂಗ್, 4.00 ಕಥಾಕಾಲಕ್ಷೇಪ, ಮಾರುತಿ ವಿಜಯ, ಪ್ರಸ್ತುತಿ–ವಿದ್ವಾನ್ ಗುರುರಾಜುಲು ನಾಯ್ಡು, 5.00 ಪ್ರಾಯೋಜಿತ ಕಾರ್ಯಕ್ರಮ : ನಿರಾಮಯ–ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು. ಭಾಗವಹಿಸುತ್ತಾರೆ–ಡಾ. ದತ್ತಾತ್ರಿ .ಹೆಚ್. ಎ., ವಿಷಯ–ಶ್ರವಣ ದೋಷದ ನಿರ್ವಹಣೆ, ಪ್ರಸ್ತುತಿ–ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ ಗಿರೀಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನುಗಾರಿಕಾ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನ ಕುರಿತ ನೇರ ಫೋನ್–ಇನ್ ಕಾರ್ಯಕ್ರಮ ಭಾಗವಹಿಸುತ್ತಾರೆ–ಮೀನುಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾದ ಓ. ಗಿರೀಶ್ ಮತ್ತು ಉಪ ನಿರ್ದೇಶಕರಾದ ಜಿ. ಎಚ್. ಮಂಜುನಾಥ್, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ–ದಿಗ್ವಿಜಯ್ ಬಿ., 8.00 ನಾಟಕ– ಕಾಲಗರ್ಭದ ಕಾಲುಹಾದಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಅಮೃತ ವೆಂಕಟೇಶ್ – ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆಯಾಗದಂತೆ ಕ್ರಮ ಕೈಗೊಳ್ಳಿ

■ ಅಧಿಕಾರಿಗಳಿಗೆ ಸಚಿವ ಡಾ.ಮಹದೇವಪ್ಪ ಸೂಚನೆ ■ ಬೋರ್‌ವೆಲ್ ಸ್ಥಿತಿಗತಿ ಸುಧಾರಿಸಿ; ಸಜ್ಜಾಗಿರಿ



ಮೈಸೂರು ಜಿಲ್ಲಾ ಪಂಚಾಯಿತಿಯ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಕುಡಿಯುವ ನೀರಿನ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಮಾ.2(ಎಂಕೆ)– ಬೇಸಿಗೆ ಆರಂಭವಾಗುತ್ತಿದೆ. ಜಿಲ್ಲೆಯಾದ್ಯಂತ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ಮೈಸೂರು ಜಿಪಂ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಕುಡಿಯುವ ನೀರಿನ ಕುರಿತು ಸೋಮವಾರ ಅಧಿಕಾರಿಗಳ ಸಭೆ ನಡೆಸಿದ ಅವರು, ಗ್ರಾಮಗಳ ಪಟ್ಟಿ ತಯಾರಿಸಿ, ತಾಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಗಳೊಂದಿಗೆ ಕಾರ್ಯನಿರ್ವಹಿಸುವ ಮೂಲಕ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರವಹಿಸಿ ಎಂದರು.

ಕಳೆದ ವರ್ಷ ಕೊರೆಯಲಾದ ಹಾಗೂ ಲಭ್ಯವಿರುವ ಬೋರ್‌ವೆಲ್‌ಗಳ ಸ್ಥಿತಿ–ಗತಿ ಪರಿಶೀಲಿಸಿ, ಖಾಸಗಿ ಬೋರ್‌ವೆಲ್‌ಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಕುಡಿಯುವ ನೀರಿನ ಸಮಸ್ಯೆಯಾದ ಕೂಡಲೇ ಕಾರ್ಯೋನ್ಮುಖರಾಗುವಂತೆ ತಿಳಿಸಿದರು. ಅಲ್ಲದೆ ಬೇಸಿಗೆಯಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಿದ್ದು, ಆರೋಗ್ಯ ಇಲಾಖೆಯೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಜೆಜೆಎಂ (ಜಲ ಜೀವನ್ ಮಿಷನ್) ಹಾಗೂ ಎಂವಿಎಸ್(ಬಹುಗ್ರಾಮ) ಯೋಜನೆ ಕಾರ್ಯನಿರ್ವಹಣೆ ಬಗ್ಗೆ ಅಧಿಕಾರಿಗಳು ಪರಿಶೀಲಿಸಬೇಕು. ಮುಂದೆ ಬರಗಾಲ ಉಂಟಾದರೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳು ಸಭೆ ನಡೆಸಿ ಬೇಕಿರುವ ಅನುದಾನದ ಬಗ್ಗೆ ವರದಿ ಸಿದ್ಧಪಡಿಸಿ ಎಂದು ತಿಳಿಸಿದರು.

13 ಎಂಎಲ್‌ಡಿ ನೀರಿಗೆ ಪ್ರಸ್ತಾವನೆ: ನಗರ ಸ್ಥಳೀಯ ಸಂಸ್ಥೆಗಳ ಯೋಜನಾ ನಿರ್ದೇಶಕಿ ಪ್ರಿಯದರ್ಶಿನಿ ಮಾತನಾಡಿ, ಮೈಸೂರಿನ ರಮ್ಮನಳ್ಳಿ, ಬೋಗಾದಿ, ಕಡಕೊಳ ಹಾಗೂ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬೇಕಿರುವ 13 ಎಂಎಲ್‌ಡಿ ನೀರಿಗೆ ಕಬಿನಿ ಯೋಜನೆಯಡಿ ಒದಗಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಜೂನ್‌ವರೆಗೆ ತೊಂದರೆಯಿಲ್ಲ

ಅಣೆಕಟ್ಟೆಯಲ್ಲಿರುವ ನೀರಿನ ಲಭ್ಯತೆ ಅನುಸಾರ ಜೂನ್ ಅಂತ್ಯದವರೆಗೂ ಕುಡಿಯುವ ನೀರಿಗೆ ತೊಂದರೆಯಿಲ್ಲ. ವಾಡಿಕೆ ಪ್ರಕಾರ ಮಳೆ ನಿರೀಕ್ಷಿಸಲಾಗಿದೆ. –ಮಹೇಶ್, ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್

ಟಿ.ನರಸೀಪುರ ರೇಷ್ಮೆ ನೂಲು ಬಿಚ್ಚುವ ಘಟಕ ಮುಚ್ಚುವ ಪ್ರಶ್ನೆಯೇ ಇಲ್ಲ

ಇದನ್ನು ಅನ್ಯ ಉದ್ದೇಶಕ್ಕೆ ಬಳಸುವ ಚಿಂತನೆ ಇಲ್ಲ: ಸಚಿವ ಡಾ.ಮಹದೇವಪ್ಪ

ಮೈಸೂರು, ಮಾ.2(ಎಂಕೆ)– ಟಿ.ನರಸೀಪುರದಲ್ಲಿರುವ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ (ಕೆಎಸ್‌ಐಸಿ) ರೇಷ್ಮೆ ನೂಲು ಬಿಚ್ಚುವ ಘಟಕವನ್ನು ಮುಚ್ಚಿ ಅನ್ಯ ಉದ್ದೇಶಕ್ಕೆ ಬಳಸುವ ಯಾವುದೇ ನಿಲುವು ಸರ್ಕಾರದ ಮುಂದಿಲ್ಲ. ರಾಜ್ಯ ಸರ್ಕಾರದ ಮೊದಲ ಆದ್ಯತೆಯೇ ಕೆಎಸ್‌ಐಸಿ ಘಟಕ ಉಳಿಸುವುದು. ಕಾರ್ಮಿಕರಿಗೆ ತೊಂದರೆಯಾಗದಂತೆ ಸಿಲ್ಕ್ ಉತ್ಪಾದನೆ ಹೆಚ್ಚಿಸುವುದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿದರು.

ಮೈಸೂರಿನಲ್ಲಿ ಸೋಮವಾರ ಟಿ.ನರಸೀಪುರದಲ್ಲಿರುವ ಕೆಎಸ್‌ಐಸಿ ರೇಷ್ಮೆ ನೂಲು ಬಿಚ್ಚುವ ಘಟಕದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ವಿರೋಧ ವ್ಯಕ್ತವಾಗಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಸಿಲ್ಕ್ ಉತ್ಪಾದನೆ ಬಿಟ್ಟು, ಕ್ರೀಡೆಗೆ ಜಾಗ ಕೊಡಲು ಸಾಧ್ಯವೇ. ಕೆಎಸ್‌ಐಸಿ ಘಟಕದ ಸ್ಥಳದಲ್ಲಿ ಕ್ರೀಡಾಂಗಣ ನಿರ್ಮಾಣ ಸಾಧ್ಯವಾಗದಿದ್ದರೆ, ಪರ್ಯಾಯ ಮಾರ್ಗ ಹುಡುಕಿಕೊಳ್ಳಬಹುದು. ಆದರೆ, ಈ ವಿಷಯದಲ್ಲೂ ರಾಜಕಾರಣ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಟಿಪ್ಪು ಇದ್ದಾಗ ಭಾರತ ದೇಶಕ್ಕೆ ರೇಷ್ಮೆಯನ್ನು ತಂದಿದ್ದು. ನಂತರ ಮೈಸೂರು ಒಡೆಯರು ಮೈಸೂರು ಸಿಲ್ಕ್ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿಗಳಿಸುವಂತೆ ಮಾಡಿದರು. ಆದ್ದರಿಂದ ಯಾವುದೇ ಕಾರಣಕ್ಕೂ ಕೆಎಸ್‌ಐಸಿ ಕಾರ್ಖಾನೆ ಮುಚ್ಚಿಸುವುದಿಲ್ಲ... ಸ್ಥಗಿತಗೊಳಿಸುವುದೂ ಇಲ್ಲ... ಅನಾವಶ್ಯಕವಾಗಿ ರಾಜಕೀಯ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ ಎಂದರು.



ಡಾ.ಮಹದೇವಪ್ಪ

ಈಗಾಗಲೇ ರೇಷ್ಮೆ ಸಚಿವರೊಂದಿಗೆ ಕೆಎಸ್‌ಐಸಿ ಅಧಿಕಾರಿಗಳೊಂದಿಗೆ ಮತ್ತು ಕಾರ್ಮಿಕರೊಂದಿಗೂ ಮಾತನಾಡಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸ್ಥಳ ಪರಿಶೀಲನೆ ನಡೆಸಿ, ಸಭೆ ನಡೆಸಿ, ಚರ್ಚಿಸಿ ಕೆಎಸ್‌ಐಸಿ ಘಟಕಕ್ಕೆ ಮತ್ತು ಕಾರ್ಮಿಕರಿಗೆ ಸಣ್ಣ ಸಮಸ್ಯೆ ಯಾದರೂ ಕ್ರೀಡಾಂಗಣ ಯೋಜನೆ ಕೈ ಬಿಡುವಂತೆ ಸೂಚಿಸಲಾಗಿದೆ. ಸರ್ಕಾರದ ಮೊದಲ ಆದ್ಯತೆ ಕೆಎಸ್‌ಐಸಿ ಘಟಕವಾಗಿದೆ. ಇದನ್ನು ಸ್ಥಗಿತಗೊಳಿಸಿ, ಅಡಚಣೆ ಮಾಡಿ, ಕ್ರೀಡಾಂಗಣ ಮಾಡುವ ಮಹತ್ತರ ಉದ್ದೇಶ ಸರ್ಕಾರದ ಮುಂದಿಲ್ಲ. ಅದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವ ಅಗತ್ಯವೂ ಇಲ್ಲ ಎಂದು ಸಚಿವರು ತಿಳಿಸಿದರು.

ಹೈಕಮಾಂಡ್ ನಿರ್ಧಾರವೇ ಅಂತಿಮ: ಸಿಎಂ ಬದಲಾವಣೆ ಮತ್ತು ಪಕ್ಷದೊಳಗಿನ ಗೊಂದಲ ಕುರಿತು ಪ್ರತಿಕ್ರಿಯಿಸಿದ ಅವರು, ಪಕ್ಷದಲ್ಲಿ ಮತ್ತು ಸಿಎಂ ಬದಲಾವಣೆಯಲ್ಲಿ ಯಾವುದೇ ಬದಲಾವಣೆಯಾಗಬೇಕಾದರೂ ಪಕ್ಷದ ಹೈಕಮಾಂಡ್ ಸೂಚಿಸಬೇಕು. ಹಾಗಾಗಿ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದರು.

ಕಾನೂನಾತ್ಮಕವಾಗಿ ಜಾರಿ: ಪರಿಶಿಷ್ಟ ಜಾತಿ ಒಳಮೀಸಲಾತಿ ಕುರಿತು ಮಾತನಾಡಿದ ಸಚಿವರು, ಒಳ ಮೀಸಲಾತಿ ಹಂಚಿಕೆ ಸಂವಿಧಾನ ಮತ್ತು ಕಾನೂನಿಗೆ ಬದ್ಧವಾಗಿ ನಡೆದಿದೆ. ಕಾನೂನಾತ್ಮಕವಾಗಿಯೇ ಜಾರಿಯಾಗಲಿದೆ. ಪ್ರಜಾಪ್ರಭುತ್ವದಲ್ಲಿ ಟೀಕೆಗಳಿಗೆ ಅವಕಾಶವಿದೆ. ಟೀಕೆ ಮಾಡುವವರು ಮಾಡಲಿ ಎಂದರು.

ಕನ್ನಡಿಗರ ರಕ್ಷಣೆಗೆ ಸರ್ಕಾರ ಬದ್ಧ...!

ಇರಾನ್–ಇಸ್ರೇಲ್ ನಡುವಿನ ಯುದ್ಧದಿಂದಾಗಿ ವಿದೇಶಗಳಲ್ಲಿ ಸಿಲುಕಿರುವ ಕನ್ನಡಿಗರನ್ನು ರಕ್ಷಣೆ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮೈಸೂರಿನವರು ಸಿಲುಕಿಕೊಂಡಿದ್ದಾರೆ ಎಂಬುದರ ಮಾಹಿತಿ ಇಲ್ಲ. ಒಟ್ಟಾರೆ ರಾಜ್ಯದ ಜನತೆಯ ರಕ್ಷಣೆ ಸರ್ಕಾರದ ಜವಾಬ್ದಾರಿ. –ಡಾ.ಹೆಚ್.ಸಿ.ಮಹದೇವಪ್ಪ, ಸಚಿವ

ಮಾ.11ಕ್ಕೆ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದಿಂದ ಪ್ರತಿಭಟನೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪರಿಗೆ ಮನವಿ ಸಲ್ಲಿಕೆ



ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಮಾ.2(ಎಂಕೆ)– ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಇಲಾಖೆಯಿಂದ ಔಷಧಿಗಳನ್ನು ಸರಬರಾಜು ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ವತಿಯಿಂದ ಮಾ.11ರಿಂದ ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಮುಷ್ಕರ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದು, ಅನಿವಾರ್ಯವಾಗಿ ಅನಿರ್ದಿಷ್ಟಾವಧಿ ಮುಷ್ಕರವನ್ನು ಕೈಗೊಳ್ಳಲಾಗಿದೆ. ಮಾ.11ರಿಂದ 15ರವರೆಗೆ ತುರ್ತುಚಿಕಿತ್ಸೆ ಹೊರತು ಎಲ್ಲಾ ಓಪಿಡಿಗಳ ಚಿಕಿತ್ಸೆ ಬಂದ್ ಆಗಲಿದೆ. ಮಾ.16ರ ನಂತರ ಸಂಪೂರ್ಣವಾಗಿ ಕರ್ತವ್ಯಕ್ಕೆ ಗೈರಾಗುವುದಾಗಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಮಹಮದ್ ಸಿರಾಜ್ ಅಹಮದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಮುಷ್ಕರದ ಮೊದಲ ಹಂತವಾಗಿ ಸಚಿವರು, ಶಾಸಕರಿಗೆ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮನವಿ ಪತ್ರ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ ಮನವಿ ಪತ್ರ ನೀಡಿದ್ದೇವೆ. ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಗುತ್ತಿಗೆ ನೌಕರರ, ಶುಶ್ರೂಶಕಿಯರು ಹಾಗೂ ಎಲ್ಲಾ ವಿಭಾಗದ ವೈದ್ಯಾಧಿಕಾರಿಗಳು ಬೆಂಬಲ ನೀಡಿದ್ದಾರೆ ಎಂದರು.

ಉಚಿತ ಶ್ವಾಸಕೋಶ ತಪಾಸಣೆ ಶಿಬಿರ

ಮೈಸೂರು,ಮಾ.2–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಮಾ.3ರಿಂದ 10ರವರೆಗೆ ಉಚಿತ ಶ್ವಾಸಕೋಶ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ದೀರ್ಘಕಾಲದ ಕೆಮ್ಮು ಅಥವಾ ನೆಗಡಿ, ಉಸಿರಾಡಲು ತೊಂದರೆ, ಅಸ್ತಮಾ, ಅಲರ್ಜಿ, ನಿದ್ರಿಸುವಾಗ ಗೊರಕೆ ಹೊಡೆಯುವುದು, ಶ್ವಾಸಕೋಶದ ಸೋಂಕುಗಳು, ಟಿ.ಬಿ. ಮುಂತಾದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ವೈದ್ಯರು ಸೂಚಿಸಿದ ಪರೀಕ್ಷೆಗಳಿಗೆ 30% ರಿಯಾಯತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು.

ಮಾ.7ರಂದು ನಿರ್ಗಮನ ಪಥ ಸಂಚಲನ ಕಾರ್ಯಕ್ರಮ

ಮೈಸೂರು, ಮಾ.2– ಮೈಸೂರು ಪೊಲೀಸ್ ತರಬೇತಿ ಶಾಲೆ ಬುನಾದಿ ತರಬೇತಿ ಪಡೆಯುತ್ತಿರುವ 10ನೇ ತಂಡದ 40 ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮವನ್ನು ಮಾ.7 ರಂದು ಬೆಳಿಗ್ಗೆ 8:30 ಗಂಟೆಗೆ ಪೊಲೀಸ್ ತರಬೇತಿ ಶಾಲೆಯ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆಗಮಿಸಲಿದ್ದಾರೆ. ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

ಕಾಡಿನ ಜೀವಗಳ ನಾಡಿಗೆ ಒಗ್ಗಿಸುವುದೇ ದೊಡ್ಡ ಸವಾಲು

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಅಭಿಮತ



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಬುಡಕಟ್ಟು ಸಮುದಾಯದ ಸಮಸ್ಯೆಗಳ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೈವಿವಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಉದ್ಘಾಟಿಸಿದರು.

ಮೈಸೂರು,ಮಾ.2(ಎಂಟಿವೈ)– ಅಭಿವೃದ್ಧಿಯ ಹೆಸರಿನಲ್ಲಿ ಆದಿವಾಸಿ, ಬುಡಕಟ್ಟು ಜನರನ್ನು ಪೈಪೋಟಿಯಿಂದ ಒಕ್ಕಲೆಬ್ಬಿಸುತ್ತಿರುವುದೇ ದೊಡ್ಡ ಸವಾಲಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಪ್ರೊಜೆಸೋಮಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಮೈಸೂರು ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಕರ್ನಾಟಕ ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಬುಡಕಟ್ಟು ಸಮುದಾಯದ ಸಮಸ್ಯೆಗಳ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬುಡಕಟ್ಟು ಜನರು ಕಾಡಿನ ಸಂಪತ್ತನ್ನು ರಕ್ಷಣೆ ಮಾಡುತ್ತಿದ್ದಾರೆ. ಸಂವಿಧಾನದಲ್ಲಿ ಬುಡಕಟ್ಟು ಜನರಿಗೆ ವಿಶೇಷವಾದ ಯೋಜನೆ ರೂಪಿಸಲು ಅವಕಾಶ ಕೊಟ್ಟಿದೆ. ಆದರೆ ಕಾಡಿನ ಬದುಕಿಗೆ ಒಗ್ಗಿರುವವರನ್ನು ನಾಡಿನ ಬದುಕಿಗೆ ಒಗ್ಗಿಸುವುದೇ ದೊಡ್ಡ ಸವಾಲಾಗಿದೆ. ಬುಡಕಟ್ಟು ಜನರನ್ನು ಕಾಡಿನಿಂದ ನಾಡಿಗೆ ಹೊರಹಾಕಿದಾಗ ಅವರು ಅನುಭವಿಸುವ ತೊಂದರೆ ಹಾಗೂ ಕಾಡಿನ ಮಕ್ಕಳಿಗೂ ನಾಡಿನ ಮಕ್ಕಳಿಗೂ ಇರುವ ವ್ಯತ್ಯಾಸವನ್ನು ನೋಡಬೇಕಾಗಿದೆ ಆದ್ದರಿಂದ ಸರ್ಕಾರದ ಪಾಲಿಸಿಗಳಲ್ಲಿ ಬುಡಕಟ್ಟು ಜನರಿಗೆ ವಿಶೇಷವಾಗಿ ಅನುಕೂಲವಾಗುವಂತೆ ಶಿಕ್ಷಣ, ಆರೋಗ್ಯ, ಆರ್ಥಿಕವಾಗಿ ಸಬಲರಾಗಲು ಅನುಕೂಲ ಮಾಡಿಕೊಡಬೇಕು ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಸಿ.ಶಿವಕುಮಾರ್ ಮಾತನಾಡಿ, ನಾವು ಮೊದಲು ಸಂವಿಧಾನವನ್ನು ಅರ್ಥ ಮಾಡಿಕೊಂಡು ಬುಡಕಟ್ಟು ಜನರಿಗೆ ವಸತಿ, ಉದ್ಯೋಗ, ಶಿಕ್ಷಣಗಳು ಮೂಲಭೂತ ಹಕ್ಕಾಗಬೇಕು. 50 ಬುಡಕಟ್ಟು ಸಮುದಾಯಗಳನ್ನು ಆದ್ಯತೆ ಮೇಲೆ ಅಭಿವೃದ್ಧಿಪಡಿಸಬೇಕು. ಅಧಿಕಾರದಲ್ಲಿರುವವರು ಕಟ್ಟಕಡೆಯ ಬುಡಕಟ್ಟು ಸಮುದಾಯವನ್ನು ಮೇಲೆತ್ತಬೇಕು ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪ ನಿರ್ದೇಶಕರಾದ ಹೆಚ್.ಎಸ್.ಗಿರಿಜಾಂಬ ಮಾತನಾಡಿ, ಬುಡಕಟ್ಟು ಸಮುದಾಯಗಳು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ ಅಭಿವೃದ್ಧಿಯಾಗುವ ನಿಟ್ಟಿನಲ್ಲಿ ವಿಸ್ತತವಾಗಿ ಚರ್ಚೆಯಾಗಬೇಕು. ಪ್ರಬಂಧ ಮಂಡಿಸುವವರು ಬುಡಕಟ್ಟು ಜನರೊಂದಿಗೆ ನೇರವಾಗಿ ಚರ್ಚಿಸಿರುವ ನೈಜ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಬೇಕು ಎಂದರು.

ವಿಚಾರ ಸಂಕಿರಣದಲ್ಲಿ ಡಾ.ಕೆ.ವಿ.ಕೃಷ್ಣಮೂರ್ತಿ, ಡಾ.ಮೋಹನ್‌ಕುಮಾರ್, ಡಾ.ಕಲಾವತಿ, ಲೆಕ್ಕಾಧಿಕಾರಿ, ಬಿ.ಆರ್. ಭವ್ಯ, ಅಧೀಕ್ಷಕಿ ಎಂ.ವಿ.ನಾಗರತ್ನ, ರಮೇಶ್ ಕೆ., ಡಾ.ರವಿಕುಮಾರ್, ಡಾ.ಎಸ್.ಎಂ. ಮುತ್ತಯ್ಯ, ವೇಣುಕಾಂತ ಎಂ.ಸಿ., ಭರತ್ ಕುಮಾರ್, ಮನೋಜ್ ಎಂ., ಮಮತಾ ಆರ್., ಪುಷ್ಪಲತಾ, ಮನೋಜ್ ಕುಮಾರ್, ಸಿದ್ದರಾಜು ಉಪಸ್ಥಿತರಿದ್ದರು.

ಏ.10ಕ್ಕೆ ಮೈಕಾಸ್ ಕಾಲೇಜಲ್ಲಿ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ



ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು,ಮಾ.2(ಎಂಟಿವೈ)– ಮೈಸೂರಿನ ಮೇಟಗಳ್ಳಿಯ ಬಳಿಯಿರುವ ಮೈಕಾಸ್ ಕಾಲೇಜಿನಲ್ಲಿ ಏಪ್ರಿಲ್ 10ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಉದ್ಯೋಗಾಕಾಂಕ್ಷಿಗಳು ಪಾಲ್ಗೊಳ್ಳುವಂತೆ ಕಾಲೇಜಿನ ನಿರ್ದೇಶಕ ಡಾ.ಜಿ.ರಾಮಚರಣ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಕಾಸ್ ಕಾಲೇಜು ವತಿಯಿಂದ ಕಳೆದ ಕೆಲವು ವರ್ಷಗಳಿಂದ ಉದ್ಯೋಗ ಮೇಳ ಆಯೋಜಿಸುತ್ತಾ ಬಂದಿದ್ದು, ಇದರಿಂದ ಕಾಲೇಜು ವಿದ್ಯಾರ್ಥಿಗಳು ಮಾತ್ರವಲ್ಲದೆ, ಉದ್ಯೋಗಾಕಾಂಕ್ಷಿಗಳಿಗೆ ನೆರವಾಗುತ್ತಿದೆ. ಈ ಸಾಲಿನ ಬೃಹತ್ ಉದ್ಯೋಗ ಮೇಳ ಏ.9ರಂದು ನಡೆಯಲಿದ್ದು, ರಾಜ್ಯದ ಹೆಸರಾಂತ ಕಂಪನಿಗಳು ಪಾಲ್ಗೊಳ್ಳುತ್ತಿವೆ. ಬಿಕಾಂ, ಬಿಬಿಎ, ಬಿಎ, ಬಿಎಸ್‌ಡಬ್ಲ್ಯೂ, ಬಿಎಸ್ಸಿ, ಬಿಇ, ಎಂಕಾಂ, ಎಂಬಿಎ, ಬಿಸಿಎ, ಎಂಸಿಎ, ಎಂಎ, ಎಂಎಸ್‌ಡಬ್ಲ್ಯೂ, ಎಂಎಸ್ಸಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಬಹುದು. ಅನುಭವ ಇರುವ ಹಾಗೂ ಅನುಭವ ಇಲ್ಲದೇ ಇರುವ ಅಭ್ಯರ್ಥಿಗಳು ಸಂದರ್ಶನ ಎದುರಿಸಿ, ಉದ್ಯೋಗಗಿಟ್ಟಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 98440 99514, 7483176616 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ರಮ್ಯಾ ತೆಕ್ಕಡೆ ಹಾಗೂ ರಯಾನ್, ವಿಕ್ರಮ್, ಉದಯ್, ಪವನ್ ಇದ್ದರು.


ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಮಾ.2– ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಮಾ.3 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಐಶ್ವರ್ಯ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜನ ಸುರಕ್ಷಾ ಯೋಜನೆ ಜಾರಿ

ಮೈಸೂರು,ಮಾ.2–ಸಾರ್ವಜನಿಕರಿಗೆ ಮತ್ತು ಸರ್ಕಾರಿ ಅಧಿಕಾರಿ, ನೌಕರರಿಗೆ ಜೀವನ ಅನಿಶ್ಚಿತತೆಗಳನ್ನು ಹಾಗೂ ಆರ್ಥಿಕ ಭದ್ರತೆಗಳನ್ನು ನೀಡಲು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಎಂಬ ಜನ ಸುರಕ್ಷಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಪಟ್ಟಣದ ಸಾರ್ವಜನಿಕರು, ಅಧಿಕಾರಿ, ಸಿಬ್ಬಂದಿ ತಮ್ಮ ಎಸ್.ಬಿ. ಖಾತೆ ಹೊಂದಿರುವ ಬ್ಯಾಂಕಿನಲ್ಲಿ ತಮ್ಮ ಸ್ವಂತ ಹಣದಿಂದ ವಿಮೆ ಮಾಡಿಸಿಕೊಂಡು ಸೌಲಭ್ಯ ಪಡೆದುಕೊಳ್ಳಬಹುದಾಗಿರುತ್ತದೆ ಎಂದು ಹೂಟಗಳ್ಳಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

200 ಕೋಟಿ ಬಾಕಿ ಬಿಲ್ ಪಾವತಿಗೆ ಆಗ್ರಹಿಸಿ ಮೈಸೂರು ನಗರಪಾಲಿಕೆ ಮುಂದೆ ಗುತ್ತಿಗೆದಾರರು ಮೌನ ಪ್ರತಿಭಟನೆ



ಮೈಸೂರು ಮಹಾನಗರಪಾಲಿಕೆ ಮುಂದೆ ಬಾಕಿ ಬಿಲ್ ಪಾವತಿಗೆ ಒತ್ತಾಯಿಸಿ ಗುತ್ತಿಗೆದಾರರು ಮೌನ ಪ್ರತಿಭಟನೆ ನಡೆಸಿದರು.

ಮೈಸೂರು,ಮಾ.2(ಎಂಟಿವೈ)– ಕಳೆದ 3 ವರ್ಷಗಳ ಸುಮಾರು 200 ಕೋಟಿ ಕಾಮಗಾರಿ ಬಾಕಿ ಬಿಲ್ ಪಾವತಿಸುವಂತೆ ಒತ್ತಾಯಿಸಿ, ಗುತ್ತಿಗೆದಾರರು ಮೈಸೂರು ಮಹಾನಗರಪಾಲಿಕೆ ಮುಂದೆ ಮೌನ ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾನಗರ ಪಾಲಿಕೆ ಕಚೇರಿ ಮುಂಭಾಗ ಸಿವಿಲ್ ಗುತ್ತಿಗೆದಾರರ ಸಂಘದ ಸದಸ್ಯರು, 14ನೇ ಮತ್ತು 15ನೇ ಹಣಕಾಸು, ಎಸ್‌ಎಫ್‌ಸಿ, ಮಹಾತ್ಮ ಗಾಂಧಿ ನಗರ ಅಭಿವೃದ್ಧಿ ಯೋಜನೆ ಕಾಮಗಾರಿಗಳನ್ನು ಸಿದ್ಧ ಹಣದ ಕಾಮಗಾರಿ ಎಂದು ಬ್ಯಾಂಕ್, ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಸಾಲ ಪಡೆದು, ಇಲ್ಲವೆ ಮನೆಯಲ್ಲಿರುವ ಒಡವೆ ಅಡವಿಟ್ಟು ಕಾಮಗಾರಿ ಪೂರ್ಣಗೊಳಿಸಿದ್ದೇವೆ. ಗುತ್ತಿಗೆದಾರರು ಅಡಮಾನ ಇಟ್ಟಿರುವ ಮನೆ, ಸೈಟು, ಜಮೀನು ಹರಾಜು ಹಾಕುವುದಾಗಿ ಬ್ಯಾಂಕ್‌ನವರು ನೋಟಿಸ್ ನೀಡಿದ್ದಾರೆ. ಅಲ್ಲದೆ ರಾಷ್ಟ್ರೀಕೃತ ಬ್ಯಾಂಕುಗಳು ಸರ್ಕಾರಿ ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರರಿಗೆ ಸಾಲ ಕೊಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿವೆ.

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯದ್ಯಂತ ಎಲ್ಲಾ ಗುತ್ತಿಗೆದಾರರೂ ಕಾಮಗಾರಿ ನಿಲ್ಲಿಸಿ ಮುಷ್ಕರ ನಡೆಸಲು ನಿರ್ಧರಿಸಿರುವುದರಿಂದ ನಗರಪಾಲಿಕೆ ಎಲ್ಲಾ ಗುತ್ತಿಗೆದಾರರು ಬೆಂಗಳೂರು ಚಲೋ ಪ್ರತಿಭಟನೆ ಮಾಡಲು ನಿರ್ಧರಿಸಿದ್ದೇವೆ. ಸಿಎಂ ಸಿದ್ದರಾಮಯ್ಯ ಅವರು ಕೂಡಲೇ ಮುಖ್ಯಮಂತ್ರಿಗಳು ಗುತ್ತಿಗೆದಾರರ ನೋವು–ಕಷ್ಟಗಳಿಗೆ ಸ್ಪಂದಿಸಬೇಕು. ಬಾಕಿ ಇರುವ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಚಂದ್ರಶೇಖರಯ್ಯ, ಕಾರ್ಯದರ್ಶಿ ಹರ್ಷವರ್ಧನ, ನಿರ್ದೇಶಕರಾದ ವೆಂಕಟಪ್ಪ ನಾರಾಯಣ, ರಾಮೇಗೌಡ ಯೋಗಿಶ್, ಧನಂಜಯ್, ಮಂಜುನಾಥ್, ರಾಜ್ ಕುಮಾರ್, ಸೈಯದ್ ವಸೀಮ್, ವೆಂಕಟೇಶ್ ಸೇರಿದಂತೆ ಹಲವರಿದ್ದರು.

ಒಳಮೀಸಲಾತಿ ಗೊಂದಲ 6 ತಿಂಗಳಲ್ಲಿ ನಿವಾರಿಸಿ; ಎಡಗೈ, ಬಲಗೈ ಸಮುದಾಯಕ್ಕೆ ನ್ಯಾಯ ಕಲ್ಪಿಸಿ

ದಲಿತರ ಪರ ಹಿರಿಯ ಹೋರಾಟಗಾರ ಹರಿಹರ ಆನಂದಸ್ವಾಮಿ ಆಗ್ರಹ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಅಧ್ಯಕ್ಷ ಹರಿಹರ ಆನಂದಸ್ವಾಮಿ ಮಾತನಾಡಿದರು.

ಮೈಸೂರು,ಮಾ.2(ಎಂಟಿವೈ)– ರಾಜ್ಯ ಸರ್ಕಾರ ಒಳಮೀಸಲಾತಿ ಪ್ರಕ್ರಿಯೆಯಲ್ಲಿ ಆಗಿರುವ ಗೊಂದಲವನ್ನು ಮುಂದಿನ 6 ತಿಂಗಳ ಒಳಗಾಗಿ ಬಗೆಹರಿಸಿ, ಶೋಷಿತ ಸಮುದಾಯಗಳಾದ ಎಡಗೈ, ಬಲಗೈ ಹಾಗೂ ಅಲೆಮಾರಿ ಸಮುದಾಯಕ್ಕೆ ನ್ಯಾಯ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಅಧ್ಯಕ್ಷ ಹರಿಹರ ಆನಂದಸ್ವಾಮಿ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳು ಒಗ್ಗಟ್ಟು ಕಾಪಾಡಿಕೊಳ್ಳಬೇಕು ಎಂದು ಸಂದೇಶ ನೀಡಿದ್ದರು. ಆದರೆ, ಒಳಮೀಸಲಾತಿಯ ಪ್ರಹಸನದಿಂದಾಗಿ ಕೆಲವು ರಾಜಕೀಯ ಪಕ್ಷಗಳ ಮುಖಂಡರ ಸಂಚಿನಿಂದ ಇಂದು ಎಡಗೈ, ಬಲಗೈ ಸಮಾಜದ ನಡುವೆ ದೊಡ್ಡಮಟ್ಟದಲ್ಲಿ ಕಂದಕ ಏರ್ಪಟ್ಟಿದೆ. ಅಸ್ಪೃಶ್ಯರನ್ನು ಕೋಮುವಾದಿಗಳು ಟ್ರಂಪ್‌ಕಾರ್ಡ್‌ನಂತೆ ಬಳಸಿಕೊಂಡು ಸಂಘರ್ಷಕ್ಕೆ ಕಾರಣರಾಗಿದ್ದಾರೆ. ಇದರಿಂದ ಅಸ್ಪೃಶ್ಯ ಸಮಾಜಕ್ಕೆ ದೊಡ್ಡಮಟ್ಟದ ಹಿನ್ನಡೆಯಾಗುತ್ತಿದೆ. ಪರಸ್ಪರ ಶತೃಗಳಂತೆ ಬಿಂಬಿಸಿ, ಅಂಬೇಡ್ಕರ್ ಅವರ ಆಶಯವನ್ನು ಛಿದ್ರಗೊಳಿಸುವ ಹುನ್ನಾರ ನಡೆಯುತ್ತಿದೆ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಗೊಂದಲವಾಗಿದೆ: ಒಳಮೀಸಲಾತಿ ಹಂಚಿಕೆ ಪ್ರಕ್ರಿಯೆಯಲ್ಲಿ ಅನುಪಾತ ಹಾಕುವಾಗ ಸಣ್ಣ ಪ್ರಮಾಣದ ಗೊಂದಲವಾಗಿದೆ. ಅದನ್ನು ಸರಿಪಡಿಸಿ, ಒಳಮೀಸಲಾತಿ ಹಂಚಿಕೆ ಮಾಡಬೇಕಾಗಿತ್ತು. ಅಷ್ಟರಲ್ಲಾಗಲೇ ಒಳಮೀಸಲಾತಿ ವಿಚಾರವನ್ನು ಮುಂದಿಟ್ಟುಕೊಂಡು ಕೋಮುವಾದಿ ಪಕ್ಷದ ಕೆಲ ಮುಖಂಡರು, ಎಡಗೈ ಸಮುದಾಯಕ್ಕೆ ಬಲಗೈ ಸಮುದಾಯ ಅನ್ಯಾಯ ಮಾಡಿದೆ ಎಂದು ತಪ್ಪು ಸಂದೇಶ ಸಾರಿ, ಎರಡೂ ಪಂಗಡಗಳ ನಡುವೆ ಕಂದಕ ಏರ್ಪಡುವಂತೆ ಮಾಡಿದೆ. ಇದರಿಂದ ಈಗಾಗಲೇ ಬೀದಿ ಜಗಳದಂತೆ ಆರೋಪ, ಪ್ರತ್ಯಾರೋಪ ತಾರಕಕ್ಕೇರಿದ್ದು, ಒಗ್ಗಟ್ಟು ಛಿದ್ರಗೊಳ್ಳುವಂತೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಎರಡೂ ಸಮುದಾಯ ಪಟ್ಟಭದ್ರ ಹಿತಾಸಕ್ತಿಗಳ ಹಾಗೂ ಕೋಮುವಾದಿಗಳ ಸಂಚಿಗೆ ಒಳಗಾಗದೇ ಒಗ್ಗಟ್ಟು ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ನ್ಯಾ.ನಾಗಮೋಹನದಾಸ್ ಕಾಟಾಚಾರದ ವರದಿ: ಒಳ ಮೀಸಲಾತಿ ಪ್ರಕ್ರಿಯೆ ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಪ್ರಕ್ರಿಯೆಯೆಂದು ಭಾವಿಸಲಾಗಿತ್ತು. ಆದರೆ ಅಸ್ಪೃಶ್ಯ ಸಮಾಜಗಳನ್ನು ಛಿದ್ರಗೊಳಿಸುವತ್ತ ಸಾಗಿದೆ. ನ್ಯಾ. ನಾಗಮೋಹನದಾಸ್ ಆಯೋಗದ ಬಗ್ಗೆ ಅಸ್ಪೃಶ್ಯರೆಲ್ಲರೂ ಹೆಚ್ಚು ಭರವಸೆ ಹೊಂದಿದ್ದರು. ಆದರೆ ವೈಜ್ಞಾನಿಕವಾಗಿ ಪ್ರಸ್ತುತ ಅಸ್ಪೃಶ್ಯರ ನಡುವಿನ ಸ್ಥಿತಿಗತಿ ಹಾಗೂ ಸಾಮಾಜಿಕ ಹಿನ್ನೆಲೆ ಗಂಭೀರವಾಗಿ ಪರಿಗಣಿಸಬೇಕಾಗಿದ್ದ ಆಯೋಗ ಕಾಟಾಚಾರಕ್ಕೆ ವರದಿ ಸಿದ್ಧಗೊಳಿಸಿದೆ. ಜನಾಂಗೀಯ ಅಂಕಿ ಅಂಶಗಳನ್ನು ಪಡೆಯುವ ನ್ಯೂನತೆಗಳಿದ್ದು, ಅಸ್ಪೃಶ್ಯರ ಎಡ, ಬಲ ಸಮೂಹಗಳ ಜನಸಂಖ್ಯೆ ಮಾಹಿತಿಯನ್ನು ಕಲೆ ಹಾಕುವ ವೇಳೆ ದೋಷಕ್ಕೆ ಎಡೆ ಮಾಡಿಕೊಡಲಾಗಿದೆ. ಇದನ್ನೇ ಮುಂದಿಟ್ಟುಕೊಂಡು ರೋಸ್ಟರ್ ವ್ಯವಸ್ಥೆ ಸಿದ್ಧಪಡಿಸಲಾಗಿತ್ತು. ಮೇಲ್ನೋಟಕ್ಕೆ ನ್ಯಾಯ ದೊರಕಿದೆ ಎಂದು ಭ್ರಮೆ ಮೂಡಿಸಿದರೂ ಎಡ, ಬಲ ಸಮೂಹ ತಮ್ಮಲ್ಲಿಯೇ ಕಚ್ಚಾಡುವಂತೆ ಮಾಡಲಾಗಿದೆ ಎಂದು ವಿಷಾದಿಸಿದರು.

ದಸಂಸ ರಾಜ್ಯ ಸಂಚಾಲಕ ದೇವಗಳ್ಳಿ ಸೋಮಶೇಖರ್ ಮಾತನಾಡಿ, ದಸಂಸ ಅನ್ಯಾಯಕ್ಕೆ ಒಳಗಾದ ಎಲ್ಲರ ಪರ ಇದೆ. ಎಡಗೈ ಪಂಗಡ, ಅಲೆಮಾರಿಗಳಿಗೆ ಒಳಮೀಸಲಾತಿ ನೀಡುವುದನ್ನು ನಾವು ವಿರೋಧಿಸುವುದಿಲ್ಲ. ನ್ಯಾಯಬದ್ಧವಾಗಿ ಶೋಷಿತ ಸಮುದಾಯಕ್ಕೆ ವೈಜ್ಞಾನಿಕವಾಗಿ ಒಳಮೀಸಲಾತಿ ನೀಡುವಂತೆ ಒತ್ತಾಯಿಸುತ್ತೇವೆ. ಕೋಮುವಾದಿಗಳ ಮಾತನ್ನು ಎಡಗೈ, ಬಲಗೈ ಸಮುದಾಯ ನಂಬಬಾರದು. ಭಾಸ್ಕರ್ ಪ್ರಸಾದ್ ಎಂಬುವರು ಎರಡೂ ಸಮುದಾಯಗಳ ನಡುವೆ ದ್ವೇಷ ಉಂಟಾಗುವಂತೆ ಮಾಡುತ್ತಿದ್ದು, ಎರಡೂ ಸಮುದಾಯ ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಸಲಹೆ ನೀಡಿದರು. ದೇವಗಳ್ಳಿ ಸೋಮಶೇಖರ್, ಸೋಮಯ್ಯ ಮಲೆಯೂರು, ಬಿ. ರಾಚಯ್ಯ ಕಿನಕನಹಳ್ಳಿ, ಟಿ.ಈರಯ್ಯ, ಎಚ್.ಡಿ.ರಮೇಶ್ ಇದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ (ಮೆಡಿಕಲ್ ಸ್ಟೋರ್‌ಗೆ ಹೋಗಿ) : ವಿಷ ಕೊಡಿ ಅಣ್ಣಾ.
ಮೆಡಿಕಲ್ ಸ್ಟೋರಿನವರು : ಚೀಟಿ ಇಲ್ಲದೆ ಯಾವುದೇ ಔಷಧಿ ಕೊಡಲ್ಲ?
ಗುಂಡ ತನ್ನ ಮದುವೆ ಕಾರ್ಡು ತೋರಿಸಿದ.
ಮೆಡಿಕಲ್ ಸ್ಟೋರಿನವರು : ಸಾಕು ಅಣ್ಣಾ... ತಗೊಳ್ಳಿ ದೊಡ್ಡ ವಿಷದ ಬಾಟಲು.

ಮೈಸೂರು ಮಿತ್ರ
ಮಂಗಳವಾರ, ಮಾರ್ಚ್ 3, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬಾರದವರಿಗಾಗಿ ಕಾಯುವುದರಲ್ಲಿ ಖುಷಿ ಇದೆ.
ಏಕೆಂದರೆ ಅವರು ಮತ್ತೆ ಮರಳಿ ಬರುವುದೇ ಇಲ್ಲ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಟ್ಟಿ ತುಂಬಾ ಹಸು, ಹಾಲು ಮಾತ್ರ ತುಸು.

ನಿಮ್ಮ ಪತ್ರಗಳು

ಸಾವಯವ ತಜ್ಞ ನಗುವನಹಳ್ಳಿ ಬೋರೇಗೌಡರು

ಮಾನ್ಯರೆ,



ಸಾವಯವ ಕೃಷಿಯಲ್ಲಿ ಅಪಾರ ಜ್ಞಾನವುಳ್ಳ ನಗುವನಹಳ್ಳಿ ಬೋರೇಗೌಡರನ್ನು ಕುರಿತಾದ ಲೇಖನವು (ಸಾಪ್ತಾಹಿಕ ಪುರವಣಿ 01-03-2026) ಅದ್ಭುತವಾಗಿ ಮೂಡಿ ಬಂದಿದೆ. ಇವರು ನನಗೆ ಆತ್ಮೀಯರು ಹಾಗೂ ನಿಕಟ ಸಂಪರ್ಕದಲ್ಲಿ ಇರುವ ಮಹಾಜ್ಞಾನಿ. ಗೌಡರು ಶಾಲೆಯಲ್ಲಿ ಕಲಿತಿದ್ದು ಕಡಿಮೆ. ಆದರೆ, ಇವರಿಗೆ ಇರುವ ಸಾವಯವ ಕೃಷಿಯ ಪರಿಣಿತಿಯು ಡಾಕ್ಟರೇಟ್ ಪದವಿ ಪಡೆದಿರುವ ಕೃಷಿ ವಿಜ್ಞಾನಿಗಿಂತಲೂ ಹೆಚ್ಚು. ಅವರನ್ನು ಹಲವು ಬಾರಿ ಖುದ್ದು ಬೇಟಿ ಮಾಡಿದ್ದೇನೆ. ಕಳೆದ ತಿಂಗಳು ಅವರ ಮನೆಗೆ ಹೋದ ಸಂದರ್ಭದಲ್ಲಿ ಮೈಸೂರು-ಕೊಡಗು ಸಂಸದರಾದ ಯದುವೀರ್ ಅವರಿಗೆ ಉಡುಗೊರೆ ಕೊಡಲೆಂದು ಕುಂಡದಲ್ಲಿ ಸಾವಯವ ಪದ್ಧತಿಯಂತೆ ವೀರನಗೆರೆ ಬದನೆಗಿಡ ಬೆಳೆಸಿದ್ದರು.

ಗಿಡದ ತುಂಬಾ ಕಾಯಿಗಳು ನಳನಳಿಸುತ್ತಿದ್ದವು. ವೀರನಗೆರೆ ಬದನೆ ಹಾಗೂ ನಂಜನಗೂಡು ರಸಬಾಳೆಯನ್ನು ಮಹಾರಾಜರು ವಿದೇಶದಿಂದ ತಂದು ಅಭಿವೃದ್ಧಿಪಡಿಸಿದ ಬಗೆಯನ್ನು ವಿವರಿಸಿದರು. ರೈತರುಗಳಿಗೆ ಉಪನ್ಯಾಸ ನೀಡುವ ಮೂಲಕ ಜಾಗೃತಿ ಮೂಡಿಸುತ್ತಾ ಬಂದಿದ್ದಾರೆ. ಜೊತೆಗೆ ತಾವೇ ಬೆಳೆದು ಶೇಖರಿಸಿಟ್ಟ ಬೀಜಗಳನ್ನು ರೈತರಿಗೆ ಉಚಿತವಾಗಿ ನೀಡುತ್ತಾರೆ. ನನಗೂ ವೀರನಗೆರೆ ಬದನೆ ಬೀಜಗಳನ್ನು ಕೊಟ್ಟರು. ಯಾವೊಂದು ಪ್ರಶಸ್ತಿ ಪುರಸ್ಕಾರಗಳನ್ನು ಬಯಸದೆ ಬೆಳಕಿಗೆ ಬಾರದ ಇಂಥಹ ಒಬ್ಬ ಶ್ರೇಷ್ಠ ಹಾಗೂ ಸರಳ ವ್ಯಕ್ತಿಯನ್ನು ನಮ್ಮ 'ಮೈಸೂರು ಮಿತ್ರ' ಪತ್ರಿಕೆಯು ಓದುಗರಿಗೆ ಪರಿಚಯಿಸಿದ್ದಕ್ಕೆ ತುಂಬು ಹೃದಯದ ಅಭಿನಂದನೆಗಳು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಎಐ ಸಾಕ್ಷರತೆ ಕಡ್ಡಾಯವಾಗಲಿ

ಮಾನ್ಯರೆ,

ಇಂದಿನ ತಾಂತ್ರಿಕ ಯುಗದಲ್ಲಿ ಸರ್ಕಾರಗಳು ಕೇವಲ ನಿಯಂತ್ರಕರಾಗಿ ಉಳಿಯದೆ, ಮಾರ್ಗದರ್ಶಕ ಶಕ್ತಿಯಾಗಿ ಕಾರ್ಯನಿರ್ವಹಿಸಬೇಕಿದೆ. ಮೊದಲನೆಯದಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ ತಂದು ಪ್ರಾಥಮಿಕ ಹಂತದಿಂದಲೇ ಎಐ ಸಾಕ್ಷರತೆಯನ್ನು ಕಡ್ಡಾಯಗೊಳಿಸಬೇಕು. ಇದು ಭವಿಷ್ಯದ ಪೀಳಿಗೆಯನ್ನು ಕೇವಲ ಬಳಕೆದಾರರನ್ನಾಗಿ ಮಾಡದೆ ಸೃಷ್ಟಿಕರ್ತರನ್ನಾಗಿ ರೂಪಿಸುತ್ತದೆ.

ಎರಡನೆಯದಾಗಿ, ಉದ್ಯೋಗ ನಷ್ಟದ ಭೀತಿ ಹೋಗಲಾಡಿಸಲು ದೊಡ್ಡ ಮಟ್ಟದ ರೀ-ಸ್ಕಿಲ್ಲಿಂಗ್ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು ಇದರಿಂದ ಸಾಂಪ್ರದಾಯಿಕ ಕಾರ್ಮಿಕರು ಹೊಸ ತಂತ್ರಜ್ಞಾನಕ್ಕೆ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಮೂರನೆಯದಾಗಿ ಡೇಟಾ ಸುರಕ್ಷತೆ ಮತ್ತು ನೈತಿಕ ಬಳಕೆಗೆ ಸಂಬಂಧಿಸಿದಂತೆ ಬಲಿಷ್ಠ ಕಾನೂನು ಚೌಕಟ್ಟನ್ನು ರೂಪಿಸುವುದು ಅತ್ಯಗತ್ಯ. ಕರ್ನಾಟಕದಂತಹ ರಾಜ್ಯಗಳು ಕನ್ನಡದಂತಹ ಸ್ಥಳೀಯ ಭಾಷೆಗಳಲ್ಲಿ ಎಐ ಮಾದರಿಗಳನ್ನು ಅಭಿವೃದ್ಧಿಪಡಿಸಲು ಸ್ಟಾರ್ಟ್‌ಅಪ್‌ಗಳಿಗೆ ವಿಶೇಷ ಅನುದಾನ ನೀಡಬೇಕು. ಸರ್ಕಾರಿ ಸೇವೆಗಳಲ್ಲಿ ಎಐ ಅಳವಡಿಸಿಕೊಳ್ಳುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ತರಬೇಕು ಮತ್ತು ಸಾರ್ವಜನಿಕರಿಗೆ ಶೀಘ್ರ ಸೇವೆ ಸಿಗುವಂತೆ ಮಾಡಬೇಕು. ತಂತ್ರಜ್ಞಾನವನ್ನು ಮಾನವೀಯ ಮೌಲ್ಯಗಳೊಂದಿಗೆ ಬೆರೆಸುವಲ್ಲಿ ಸರ್ಕಾರದ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ಡ್ರಗ್ಸ್ ಜಾಲ ಪತ್ತೆಗೆ ಡ್ರೋಣ್ ಕಾರ್ಯಾಚರಣೆ ಶ್ಲಾಘನೀಯ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಮಾಜಘಾತುಕ ಶಕ್ತಿಗಳ ದುಷ್ಕೃತ್ಯ ಮತ್ತು ಡ್ರಗ್ಸ್ ಜಾಲ ಪ್ರಕರಣಗಳ ಪತ್ತೆಗೆ ಡ್ರೋಣ್ ಕಾರ್ಯಚರಣೆ ನಡೆಸಲು ಮೈಸೂರು ನಗರ ಪೊಲೀಸರು ಸಜ್ಜಾಗಿದ್ದಾರೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಹೇಳಿರುವುದು ಶ್ಲಾಘನೀಯ.ಇತ್ತೀಚೆಗೆ ಮೈಸೂರಿನಲ್ಲಿ ಮಹಾರಾಷ್ಟ್ರ ಪೊಲೀಸರು ಡ್ರಗ್ಸ್ ತಯಾರಿಕ ಫ್ಯಾಕ್ಟರಿಯನ್ನು ಪತ್ತೆ ಮಾಡಿ ಎಲ್ಲರೂ ಹುಬ್ಬೇರಿಸುವಂತೆ ಮಾಡಿದ್ದರು.ಇದರಿಂದ ಎಚ್ಚೆತ್ತ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಮೈಸೂರನ್ನು ಮಾದಕ ವಸ್ತು ಮುಕ್ತ ನಗರ ಮಾಡುವುದು ನನ್ನ ಮುಖ್ಯ ಆದ್ಯತೆ, ಇದುವರೆಗೆ ಮಾದಕ ವಸ್ತುಗಳ ಮಾರಾಟಗಾರರ ವಿರುದ್ಧ ಮಾತ್ರ ಪ್ರಕರಣ ದಾಖಲಾಗುತ್ತಿತ್ತು ಇನ್ನು ಮುಂದೆ ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುವುದು ಸ್ವಾಗತಾರ್ಹ. ಡ್ರೋಣ್ ಕಾರ್ಯಚರಣೆಯಿಂದ 500 ಮೀಟರ್ ದೂರ 300 ಮೀಟರ್ ಎತ್ತರದಿಂದ ಅನುಮಾನಾಸ್ಪದ ವ್ಯಕ್ತಿಗಳ ಚಲನ ವಲನ ಸೆರೆ ಹಿಡಿಯಲು ಸಹಕಾರಿಯಾಗಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲು ಸುಲಭವಾಗಿ ಅಪರಾಧ ಕೃತ್ಯಗಳಿಗೆ ಕಡಿವಾಣ ಬೀಳುತ್ತದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಹೇಳಿರುವುದು ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಅತ್ಯಾಚಾರಿಗಳಿಗೆ ಎಚ್ಚರಿಕೆ ಗಂಟೆಯಾಗಲಿ

ಮಾನ್ಯರೆ,

ಇತ್ತೀಚಿನ ಕೆಲವು ಕಡೆಗಳಲ್ಲಿ ಅಪ್ರಾಪ್ತರ ಮೇಲೆ ಅತ್ಯಾಚಾರ, ಮಹಿಳೆಯರ ಮೇಲೆ ಅತ್ಯಾಚಾರ, ಸಹೋದ್ಯೋಗಿಯ ಮೇಲೆ ಅತ್ಯಾಚಾರ, ಹಿರಿಯರು ಕಿರಿಯರೆನ್ನದೆ ಅತ್ಯಾಚಾರಗಳು, ದೇಶದ ಕೆಲವು ಕಡೆ ಇಂದಿಗೂ ನಡೆಯುತ್ತಲೇ ಇದೆ.

ಈ ಅತ್ಯಾಚಾರದ ವಿಕಾರ ಮನಸ್ಥಿತಿ ಹೊಂದಿರುವ ವ್ಯಕ್ತಿಗಳಿಂದ ಕೊಪ್ಪಳದ ಗಂಗಾವತಿ ತಾಲೂಕಿನ ಹಂಪೆಯ ಸಾಣಾಪುರದ ಬಳಿ 2025 ಮಾರ್ಚ್‌ನಲ್ಲಿ ಇಸ್ರೇಲ್ ಮಹಿಳೆಯ ಮೇಲೆ ಅತ್ಯಾಚಾರ ಮತ್ತು ವಿದೇಶಿಗನ ಕೊಲೆ ನಡೆದಿತ್ತು. ಈ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೊಲೀಸ್ ಸ್ಟೇಷನಲ್ಲಿ ಪ್ರಕರಣ ದಾಖಲಾಗಿ ಈ ಪ್ರಕರಣದ ವಿಚಾರಣೆನ್ನು ಗಂಗಾವತಿ ಹೆಚ್ಚುವರಿ ಸತ್ರ ನ್ಯಾಯಾಲಯವು ಸಾಕ್ಷಿ ಆಧಾರಗಳನ್ನು ಪರಿಗಣಿಸಿ 9 ತಿಂಗಳಲ್ಲಿ ಮೂವರಿಗೆ ಗಲ್ಲು ಶಿಕ್ಷೆ ವಿಧಿಸಿದೆ. ಈ ಗಲ್ಲು ಶಿಕ್ಷೆ ಅತ್ಯಾಚಾರಿ ಮನಸ್ಥಿತಿ ಹೊಂದಿದವರಿಗೆ ಎಚ್ಚರಿಕೆ ಗಂಟೆಯಾಗಲಿ

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

'ಕಾಲಾಯತಸ್ಮೈ ನಮಃ'



ಮನುಷ್ಯನ ಆವಿಷ್ಕಾರಗಳು ಯಾವುದೂ ರಾತ್ರೋರಾತ್ರಿ ಉದ್ಭವವಾದವುಗಳಲ್ಲ; ಅವೆಲ್ಲಾ ನಮ್ಮ ನಮ್ಮ ಅವಶ್ಯಕತೆಗಳನ್ನು ಅವಲಂಬಿಸಿ ಕಾಲಾನುಕಾಲದಲ್ಲಿ ನಮ್ಮ ಉಪಯೋಗಕ್ಕೆ ದಕ್ಕುವಂತಹವು. ಅಚ್ಚಿನ ಮಣೆಯಲ್ಲಿ ಮೊಳೆ ಜೋಡಿಸಿ ಪತ್ರಿಕೆ ಪ್ರಿಂಟ್ ಮಾಡಿ ಪ್ರಸಾರವಾಗುತ್ತಿದ್ದ ಕಾಲದಲ್ಲೂ ಪತ್ರಿಕೆ ಓದುತ್ತಿದ್ದ ಓದುಗರಿದ್ದರು. ಡಿಟಿಪಿ ಮೂಲಕ ಟೈಪ್ ಮಾಡಿ ಕಂಪ್ಯೂಟರ್‌ನಿಂದ ನೇರ ಪ್ರಿಂಟಿಂಗ್ ಟೆಕ್ನಾಲಜಿಯ ಕಾಲದಲ್ಲೂ ಪತ್ರಿಕೆ ಓದುವವರಿದ್ದಾರೆ. ಅಂದ ಮೇಲೆ ಟೆಕ್ನಾಲಜಿ ಬದಲಾದಂತೆ ಓದುಗರ ತಲೆಮಾರು ಕೂಡ ಬದಲಾಗುತ್ತಿರುತ್ತದೆ. ಬರೆಯುವವರೂ ಬದಲಾಗುತ್ತಿರುತ್ತಾರೆ.

ಅಂದರೆ ಬದಲಾವಣೆ ಜಗದ ನಿಯಮ. ಅವಿಷ್ಕಾರ ಮತ್ತು ತಂತ್ರಜ್ಞಾನಗಳ ಏರುಗತಿಯ ಪ್ರಮಾಣದಲ್ಲಿ ನಾವಂದುಕೊಂಡಂತೆ ಈ ಟೆಕ್ನಾಲಜಿಯ ಪ್ರಯಾಣಕ್ಕೆ ನಿಲ್ದಾಣವೇ ಇಲ್ಲ ಎನಿಸುತ್ತದೆ. ನಾವೆಲ್ಲಾ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಬಾಹ್ಯಾಕಾಶದ ಗಗನ ನೌಕೆಯಲ್ಲಿ ಚಂದಿರನ ಬಳಿ ಹೋಗಿ ಚಂದಿರನ ಮೇಲೆ ನಿಂತ ಗಗನಯಾತ್ರಿಯ ಫೋಟೋ ತೋರಿಸಿ ಇವನೇ 'ಯಂತ್ರ ಮಾನವ' ಎಂದು ಹೇಳುತ್ತಿದ್ದರು. ನಾವೇ ಕಲಿತು ಬಲಿತು ದೊಡ್ಡವರಾದ ಮೇಲೆ ಮನುಷ್ಯನ ನವ ನಾಗರಿಕ ತಂತ್ರಾಗಮನದ ತಾಂತ್ರಿಕ ವಿಜ್ಞಾನ ರಾಕೆಟ್ ವೇಗದಲ್ಲಿ ಓದಲು ಶುರು ಮಾಡಿತು.

ಅದಕ್ಕೇ ಹೇಳಿದ್ದು ಇವತ್ತು ಕೈಯಲ್ಲಿ ಒಂದು ಮೊಬೈಲಿದ್ದು ಹತ್ತಾರು ಆ್ಯಪುಗಳಿದ್ದರೆ ಜೀವನ ಸಲೀಸು, ನಿಮಗೇನು ಬೇಕೋ ಕೇಳಿ, ನಿಮ್ಮ ಅಕೌಂಟಿನಲ್ಲಿ ದುಡ್ಡಿದ್ದು ಕೈಯಲ್ಲಿ ಮೊಬೈಲಿದ್ದು, ತಂತ್ರಾಂಶದ ಬಳಕೆ ಗೊತ್ತಿದ್ದರೆ, ಜಗತ್ತು ನಿಮ್ಮ ಅಂಗೈಯಲ್ಲಿ ತಾನಿ ತಂದಾನ ಹಾಡುತ್ತದೆ. ಇದು ಅತಿಯಾದ ವಿಜ್ಞಾನದ ಬೆಳವಣಿಗೆ. ತಾಂತ್ರಿಕ ಶಕ್ತಿಯ ತಂತ್ರಜ್ಞಾನದ ಕೊಡುಗೆ! ಇಂಥ ತಂತ್ರಜ್ಞಾನದ ಆ್ಯಪ್‌ಗಳು ಅಸಂಖ್ಯಾತ, ಬೇಕಾದಷ್ಟಿವೆ.

ನಾನಿವತ್ತು ಹೇಳ ಹೊರಟಿದ್ದು ಅಂತಹದೊಂದು ಆ್ಯಪ್ ಬಗ್ಗೆ, ಅದರ ಹೆಸರು ಚಾಟ್ ಜಿಪಿಟಿ ಅಂತ. ಅದನ್ನು ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಅಥವಾ ಎಐ (AI) ಎಂದು ಕರೆಯಲಾಗುತ್ತಿದೆ. ಅದೊಂದು ಪ್ರಾಡಕ್ಟ್ ಅಲ್ಲ; ಅದೊಂದು ಕಾನ್ಸೆಪ್ಟ್! ಮನುಷ್ಯ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕಂಡುಕೊಂಡ ತಾಂತ್ರಿಕ ಚಮತ್ಕಾರದ ಹೊಸ ಸಾಧ್ಯತೆ. ಅಂದರೆ ನಿಮ್ಮ ಮೊಬೈಲ್‌ಗಳಲ್ಲಿ AI ಸೃಷ್ಟಿಸಿದ ಚಾಟ್ ಜಿಪಿಟಿಯನ್ನು ನೀವು ಆಪರೇಟ್ ಮಾಡುತ್ತಾ ಹೋದಂತೆ ಅದು ನಿಮ್ಮ ವಾಯ್ಸ್ ಮೆಸೇಜಿಗೆ ಥೇಟ್ ನಿಮ್ಮ ಸಹಾಯಕನ ರೀತಿ ವರ್ತಿಸುತ್ತದೆ. ನಿಮಗೆ ಬೇಕಾದ, ನೀವು ಕೇಳಿದ ವಿಷಯ ಜ್ಞಾನವನ್ನು, ಮಾಹಿತಿಯನ್ನು ಕ್ಷಣ ಮಾತ್ರದಲ್ಲಿ ನಿಮ್ಮ ಅಂಗೈಯ್ಯ ಮೇಲೆ ಒಬ್ಬ ಗೆಳೆಯನ ಹಾಗೆ ಮುಂಗೈಯನ್ನಿರಿಸಿ ಪ್ರಸ್ತುತಪಡಿಸುತ್ತದೆ.

ಇದು AIನ ಚಮತ್ಕಾರ. ಈಗೇನು ಆಟೋ ಮೊಬೈಲ್ ತಂತ್ರಜ್ಞಾನವೇ ಈ ವಾಯ್ಸ್ ಮೆಸೇಜುಗಳಿಗೆ ತಕ್ಕಂತೆ ಕುಣಿಯುತ್ತವೆ. ಕಾರು ಜೀಪುಗಳೆಲ್ಲಾ ಸ್ಕ್ರೀನ್‌ಟಚ್ ಟೆಕ್ನಾಲಜಿ ವಾಯ್ಸ್ ಮೆಸೇಜುಗಳಿಗೇ ಪ್ರತಿಬಿಂಬಿಸುತ್ತವೆ. ಅಂಥದ್ದರಲ್ಲಿ AI ತಂತ್ರಜ್ಞಾನಕ್ಕೆ ಹುಬ್ಬೇರಿಸುವಂಥದ್ದೇನಿದೆ? ಎಂದುಕೊಳ್ಳಬಹುದು. ಈಗಾಗಲೇ ನಮ್ಮ ಕೈಯ್ಯಲ್ಲಿ ಕೆಲಸ ಮಾಡುತ್ತಿರುವ ತಂತ್ರಾಂಶಗಳ ತಾಂತ್ರಿಕ ನೈಪುಣ್ಯತೆಗಳೆಲ್ಲಾ ಗೂಗಲ್ ಸರ್ಚಿನಲ್ಲಿ ಈಗಾಗಲೇ submit ಆಗಿರುವ stock roomನ ಮಾಹಿತಿಗಳನ್ನು ಪಿಕ್ ಮಾಡಿ ಯಥಾವತ್ತಾಗಿ ಕಣ್ಮುಂದೆ ರಾಚುತ್ತವೆ. ನಮಗೆ ಮಾಹಿತಿಗಳ ಹುಡುಕಾಟ ತಪ್ಪುತ್ತದೆ. ಆದರೆ ಮಾಡಬಹುದಾದ ಕ್ರಿಯಾತ್ಮಕ ಕೆಲಸಗಳನ್ನು ಅದು ತನ್ನ ನೈಪುಣ್ಯತೆ ಬಳಸಿ ಕಚ್ಚಾ ಸಾಮಗ್ರಿಯೊಂದನ್ನು ನಿಮಗೆ ಸಿದ್ಧ ಮಾಡಿ ಕೊಡುತ್ತದೆ. ಉದಾಹರಣೆಗೆ ನೀವಂದುಕೊಳ್ಳಬಹುದು.

ಅಂಕಿ-ಅಂಶಗಳು ತಾನೇ ಯಾವ ತಂತ್ರಜ್ಞಾನವಾದರೂ ಅದನ್ನು ತಂದು ಆ ವಿಷಯದ ಮೇಲೆ ಒಂದು ಪದ್ಯ ಬರೆದುಕೊಡು, ಒಂದುಗದ್ಯ ಬರೆದು ಕೊಡು, ಒಂದು ಚಿತ್ರ ಬರೆದು ಕೊಡು ಎಂದು ಕೇಳಿದರೆ ಅದು ಬರೆದುಕೊಡುತ್ತದೆ. ಅದಕ್ಕೆ ಸಮಯವೇ ಬೇಕಾಗಿಲ್ಲ. ಯೋಚಿಸಿ, ಚಿಂತಿಸಿ, ಆಕರ ಗ್ರಂಥಗಳನ್ನೆಲ್ಲಾ ಪರಾಮರ್ಶಿಸಿ ಸರಿಯೋ ತಪ್ಪೋ ಗಮನಿಸಿ tune ಮಾಡಲು ಕೂರುವುದಿಲ್ಲ. ಕೇಳಿದ ಕೂಡಲೇ ನೀವು ಕೇಳಿದ ವಿಷಯದ ಮೇಲೆ ಅದು ತನಗೆ ತೋಚಿದ್ದನ್ನು ಬರೆದು ಕೊಡುತ್ತದೆ. ಇನ್ನು ಅದನ್ನು ಪರಿಷ್ಕರಿಸಿ, ಮುಂದುವರೆಸಿಕೊಳ್ಳುವ ಕೆಲಸ ನಿಮ್ಮದು.

ನೋಡಿ ಎಲ್ಲಿಗೆ ಬಂದು ನಿಂತಿತು ಮನುಷ್ಯನ ತಾಂತ್ರಿಕ ಆವಿಷ್ಕಾರ. F AI ಟೆಕ್ನಾಲಜಿಯ ಅಂತರ್ಗತ ಅಸ್ತಿತ್ವದಿಂದಲೇ ಜಗತ್ತಿನಾದ್ಯಂತ ಇಂದು ರೋಬೋ ಟೆಕ್ನಾಲಜಿ ಕೆಲಸ ಮಾಡುತ್ತಿರುವುದು. ಈ ತಂತ್ರಜ್ಞಾನ ಹಾಲಿವುಡ್, ಬಾಲಿವುಡ್, ಟಾಲಿವುಡ್‌ಗಳಲ್ಲೆಲ್ಲಾ ಸಿನಿಮಾ ಪರದೆಯ ಮೇಲೆ ಹೀರೋ ಆಗಿ ರಾರಾಜಿಸಿ ಬಿಟ್ಟ ಸಂಗತಿಗಳನ್ನು ನಾವು ನೋಡಿದ್ದೇವೆ. ರಜನಿಕಾಂತ್ ನಟಿಸಿದ 'ಚಿಟ್ಟಿ ದಿ ರೋಬೋ' ಬೆಳ್ಳಿ ಪರದೆ ಮೇಲೆ ಬಂದಾಗ ನಾವೆಲ್ಲಾ ರೋಬೋಟಿಕ್ ಟೆಕ್ನಾಲಜಿಯನ್ನು ಪ್ಯಾಂಟಸಿ ಪ್ರಪಂಚದ ಫ್ಯಾಂಟಂ ಮತ್ತು ಸಂಗಡಿಗರ ಕತೆಯಂತೆ enjoy ಮಾಡಿದ್ದು ನಿಜ. ಆದರೆ ಅದೇ ಮೂಲ ಸ್ವರೂಪ ಈಗ ಬೇರೆ ಬೇರೆ ಆಯಾಮಗಳಲ್ಲಿ ನಮ್ಮ ಮನೆಯಂಗಳಕ್ಕೆ ಲಗ್ಗೆಯಿಟ್ಟಿದೆ. ಅಂಗೈಯಲ್ಲಿರುವ ಮೊಬೈಲ್ ಆ್ಯಪುಗಳಲ್ಲಿ ತನ್ನ ಕೈಚಳಕ ತೋರಿಸುತ್ತಿದೆ.

ವೈದ್ಯರು ರೋಬೋ ತಂತ್ರಜ್ಞಾನದಲ್ಲಿ ಮಂಡಿಚಿಪ್ಪು ಅಳವಡಿಸಿ ಕೊಡಲಾಗುವುದು ಎಂದು ತಮ್ಮ ಅತ್ಯಾಧುನಿಕ ಶಸ್ತ್ರಚಿಕಿತ್ಸೆಗೆ ಹೊಸ ಸ್ಪೆಷಾಲಿಟಿ ಬೋರ್ಡು ತಗುಲಿಸಿ ಕೊಂಡು ಅಪ್‌ಡೇಟ್ ಮಾದರಿಯ ಶಸ್ತ್ರಚಿಕಿತ್ಸೆಗೆ ಈ ತಂತ್ರಜ್ಞಾನದ ಬಳಕೆದಾರರಾಗಿದ್ದಾರೆ. ಅಂದ ಮೇಲೆ ಸಾಮಾನ್ಯರ ಕೈಯಲ್ಲಿನ ಮೊಬೈಲ್ ಆ್ಯಪ್‌ನಲ್ಲಿ A.I ಎಂಬ ಚಾಟ್ ಜಿ.ಪಿ.ಟಿ. ಏನೆಲ್ಲಾ ಚಮತ್ಕಾರ ಮಾಡುತ್ತದೆ ಎಂದರೆ ಆಶ್ಚರ್ಯಪಡಬೇಕೋ ಬೇಡವೋ? ನನಗಂತೂ ಆಶ್ಚರ್ಯವೇ?

ಯುವ ಸಮುದಾಯ ತಮ್ಮ ಅವಶ್ಯಕತೆಗಳನ್ನು F A.I ಎಂಬ ಕೃತಕ ಬುದ್ಧಿಮತ್ತೆ ಸಹಾಯದಿಂದ ಏನೆಲ್ಲಾ ಆಗಬೇಕೋ ಆ ಎಲ್ಲಾ ಕೆಲಸಗಳನ್ನು ಮಾಡಿಸುತ್ತಾರೆ. ಆದರೆ ಬಹಳ ದೊಡ್ಡ ಅಪಾಯವೇನೆಂದರೆ, 'ಕೃತಕ ಬುದ್ಧಿಮತ್ತೆ' ಎಂಬ ಈ A.I ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮನುಷ್ಯನಿಗಿಂತಲೂ ವೇಗವಾಗಿ ಕೆಲಸ ಮಾಡಬಲ್ಲ ಸಾಮರ್ಥ್ಯ ತೋರಿಸುತ್ತದೆ. ಇದರ ಪರಿಣಾಮ ಜಗತ್ತಿನ ಬೇರೆ ಬೇರೆ ಕ್ಷೇತ್ರಗಳ ಸೇವೆ ಸೌಲಭ್ಯಗಳನ್ನು ಜನರೇಟ್ ಮಾಡುವ ಕಂಪನಿಗಳು ಇದರ ಉಪಯೋಗ ಪಡೆದುಕೊಳ್ಳಲು ನಿಂತರೆ, ಮನುಷ್ಯನ ಜಾಗದಲ್ಲಿ F AI ನಿಲ್ಲುತ್ತದೆ.

ವಿಶಾಲ ಸಾಮರ್ಥ್ಯದ ಈ AI ತನ್ನ ಎಲ್ಲೆ ಮೀರಿ ಮನುಷ್ಯ ಕೆಲಸ ಮಾಡುವ ಎಲ್ಲ ಕ್ಷೇತ್ರಗಳಿಗೂ ಲಗ್ಗೆಯಿಡುತ್ತಿರುವ ಲಕ್ಷಣಗಳನ್ನು ಗಮನಿಸಿದರೆ, ಮುಂದೊಂದು ದಿನ ಜಗತ್ತು ಎಲ್ಲಾ ಕೆಲಸಗಳಿಗೆ ಮನುಷ್ಯನ ಜಾಗದಲ್ಲಿ AIಯೇ ಸಾಕು ಎಂದು ತೀರ್ಮಾನಿಸಿದರೆ ಹೇಗೆ? ಆಗ ಅಪಾಯ ಕಟ್ಟಿಟ್ಟ ಬುತ್ತಿ. ಹಾಲಿವುಡ್‌ನ ಖ್ಯಾತನಟ ಟಾಲ್ ಹ್ಯಾಂಕ್ಸ್ 'ಆಡಂ ಬಕ್ಸ್‌ಟನ್ ಪಾಡ್‌ಕಾಸ್ಟ್'ನಲ್ಲಿ ಈ AI ಕುರಿತಂತೆ ಹೇಳಿದ ಮಾತೊಂದಿದೆ. ಅದೇನೆಂದರೆ ನಾನು ನಾಳೆ ಬಸ್ ಡಿಕ್ಕಿಯಾಗಿ ಸಾವಿಗೀಡಾದರೆ, ನನ್ನ ಸಾವು ನನ್ನ ಕಾರ್ಯಕ್ರಮಗಳಿಗೇನೂ ಬಾಧಿಸುವುದಿಲ್ಲ. ನಾನಿಲ್ಲದಿದ್ದರೂ ಅದು ನಿರಂತರವಾಗಿ ನಡೆಯುತ್ತಿರುತ್ತದೆ. ಅಂದರೆ ಈ ಮಾತು ಇದರ ಅವಲಂಬನೆಯನ್ನು ಎತ್ತಿ ತೋರಿಸುತ್ತಿದ್ದರೂ, ಆಳದಲ್ಲಿ ಮಾತ್ರ ಅಪಾಯದ ಗಂಟೆ ಬಾರಿಸುತ್ತಿದೆ.

ತದ್ರೂಪು ತಂತ್ರಜ್ಞಾನ ಬಂದಾಗಲೂ ಸರೋಗಸಿ ಜಗತ್ತಿನಾದ್ಯಂತ ತಲೆ ಎತ್ತಿದಾಗಲೂ ಮನುಷ್ಯ ತಲೆಕೆಡಿಸಿಕೊಳ್ಳಲಿಲ್ಲ. Enjoy ಮಾಡಿದ. ಪ್ರಯೋಗ ಶಾಲೆಗಳು ಅಸ್ತಿತ್ವಕ್ಕೆ ಬಂದು ಬಿನ್ನಾಣಗಿತ್ತಿಯಂತೆ ಸಿಂಗಾರಗೊಂಡವು. ಹೊಸ ತಂತ್ರಜ್ಞಾನದ ಚಮತ್ಕಾರಗಳಿಗೆ ರೆಡ್‌ಕಾರ್ಪೆಟ್ ಹಾಕಿ ಸ್ವಾಗತಿಸಿದವು. ಆದರೆ ಮನುಷ್ಯ father's day, mother's dayಗಳ ಹಾಗೆ ಮಿದುಳಿಗೂ ಒಂದು ದಿನ ಮೀಸಲಿಟ್ಟು 'ವಿಶ್ವ ಮೆದುಳು ದಿನ' ಆಚರಿಸಿಕೊಳ್ಳುತ್ತಿರುವ ನಮ್ಮ ತಲೆಮಾರಿನ ಈ ಯುಗದಲ್ಲಿ AI ಎಂಬ ಈ ಚಾಟ್ ಜಿ.ಪಿ.ಟಿ, Perplexity, Meta AI ಮುಂತಾದವು ಮನುಷ್ಯನ ಮಿದುಳಿಗೇ ಸವಾಲೊಡ್ಡುವ ಸಾಮರ್ಥ್ಯತೋರಿಸುತ್ತವೆ. ಇದು ಒಳ್ಳೆಯ ಬೆಳವಣಿಗೆ ಅಥವಾ ಸಾಧಕ-ಬಾಧಕಗಳ ಬಗ್ಗೆ ಕಾಲವೇ ನಿರ್ಧರಿಸಬೇಕು.

ಅಪಾಯದ ಮುನ್ಸೂಚನೆಯ ಹಾಗೆ ಕಾಲ ನಿರ್ಧರಿಸುವ ತನಕ ಕಾಯದೆ ಈ AIನ ಸಾಮರ್ಥ್ಯ ಮತ್ತು ಕಾರ್ಯ ಕ್ಷಮತೆ ನೇರವಾಗಿ hit ಮಾಡುತ್ತಿರುವ ಮನರಂಜನಾ ಕ್ಷೇತ್ರ ಈ ಹೊತ್ತಿಗಾಗಲೇ ಕಂಗಾಲಾಗಿ ಹೋಗಿದೆ. ಕಾರಣ ಇಷ್ಟೆ, ಮನರಂಜನೆಯೇ ಪ್ರಧಾನ ಆಶಯವಾಗಿರುವ ಬೆಳ್ಳಿತೆರೆ, ಈಗಾಗಲೇ ಹತ್ತಾರು ತಾಂತ್ರಿಕ ಕೌಶಲ್ಯಗಳನ್ನು ಅಳವಡಿಸಿ ಕೊಂಡು ಬೆಳ್ಳಿತೆರೆಯ ಮೇಲೆ ಬೆರಗು ಹುಟ್ಟಿಸಿ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿ ತಾರೆಯರು ತಾರಾ ಮೌಲ್ಯ ಗಿಟ್ಟಿಸಿ ಮಿಂಚುತ್ತಾರೆ. ಇಲ್ಲೆ ಬಂದಿರುವುದು ಕಷ್ಟ, ಸಿನಿಮಾ ಇಂಡಸ್ಟ್ರಿಗೆ ಒಂದು ಚಿತ್ರ ತಯಾರಿಸಲು ಕಥೆ-ಚಿತ್ರಕತೆ, ನಟ-ನಟಿಯರು ಬೇಕೇ ಬೇಕು.

ಆದರೆ ಈ AI ಮನಸ್ಸು ಮಾಡಿದರೆ ಒಬ್ಬ ನಟ ಅಥವಾ ನಟಿಯರ ಮುಖ ಭಾವಗಳನ್ನು ಅರ್ಧ ಗಂಟೆ ರೆಕಾರ್ಡ್ ಮಾಡಿಟ್ಟುಕೊಂಡರೆ ಸಾಕು ಅಥವಾ ಅವರ ಡಿಜಿಟಲ್ ಪ್ರತಿರೂಪ ಒಂದಿದ್ದರೆ ಸಾಕು, ಆ ನಟ-ನಟಿಯರು ಇಲ್ಲದೆಯೂ ಅವರ ಡಿಜಿಟಲ್ ಪ್ರತಿರೂಪ ಅಥವಾ ಈಗಾಗಲೇ ಮಾಡಿಟ್ಟುಕೊಂಡು ಅವರ ಮುಖಭಾವಗಳ ಪೂರ್ವಾಪರಗಳನ್ನು ಬಳಸಿಕೊಂಡು AI ನಿಮಗೆ ನಿಮ್ಮದೇ ಕಥಾಹಂದರದ ಹೊಸ ಚಿತ್ರವೊಂದನ್ನು ಶೂಟ್ ಮಾಡಿಕೊಡುತ್ತದೆ. ಅಲ್ಲಿಗೆ ನಟ-ನಟಿಯರು ಮಾಡಬೇಕಾದ ಕೆಲಸವನ್ನು ಈ AI ಮಾಡಿಕೊಡುತ್ತದೆ. ಅದರಲ್ಲೂ 80ರ ವಯಸ್ಸಿನವರನ್ನೂ 35ರ ಮಧ್ಯವಯಸ್ಕರನ್ನಾಗಿ ಬದಲಾಯಿಸಿ, ಅನುಮಾನ ಬಾರದಂತೆ ಚಿತ್ರಿಸಿಕೊಡುವ ಸಾಮರ್ಥ್ಯ ಈ AI ಗೆ ಇದೆ. ಅಷ್ಟೇ ಅಲ್ಲ; ಡಬ್ಬಿಂಗ್‌ನಲ್ಲೂ ಇದು ಕೆಲಸ ಪೂರೈಸಿ ಯಶಸ್ವಿಯಾಗುತ್ತಿದೆ.

ಎಲ್ಲಕ್ಕಿಂತ ಮಿಗಿಲಾಗಿ ಸ್ಕ್ರಿಪ್ಟ್ ರೈಟರ್‌ಗಳು ಕಥೆಯ ಥ್ರೆಡ್‌ಗಳನ್ನು ಮುಂದುವರಿಸಲು ಆಲೋಚಿಸಲು ತೊಡಗುವಷ್ಟರಲ್ಲೇ ಅದನ್ನು ಕಥಾಹಂದರಕ್ಕೆ ತಂದು ನಿಲ್ಲಿಸಬಲ್ಲ ಸಾಮರ್ಥ್ಯ ಈ AIಗೆ ಇದೆ. ಬರವಣಿಗೆ ಕ್ಷೇತ್ರದಲ್ಲೇ ಇದು ತನ್ನ ಕೈಚಳಕ ತೋರಿಸುತ್ತಿದೆ ಎಂದರೆ ಇನ್ನು ಸಿನಿಮಾ ಕ್ಷೇತ್ರದ ವಿಡಿಯೋ ಎಡಿಟಿಂಗ್, ವಿಷುವಲ್ ಎಫೆಕ್ಟ್ ಮುಂತಾದ ತಾಂತ್ರಿಕ ಕ್ಷೇತ್ರಕ್ಕೆ ಇದು ಕಾಲಿಟ್ಟರೆ ಸಿನಿಮಾ ತಂತ್ರಜ್ಞರ ಉದ್ಯೋಗಕ್ಕೇ ಕತ್ತರಿ ಬೀಳುತ್ತದೆ. ನಟ-ನಟಿಯರು, ಬರಹಗಾರರು, ತಂತ್ರಜ್ಞರ ಕೆಲಸದ ಬಳಕೆಯನ್ನೇ ತಿರಸ್ಕರಿಸಿ ಒಂದು AI ಅವರೆಲ್ಲರ ಜಾಗದಲ್ಲಿ ನಿಂತು ಕೆಲಸ ಮಾಡುತ್ತದೆ ಎಂದರೆ ಜಗತ್ತಿನ 'ಎಂಟರ್ ಟೈನ್‌ಮೆಂಟ್ ಸೆಕ್ಷನ್' ಇನ್ನಾವ ಪರಿ ದಿಗಿಲು ಬಿದ್ದಿರಬೇಕು ಹೇಳಿ!

ನಿಮಗೆ ಗೊತ್ತಿರಲಿ ಈ AIನ ಕಾರಣದಿಂದ ಕೆಲವು ಕಾಲ ಹಾಲಿವುಡ್ ಸ್ತಬ್ಧಗೊಂಡಿತ್ತು. ಹಾಲಿವುಡ್‌ನತಾರೆಯರು ಮತ್ತು ಬರಹ ಗಾರರ ಯೂನಿಯನ್‌ಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ AI ವಿರುದ್ಧ ಮುಷ್ಕರಕ್ಕೆ ಇಳಿದಿದ್ದವು. ಹಾಲಿವುಡ್‌ನಲ್ಲಿ ಚಿತ್ರಗಳ ಶೂಟಿಂಗ್‌ಗಳು ಅರ್ಧಕ್ಕೆ ನಿಂತು ಹೋಗಿದ್ದವು. ಟೆಲಿವಿಷನ್ ಶೋಗಳೂ ಚಿತ್ರೀಕರಣಗೊಳ್ಳುತ್ತಿರಲಿಲ್ಲ. ಹೊಸ ಸೀರಿಯಲ್‌ಗಳು, ಸಿನಿಮಾಗಳ ನಿರ್ಮಾಣದಲ್ಲಿ AI ನಿಷೇಧಿಸುವವರೆಗೆ ತಾವು ಚಿತ್ರೀಕರಣದಲ್ಲಿ ಭಾಗಿಯಾಗುವುದಿಲ್ಲವೆಂದು ಪ್ಲೇಕಾರ್ಡ್ ಹಿಡಿದು ಬೀದಿಗಿಳಿದಿದ್ದರು. ಕಳೆದ ಅರವತ್ತು ವರ್ಷಗಳಲ್ಲಿ ನಡೆದಿರದಂಥ ಅತ್ಯಂತ ದೊಡ್ಡ ಮುಷ್ಕರಕ್ಕೆ ಹಾಲಿವುಡ್‌ನಲ್ಲಿ ಕಲಾವಿದರು ವೇದಿಕೆ ನಿರ್ಮಿಸಿದ್ದು ಆಯಿತು. ಹೀಗೆ ಮನರಂಜನಾ ಕ್ಷೇತ್ರ ಅಕ್ಷರಶಃ ನಿಷ್ಕ್ರಿಯಗೊಂಡಿತ್ತು. ಇದರಿಂದ ಹಾಲಿವುಡ್ ಇಂಡಸ್ಟ್ರಿಯಲ್ಲಿ ಕೋಟಿ ಕೋಟಿ ಡಾಲರ್ ನಷ್ಟದ ಲೆಕ್ಕಾಚಾರಗಳಿದ್ದವು. ಹೀಗೆ ಮುಷ್ಕರಕ್ಕಿಳಿದಿದ್ದ ಹಾಲಿವುಡ್‌ನ ತಾರೆಯರು ಮತ್ತು ಬರಹಗಾರರ ಒಕ್ಕೂಟ ಯಾವುದೋ ವ್ಯಕ್ತಿಯ ವಿರುದ್ಧ ಅಥವಾ ಸರ್ಕಾರದ ವಿರುದ್ಧ ಹೀಗೆ ಹೋರಾಟ ನಡೆಸುತ್ತಿಲ್ಲ.

> ❝ ಯುವ ಸಮುದಾಯ ತಮ್ಮ ಅವಶ್ಯಕತೆಗಳನ್ನು F A.I ಎಂಬ ಕೃತಕ ಬುದ್ಧಿಮತ್ತೆ ಸಹಾಯದಿಂದ ಏನೆಲ್ಲಾ ಆಗಬೇಕೋ ಆ ಎಲ್ಲಾ ಕೆಲಸಗಳನ್ನು ಮಾಡಿಸುತ್ತಾರೆ. ಆದರೆ ಬಹಳ ದೊಡ್ಡ ಅಪಾಯವೇನೆಂದರೆ, 'ಕೃತಕ ಬುದ್ಧಿಮತ್ತೆ' ಎಂಬ A.I ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮನುಷ್ಯನಿಗಿಂತಲೂ ವೇಗವಾಗಿ ಕೆಲಸ ಮಾಡಬಲ್ಲ ಸಾಮರ್ಥ್ಯ ತೋರಿಸುತ್ತದೆ. ಇದರ ಪರಿಣಾಮ ಜಗತ್ತಿನ ಬೇರೆ ಬೇರೆ ಕ್ಷೇತ್ರಗಳ ಸೇವೆ ಸೌಲಭ್ಯಗಳನ್ನು ಜನರೇಟ್ ಮಾಡುವ ಕಂಪನಿಗಳು ಇದರ ಉಪಯೋಗ ಪಡೆದುಕೊಳ್ಳಲು ನಿಂತರೆ, ಮನುಷ್ಯನ ಜಾಗದಲ್ಲಿ FAI ನಿಲ್ಲುತ್ತದೆ. ❞

AI ಎಂಬ ಒಂದು 'ತಾಂತ್ರಿಕ ಶಕ್ತಿ'ಯ ವಿರುದ್ಧ ತಮ್ಮ ಮುಷ್ಕರದ ಮುಖಮುದ್ರೆ ಒತ್ತಿ ತಮ್ಮ ಪ್ರತಿಭಟನೆಯನ್ನು ದಾಖಲಿಸಿದ್ದರು. ಅಲ್ಲಿನ ಕಲಾವಿದರ, ತಂತ್ರಜ್ಞರ, ಬರಹಗಾರರ ಬೇಡಿಕೆ ಇಷ್ಟೆ, ಸಿನಿಮಾ ನಿರ್ಮಾಣದಲ್ಲಿ AI ಪಾತ್ರ ನಿರ್ಬಂಧಿಸಬೇಕು. ಕಲಾವಿದರ ಚಿತ್ರಗಳು ಮತ್ತು ಧ್ವನಿಯನ್ನು AI ಮೂಲಕ ಬಳಸುವಾಗ ಕಲಾವಿದರ ಸಮ್ಮತಿ ಪಡೆಯಬೇಕು. ಒಂದು ವೇಳೆ ಬಳಸಿದಲ್ಲಿ ಅದಕ್ಕೆ ಸಂಭಾವನೆ ಕೊಡಬೇಕು. ಸಿನಿಮಾ ನಿರ್ಮಾಣ ಸಂಸ್ಥೆಗಳು ತಮ್ಮ ಆದಾಯದ ಸ್ವಲ್ಪ ಭಾಗವನ್ನು ಕಾರ್ಮಿಕರು, ಕಲಾವಿದರ ವಲಯಕ್ಕೂ ಸ್ವಲ್ಪ ಹಂಚಿಕೆ ಮಾಡಬೇಕು. ಇದಿಷ್ಟು ಅವರ ಬೇಡಿಕೆಗಳು.

ಇದೇ ರೀತಿಯ ಸಮಾನವಾದ ಬೇಡಿಕೆಗಳನ್ನಿಟ್ಟುಕೊಂಡು ಅಮೆರಿಕಾದ ಸ್ಕ್ರಿಪ್ಟ್ ರೈಟರ್ಸ್ ಅಸೋಸಿಯೇಷನ್ ರೈಟರ್ಸ್ ಗಿಲ್ಡ್ ಆಫ್ ಅಮೆರಿಕಾ ಕೂಡ ತಮ್ಮ ಲೇಖನಿ ಕೆಳಗಿಟ್ಟು ಮುಷ್ಕರ ಆರಂಭಿಸಿತ್ತು 1.6 ಲಕ್ಷದಷ್ಟು ನಟ-ನಟಿಯರು ನೋಂದಾಯಿತ ಸಂಸ್ಥೆಯಾದ ಅಮೆರಿಕಾದ ಸ್ಕ್ರೀನ್ ಆಕ್ಟರ್ಸ್ ಗಿಲ್ಡ್, ಕೂಡ ಮುಷ್ಕರದಲ್ಲಿ ಭಾಗಿಯಾಗಿತ್ತು. ಇದೂ ಸಾಲದೆಂಬಂತೆ ಅಮೆರಿಕನ್ ಫೆಡರೇಷನ್ ಆಫ್ ಟೆಲಿವಿಷನ್ ಅಂಡ್ ರೇಡಿಯೋ ಆರ್ಟಿಸ್ಟ್ ಸಂಘಟನೆಗಳೂ ಮುಷ್ಕರಕ್ಕೆ ಬೆಂಬಲ ಸೂಚಿಸಿದ್ದವು. ಬರಹಗಾರರು, ತಂತ್ರಜ್ಞರು, ರೇಡಿಯೋ ಜಾಕಿಗಳು, ಟೆಲಿವಿಷನ್ ಆ್ಯಂಕರ್‌ಗಳು, ವಿಡಿಯೋ ಎಡಿಟರ್‌ಗಳು, ಸ್ಪೆಷಲ್ ಎಫೆಕ್ಟ್ ತಂತ್ರಜ್ಞರು -ಹೀಗೆ ಇಡೀ ಎಂಟರ್‌ಟೈನ್‌ಮೆಂಟ್ ಇಂಡಸ್ಟ್ರಿಯೇ AI ವಿರುದ್ಧ ಮುಷ್ಕರಕ್ಕಿಳಿದಿದ್ದವು. ಹಾಲಿವುಡ್ ಅಕ್ಷರಶಃ ನಿಷ್ಕ್ರಿಯಗೊಂಡಿತ್ತು.

ಹಾಲಿವುಡ್‌ನ ಪ್ರಮುಖ ನಿರ್ಮಾಣ ಸಂಸ್ಥೆಗಳಾದ ವಾಲ್ಟ್‌ಡಿಸ್ನಿ, ನೆಟ್‌ಫ್ಲಿಕ್ಸ್, ಪ್ಯಾರಾಮೌಂಟ್ ಮುಂತಾದವುಗಳನ್ನೊಳಗೊಂಡ ಅಲಯನ್ಸ್ ಆಫ್ ಮೋಷನ್ ಪಿಕ್ಚರ್ಸ್ ಮತ್ತು ಟೆಲಿವಿಷನ್ ಪ್ರೊಡ್ಯೂಸರ್ಸ್ (ಎಎಂಪಿಟಿಪಿ) ಸಂಘಟನೆಗಳ ಜೊತೆಗೆ ಕಲಾವಿದರ ಒಕ್ಕೂಟ ಮಾತುಕತೆ ನಡೆಸಿಯಾಗಿದೆ. ಜಗತ್ತಿನ ಸಿನಿಮಾ ಪ್ರೇಮಿಗಳ ಕಣ್ಣುಗಳೆಲ್ಲಾ ಮುಂದೇನಾಗಬಹುದೆಂಬ ಕುತೂಹಲದೊಂದಿಗೆ ಆರಂಭಗೊಂಡಿರುವ ಹಾಲಿವುಡ್‌ನ ಈ ರೋಚಕ ಟ್ವಿಸ್ಟ್‌ನ ಕಡೆ ದೃಷ್ಟಿ ಹರಿಸಿವೆ. ವಿಶೇಷವೆಂದರೆ ಬರಹಗಾರರು ಹೋರಾಟಕ್ಕಿಳಿದಾಗ ಕಲಾವಿದರು ಸುಮ್ಮನಿರುತ್ತಿದ್ದರು. ಕೆಲವೊಮ್ಮೆ ಕಲಾವಿದರ ಸಂಘ ಹೊರಗಿನಿಂದ ಬೆಂಬಲ ಕೊಡುತ್ತಿತ್ತು. ತಾರೆಯರು ಮುಷ್ಕರಕ್ಕಿಳಿದರೆ ಬರಹಗಾರರೂ ಹೀಗೆಯೇ ಬೆಂಬಲಿಸುತ್ತಿದ್ದರು.

1960ರ ನಂತರ ಇದೇ ಮೊದಲ ಬಾರಿಗೆ ಅಮೆರಿಕಾದಲ್ಲಿ ತಾರೆಯರು ಮತ್ತು ಬರಹಗಾರರು ಹಾಲಿವುಡ್‌ನ ಅಂಗಳದಲ್ಲಿ AIನ ಚಮತ್ಕಾರದ ಮುಂದೆ ಒಟ್ಟಿಗೇ ಮುಷ್ಕರಕ್ಕೆ ಇಳಿದಿದ್ದು AI ತಂತ್ರಜ್ಞಾನದ ದೆಸೆಯಿಂದ. ಹೇಗಿದೆ ನೋಡಿ! ಮನುಷ್ಯನ ಅತಿಯಾದ ವಿಜ್ಞಾನದ ಬೆಳವಣಿಗೆಯ ತಾಂತ್ರಿಕತೆಯ ಪರಿಣಾಮ. ಯಾವ ರೋಬೋಗಳ ಕಥೆಗಳನ್ನಿಟ್ಟುಕೊಂಡು ಕಲಾವಿದರು ಸಿನಿಮಾ ಮಾಡಿ ಗೆದ್ದರೋ, ಆ ರೋಬೋಗಳ ಆತ್ಮದಂತಿರುವ ಈ AI ಟೆಕ್ನಾಲಜಿ ಅದರದ್ದೇ ಕಥೆ ಮಾಡಿ ಗೆದ್ದವರ ನಿದ್ದೆ ಕೆಡಿಸಿದೆ. ಡಿಸ್ನಿಯಂಥ ವಿಶ್ವ ಪ್ರಸಿದ್ಧ ಸ್ಟುಡಿಯೋ ಕೂಡ ತಾರೆಯರ ಮತ್ತು ಬರಹಗಾರರ ಬೇಡಿಕೆಯ ಪರವಾಗಿ ಇಲ್ಲ. ಅಂದರೆ ಡಿಸ್ನಿ ಸ್ಟುಡಿಯೋ ಕೂಡ AI ತಂತ್ರಜ್ಞಾನದ ಪರವಾಗಿದೆ.

ಇಷ್ಟಾಗಿಯೂ ಈ AIನ ಮುಂದೆ ಸಮಾಧಾನಪಟ್ಟುಕೊಳ್ಳಬಹುದಾದ ಅಂಶವೇನೆಂದರೆ ಮನುಷ್ಯನ ಸಿನಿಮಾ ಕಥಾ ಹಂದರಗಳಿಗೆ, ಚಿಂತನೆಗಳಿಗೆ, ಭಾವನೆಗಳಿಗೆ ಸರಿಗಟ್ಟುವಂತೆ ಚಿಂತಿಸಲು ಹಾಗೂ ಸಿನಿಮಾ ನಿರ್ಮಿಸಲು AI ಸೃಷ್ಟಿಸಿದ ಕಥೆಗಳಿಗಾಗಲಿ, ಸಿನಿಮಾಗಳಿಗಾಗಲಿ ಅಸಹಜತೆ ಇರುವುದಿಲ್ಲ. ಕಾರಣ ಅಭಿನಯದಲ್ಲಿ, ಭಾವಕೌಶಲದಲ್ಲಿ, ಜೀವ ಬಂಧುರದಲ್ಲಿ ಕಲಾ ಪ್ರೌಢಿಮೆಯಲ್ಲಿ ಮನುಷ್ಯ ಸಂಬಂಧಿ ಭಾವಬಂಧಗಳಲ್ಲಿ ವ್ಯಕ್ತವಾಗುವ ತಾಜಾತನವನ್ನು ವ್ಯಕ್ತಿಪಡಿಸಲು ಕಲಾವಿದರೇ ಆಗಬೇಕು. ಬರಹಗಾರರೇ ಬರೆಯಬೇಕು ಎಂಬುದನ್ನು ಪ್ರೇಕ್ಷಕ ಪ್ರಭು ಬಯಸುತ್ತಾನೆ. ಇದೇ ಸದ್ಯದ ಸಮಾಧಾನ! ಇಷ್ಟಾಗಿಯೂ, ಮುಂದೊಂದು ದಿನ ಮನುಷ್ಯ ಚಿತ್ರಿತ ಪರಿಕಲ್ಪನೆಗಳೆಲ್ಲವೂ, ಮುಂದೊಂದು ದಿನ ತನ್ನಿಂದಲೂ ಸಾಧ್ಯ ಎಂಬುದನ್ನು ಈ AI ಸಾಬೀತುಪಡಿಸಿದರೆ ಏನು ಮಾಡುವುದು. 'ಕಾಲಾಯತಸ್ಮೈ ನಮಃ' ಏನಂತೀರಿ?.

ಕೌತುಕದ ಚಂದ್ರಗ್ರಹಣ

ಇದು 2026ನೇ ವರ್ಷದ ಪ್ರಥಮ ಚಂದ್ರ ಗ್ರಹಣ. ಗ್ರಹಣಗಳು ಖಗೋಳದ ಅಪರೂಪದ ವಿಸ್ಮಯಕಾರಿ ಘಟನೆಗಳು

ಇಂತಹ ಗ್ರಹಣಗಳನ್ನು ಪೂರ್ವಭಾವಿಯಾಗಿ ಇಂತಹ ದಿನ, ಇಷ್ಟೇ ಸಮಯಕ್ಕೆ ಪ್ರಾರಂಭವಾಗಿ ಇಷ್ಟೇ ಸಮಯಕ್ಕೆ ಬಿಡುಗಡೆಯಾಗುತ್ತದೆ ಎಂದು ಹೇಳುವ ಜ್ಯೋತಿರ್ವಿಜ್ಞಾನವೂ ಒಂದು ವಿಸ್ಮಯಕಾರಿ ವಿಷಯವೇ ಆಗಿದೆ. ಗ್ರಹಣಕಾಲ ಆಧ್ಯಾತ್ಮ ದೃಷ್ಟಿಕೋನದಿಂದಲೂ ಒಂದು ವಿಶಿಷ್ಟ ಸಮಯ. ನಮ್ಮ ಋಷಿ ಮುನಿಗಳು ಇದನ್ನು ಪರ್ವಕಾಲ, ಸಿದ್ಧಿ ಸಮಯ ಎಂದು ಕರೆದರು.

ತಂತ್ರ ಯಂತ್ರ ಸಾಧಕರು, ಅಘೋರಿಗಳು ಈ ಸಮಯವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಹಲವು ರೀತಿಯ ಸಿದ್ಧಿ ಸಾಧಿಸುತ್ತಾರೆ. ಇಂತಹ ಅಪೂರ್ವ ಸಮಯದಲ್ಲಿ ಜಪ, ತಪ, ಧ್ಯಾನ, ಹೋಮ, ಹವನ, ದಾನಗಳನ್ನು ಆಚರಿಸುವುದರಿಂದ ನಮ್ಮ ಮನೋಕಾಮನೆಗಳು ಪೂರ್ಣಗೊಳ್ಳುತ್ತವೆ ಎಂದೂ, ನಮ್ಮ ಅರ್ಜಿತ ಕರ್ಮಗಳು ಸವೆಯುತ್ತವೆ ಎಂದೂ ನಮ್ಮ ಅನೇಕ ಪೂರ್ವ ಗ್ರಂಥಗಳಲ್ಲಿ ಸಾರಿ ಸಾರಿ ಹೇಳಿದೆ.

ಇದನ್ನೆಲ್ಲಾ ನಮ್ಮ ಆತ್ಮ ಸಂತೋಷಕ್ಕಾಗಿ ಮಾಡಬೇಕಷ್ಟೇ ಹೊರತು ಯಾರನ್ನು ಮೆಚ್ಚಿಸಲು ಅಲ್ಲ. ಶುದ್ಧಾಂತಕರಣದಿಂದ ಆ ಜಗನ್ನಿಯಾಮಕನಾದ ಭಗವಂತನ ನಾಮಸ್ಮರಣೆ, ಪಿತೃ ದೇವತಾದಿಗಳಿಗೆ ತರ್ಪಣ ಸ್ನಾನಗಳನ್ನು ಆಚರಿಸಿ ಕೃತಕೃತ್ಯರಾಗಬಹುದಾಗಿದೆ.



ಚಂದ್ರಗ್ರಹಣ ಯಾವಾಗಲೂ ಹುಣ್ಣಿಮೆಯಂದು ಘಟಿಸುತ್ತದೆ. ಸೂರ್ಯ, ಭೂಮಿ ಮತ್ತು ಚಂದ್ರ ಈ ಮೂರು ಆಕಾಶ ಕಾಯಗಳ ಅಂತರ ನಮಗೆ ತಿಳಿದಿರುವುದರಿಂದ ಅವು ಅಂತರಿಕ್ಷದಲ್ಲಿ ನಿರ್ಮಿಸುವ ನೆರಳು ಎಷ್ಟು ದೂರದವರೆಗೆ ಚಾಚಬಹುದು ಎಂದು ಗುಣಿಸಬಹುದಾಗಿದೆ. ಚಂದ್ರನಿಂದ ಭೂಮಿಗೆ ಇರುವ ದೂರವೂ, ಭೂಮಿಯಿಂದ ಸೂರ್ಯನಿಗೆ ಇರುವ ದೂರವೂ ವ್ಯತ್ಯಾಸಗೊಳ್ಳುತ್ತಿರುತ್ತದೆ. ಹಾಗಾಗಿ ಅವು ಬಿಂಬಿಸುವ ನೆರಳು ತೀರಾ ಉದ್ದವಾದಾಗ 8,71,000 ಮೈಲಿ ಉದ್ದವೂ, ತೀರ ಗಿಡ್ಡವಾದಾಗ 8,43,000 ಮೈಲಿ ಉದ್ದವೂ ಆಗಿರುತ್ತದೆ. ಈ ಮೂರು ಆಕಾಶ ಕಾಯಗಳು ಒಂದೇ ರೇಖೆಗೆ ಬಂದಾಗ ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದರಿಂದ ಚಂದ್ರಗ್ರಹಣ ಉಂಟಾಗುತ್ತದೆ.


ದಿನಾಂಕ: 03-03-2026ರ ಮಂಗಳವಾರ ಖಗ್ರಾಸ ಕೇತುಗ್ರಸ್ಥ ಚಂದ್ರಗ್ರಹಣ. ಇದನ್ನು ರಕ್ತ ಚಂದ್ರ ಗ್ರಹಣ (Blood Moon) ಎಂದು ಕರೆಯಲಾಗಿದೆ. ಈ ಸಂವತ್ಸರದ ಫಾಲ್ಗುಣ ಮಾಸ ಶುಕ್ಲ ಪೌರ್ಣಿಮೆ ದಿನ ಗ್ರಹಣ ವಿವರ ಈ ರೀತಿ ಇದೆ:

ಗ್ರಹಣ ಸ್ಪರ್ಶ ಕಾಲ ಮ. 3.20
ಗ್ರಹಣ ಮಧ್ಯಕಾಲ ಸಂ. 5.04
ಗ್ರಹಣ ಮೋಕ್ಷಕಾಲರಾ. 6.48

ದ್ವಾದಶ ರಾಶಿಯವರಿಗೆ ಗ್ರಹಣ ಫಲ: ಮೇಷ, ಕಟಕ, ಧನುಸ್ಸು, ಕುಂಭ ರಾಶಿಯವರಿಗೆ ಮಿಶ್ರಫಲ. ವೃಷಭ, ಸಿಂಹ, ಕನ್ಯಾ, ಮಕರ ರಾಶಿಯವರಿಗೆ ಅಶುಭ ಫಲ. ಮಿಥುನ, ತುಲಾ, ವೃಶ್ಚಿಕ, ಮೀನ ರಾಶಿಯವರಿಗೆ ಶುಭ ಫಲ.

ಗ್ರಹಣ ಫಲ ಒಂದು ತಿಂಗಳ ಅವಧಿಗೆ ಅನುಭವಕ್ಕೆ ಬರುವುದು. ಗ್ರಹಣದ ದಿನ ಹಗಲು 12.10 ರವರೆಗೆ ಭೋಜನಾದಿಗಳಿಗೆ ಅವಕಾಶ ಉಂಟು. ಬಾಲಕರು, ವೃದ್ಧರು, ರೋಗಿಗಳು, ಅಶಕ್ತರು ಈ ದಿನ ಹಗಲು 3.15ರವರೆಗೂ ಆಹಾರ ಸೇವಿಸಬಹುದು. ಅಶುಭ ಫಲ ಇರುವವರು ಗ್ರಹಣ ನಿಮಿತ್ತ ಶಾಂತಿ ಮಾಡಿಸಿಕೊಳ್ಳುವುದು ಶ್ರೇಯಸ್ಕರ. ಗ್ರಹಣ ಕಾಲದಲ್ಲಿ ಇಷ್ಟದೇವರ ಧ್ಯಾನ, ನಾಮಸ್ಮರಣೆ ಮಾಡುವುದು. ಗ್ರಹಣ ಮೋಕ್ಷಾ ನಂತರ ಸ್ನಾನ, ಪೂಜಾದಿಗಳನ್ನು ಮಾಡಿ ಆಹಾರ ಸೇವಿಸಬಹುದು.

ಮೈಸೂರಿನಲ್ಲಿ ಚಂದ್ರೋದಯ ಸಂಜೆ 6.32 ಆಗುವುದರಿಂದ, ಮೈಸೂರಿನಲ್ಲಿ 16 ನಿಮಿಷಗಳ ಕಾಲ ಚಂದ್ರಗ್ರಹಣ ಗೋಚರಿಸುವುದು.



ವಿ.ಕೇಶವಮೂರ್ತಿ
ಜ್ಯೋತಿಷ ವಿದ್ವಾನ್
ಮೊ. 9740973224

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನೌಕರನಿಂದಲೇ ಕಂಪನಿಗೆ ಲಕ್ಷಾಂತರ ರೂ. ವಂಚನೆ ಆರೋಪ; ಪ್ರಕರಣ ದಾಖಲು

ಮೈಸೂರು,ಮಾ.2(ಪಿಎಂ)– ಮಾರ್ಕೇಟಿಂಗ್ ಕಂಪನಿಯೊಂದಕ್ಕೆ ನೌಕರನೇ 34,59,897 ರೂ. ವಂಚಿಸಿರುವ ಸಂಬಂಧ ಕಂಪನಿ ಮಾಲೀಕರು ನೀಡಿದ ದೂರಿನನ್ವಯ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದಯಗಿರಿ ನಿವಾಸಿ ಮಹೇಶ್ ಎಂಬುವರ ವಿರುದ್ಧ ಕಂಪನಿ ಮಾಲೀಕ ಮಧು ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ. ಸ್ಯಾನಿಟರ್ ಮತ್ತು ಪೈಪ್ ಐಟಂಗಳನ್ನು ಕಂಟ್ರಾಕ್ಟ್ ಮಾಡುವ ಗುತ್ತಿಗೆದಾರಿಗೆ ಹೋಲ್‌ಸೇಲ್ ದರದಲ್ಲಿ ಮಾರಾಟ ಮಾಡುವ ಮಾರ್ಕೆಟಿಂಗ್ ಕಂಪನಿಯನ್ನು 10 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, 2017ರಲ್ಲಿ ಮಹೇಶ್ ಕೆಲಸಕ್ಕೆ ಸೇರಿಕೊಂಡಿದ್ದು, ಪ್ರಾರಂಭದಲ್ಲಿ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದ ಈತ, ನಂತರದಲ್ಲಿ ಕಂಪನಿಯ ಸಂಪೂರ್ಣ ವ್ಯಾಪಾರವನ್ನು ನೋಡಿಕೊಂಡು ಬರುತ್ತಿದ್ದ. ನಾನು ಬೆಂಗಳೂರಿನಲ್ಲಿದ್ದು, ಆಗಾಗ್ಗೆ ಮೈಸೂರಿಗೆ ಬಂದು ಕಂಪನಿ ವ್ಯವಹಾರ ನೋಡಿಕೊಂಡು ಹೋಗುತ್ತಿದ್ದೆ ಎಂದು ಮಧು ದೂರಿನಲ್ಲಿ ತಿಳಿಸಿದ್ದಾರೆ.

2023ರ ಏ.1ರಿಂದ 2024ರ ಮಾ.31ರವರೆಗೆ ಕಂಪನಿ ಹಣಕಾಸು ವ್ಯವಹಾರವನ್ನು ಆಡಿಟ್ ಮಾಡಿಸಿದ ವೇಳೆ ಸುಮಾರು 92,99,533 ರೂ. ವ್ಯತ್ಯಾಸ ಕಂಡು ಬಂದಿತು. ಈ ಬಗ್ಗೆ ಮಹೇಶನನ್ನು ವಿಚಾರಿಸಿದಾಗ ಕಂಪನಿಗೆ ಜಮಾ ಮಾಡಬೇಕಿದ್ದ ಹಣದಲ್ಲಿ ಸ್ವಲ್ಪ ನಾನು ಬಳಸಿಕೊಂಡಿದ್ದೇನೆ ಎಂದು ಒಪ್ಪಿಕೊಂಡು, ಹಂತ ಹಂತವಾಗಿ ಕ್ರಮವಾಗಿ 18,10,000 ರೂ., 28,29,000 ರೂ. ಹಾಗೂ 10,42,000 ರೂ.ಗಳನ್ನು ಕಂಪನಿಗೆ ಹಿಂತಿರುಗಿಸಿದ್ದು, 34,59,897 ರೂ. ಅನ್ನು ಬಾಕಿ ಉಳಿಸಿಕೊಂಡು ವಾಪಸ್ಸು ನೀಡದೇ ವಂಚನೆ ಮಾಡಿದ್ದಾನೆ ಎಂದು ಮಧು ದೂರಿನಲ್ಲಿ ಆರೋಪಿಸಿದ್ದಾರೆ.

ನಜರ್‌ಬಾದ್ ಫುಟ್‌ಪಾತ್‌ನಲ್ಲಿರುವ ಮದ್ಯದ ಕೌಂಟರ್ ತೆರವಿಗೆ ಸ್ಥಳೀಯರ ಆಗ್ರಹ

ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ

ಮೈಸೂರು, ಮಾ.2– ಮೈಸೂರು ನಜರ್‌ಬಾದ್‌ನ ಥಿಯೋಬಾಲ್ಡ್ ರಸ್ತೆಯ ಫುಟ್‌ಪಾತ್‌ನಲ್ಲಿರುವ ಅನಧಿಕೃತ ಮದ್ಯ ಮಾರಾಟ ಕೌಂಟರ್ ಅನ್ನು ತೆರವುಗೊಳಿಸುವಂತೆ ಸ್ಥಳೀಯರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಈ ರಸ್ತೆಯಲ್ಲಿನ ಕ್ರಿಸ್ಟಲ್ ಪಾರ್ಕ್ ಇನ್ ಹೋಟೆಲ್‌ಗೆ ಮಂಜೂರಾಗಿರುವ ಸಿಎಲ್–7 ಲೈಸೆನ್ಸ್ ಅನ್ನು ದುರ್ಬಳಕೆ ಮಾಡಿಕೊಂಡು ಫುಟ್‌ಪಾತ್‌ನಲ್ಲಿ ಅನಧಿಕೃತವಾಗಿ ಕೌಂಟರ್ ತೆರೆಯಲಾಗಿದೆ. ನಿಯಮಾನುಸಾರ ಹೋಟೆಲ್ ಒಳಭಾಗದಲ್ಲಿ ಅಲ್ಲಿನ ಗ್ರಾಹಕರಿಗಷ್ಟೇ ಮದ್ಯ ಸರಬರಾಜು ಮಾಡಬೇಕು. ಆದರೆ ಫುಟ್‌ಪಾತ್‌ನಲ್ಲಿ ಕೌಂಟರ್ ತೆರೆದು ಮದ್ಯ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಮದ್ಯ ಮಾರಾಟ ಕೇಂದ್ರದ ಎದುರು ಸ್ತ್ರೀ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ದೇವಸ್ಥಾನವಿದೆ. ಈ ರಸ್ತೆಯಲ್ಲಿ ಸದಾ ವಾಹನ ದಟ್ಟಣೆ ಇರುತ್ತದೆ. ಮದ್ಯ ಖರೀದಿಸಲು ಬರುವವರು ವಾಹನಗಳನ್ನು ಅಡ್ಡಾದಿಡ್ಡಿ ನಿಲುಗಡೆ ಮಾಡುವುದರಿಂದ ಸಂಚಾರಕ್ಕೆ ತೀವ್ರ ಅಡ್ಡಿಯಾಗುತ್ತಿದೆ. ಆಸ್ಪತ್ರೆ ಹಾಗೂ ದೇವಸ್ಥಾನಕ್ಕೆ ಬರುವವರಿಗೂ ತೀವ್ರ ಮುಜುಗರ ಉಂಟಾಗುತ್ತಿದೆ ಎಂದು ತಿಳಿಸಿದ್ದಾರೆ.

ಈ ಕೌಂಟರ್ ನಡೆಸುತ್ತಿರುವ ಕಟ್ಟಡವನ್ನು ಫುಟ್‌ಪಾತ್ ಅತಿಕ್ರಮಿಸಿಕೊಂಡು ನಿರ್ಮಿಸಲಾಗಿದೆ. ಪಾಲಿಕೆಯಿಂದ ಯಾವುದೇ ಪರವಾನಗಿ ಮತ್ತು ಅನುಮತಿ ನೀಡಿಲ್ಲ. ಆದರೂ ಅನಧಿಕೃತ ಕಟ್ಟಡದಲ್ಲಿ ಮದ್ಯ ಮಾರಾಟ ಕೇಂದ್ರ ತೆರೆಯಲಾಗಿದೆ. ಈ ಹಿಂದೆ ವಿರೋಧಿಸಿದ್ದರಿಂದ ಮದ್ಯದ ಕೌಂಟರ್ ಮುಚ್ಚಲಾಗಿತ್ತು. ಆದರೆ ಈಗ ಮತ್ತೆ ಕೌಂಟರ್ ತೆರೆದಿದ್ದರೂ ಮೈಸೂರು ಅಬಕಾರಿ ಅಧಿಕಾರಿಗಳು ಯಾವುದೋ ಪ್ರಭಾವಕ್ಕೆ ಒಳಗಾಗಿ ಮೌನ ವಹಿಸಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಕ್ರಮವಹಿಸಿ, ಮದ್ಯದ ಕೌಂಟರ್ ಅನ್ನು ತೆರವುಗೊಳಿಸಲು ಸೂಚನೆ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಈ ಮನವಿ ಪತ್ರವನ್ನು ಅಬಕಾರಿ ಸಚಿವರು, ಇಲಾಖೆ ಅಧಿಕಾರಿಗಳು ಹಾಗೂ ಮಹಾನಗರ ಪಾಲಿಕೆ ಆಯುಕ್ತರಿಗೂ ಕಳುಹಿಸಿ, ಕ್ರಮಕ್ಕೆ ಆಗ್ರಹಿಸಲಾಗಿದೆ.

ನಾಳೆ ಭವ್ಯ ಪುಷ್ಪ ಹೋಳಿ ಮಹೋತ್ಸವ

ಮೈಸೂರು,ಮಾ.2(ಎಂಟಿವೈ)– ಗೌರ ಪೂರ್ಣಿಮೆ ಹಾಗೂ ಹೋಳಿ ಹಬ್ಬದ ಅಂಗವಾಗಿ ಮಾ.4ರಂದು ಸಂಜೆ 6.30ಕ್ಕೆ ಮೈಸೂರಿನ ಹುಣಸೂರು ರಸ್ತೆ ಎಸ್‌ಆರ್‌ಕೆ ಕನ್ವೆನ್ಷನ್ ಹಾಲ್‌ನಲ್ಲಿ ಭವ್ಯ ಪುಷ್ಪ ಹೋಳಿ ಮಹೋತ್ಸವ ಆಯೋಜಿಸಲಾಗಿದೆ ಎಂದು ವೃಂದಾವನ್ ಸಂಸ್ಥೆಯ ವೇದಶ್ರೀ ಫೌಂಡೇಷನ್ ಸಂಸ್ಥಾಪಕಿ ದಿವ್ಯಾ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 500 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ಅವತರಿಸಿದ ಚೈತನ್ಯ ಮಹಾಪ್ರಭುಗಳು, ಶ್ರೀಕೃಷ್ಣನ ಪವಿತ್ರನಾಮದ ಸಮೂಹ ಕೀರ್ತನೆ ಮೂಲಕ ಕೃಷ್ಣನ ದಿವ್ಯ ಉಪದೇಶ ಪ್ರಸಾರ ಮಾಡಿದರು. ಇದರ ಅಂಗವಾಗಿ ಪುಷ್ಪ ಹೋಳಿ ಮಹೋತ್ಸವ ಆಯೋಜಿಸಲಾಗುತ್ತಿದೆ ಎಂದರು.

ಸಂಸ್ಥೆಯ ವಿಕಾಸ್ ಮಾತನಾಡಿ, ಅಂದು ಶ್ರೀ ರಾಧಾಕೃಷ್ಣರ ಭವ್ಯ ವಿಗ್ರಹಗಳಿಗೆ ಪುಷ್ಪಾಭಿಷೇಕ ಮಾಡಿ, ಜೊತೆಗೆ ಸುಮಾರು 450 ಕೆಜಿ ಪುಷ್ಪದ ಎಸಳುಗಳಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡವರು ಪುಷ್ಪ ಹೋಳಿಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು. 20ಕ್ಕೂ ಹೆಚ್ಚು ವೈವಿಧ್ಯಮಯ ಸಾತ್ವಿಕ ಬಫೆ ಇರಲಿದೆ. ಹೆಚ್ಚಿನ ಮಾಹಿತಿಗೆ ದೂ. 90352 76643 ನ್ನು ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ವೃಂದಾವನ್ ಸಂಸ್ಥೆಯ ಲಿಂಗರಾಜು ಇದ್ದರು.

ನೆತನ್ಯಾಹು ಕಚೇರಿ, ಇಸ್ರೇಲಿ ಕಮಾಂಡರ್ ಮೇಲೆ ಕ್ಷಿಪಣಿ ದಾಳಿ

ಟೆಲ್ ಅವೀವ್: ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಇಂದು ಟೆಲ್ ಅವೀವ್‌ನಲ್ಲಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಚೇರಿ ಮೇಲೆ ದಾಳಿ ನಡೆಸಿದೆ.

ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಪ್ರತೀಕಾರವಾಗಿ ಇಸ್ರೇಲ್ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳ ಮೇಲೆ ಇರಾನ್ ತನ್ನ ದಾಳಿಯನ್ನು ತೀವ್ರಗೊಳಿಸಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿ, ಹೈಫಾದಲ್ಲಿನ ಭದ್ರತಾ ಮತ್ತು ಮಿಲಿಟರಿ ಕೇಂದ್ರಗಳು ಹಾಗೂ ಪೂರ್ವ ಜೆರುಸಲೆಮ್ ಮೇಲೆ ದಾಳಿ ಮಾಡಲಾಗಿದೆ.

ಜಿಯೋನಿಸ್ಟ್ ಆಡಳಿತದ ಕ್ರಿಮಿನಲ್ ಪ್ರಧಾನಿಯ ಕಚೇರಿ ಮತ್ತು ಆಡಳಿತದ ವಾಯುಪಡೆಯ ಕಮಾಂಡರ್‌ನ ಪ್ರಧಾನ ಕಚೇರಿಯನ್ನು ಗುರಿಯಾಗಿಸಲಾಗಿತ್ತು ಎಂದು ಇರಾನ್ ಹೇಳಿದೆ. ದಾಳಿಯಲ್ಲಿ ಖೈಬರ್ ಕ್ಷಿಪಣಿಗಳನ್ನು ಬಳಸಲಾಗಿದೆ ಎಂದು ತಿಳಿಸಿದೆ.

ಅಮೆರಿಕ–ಇಸ್ರೇಲಿ ಏರ್‌ಸ್ಟ್ರೈಕ್‌ನಿಂದ ಇರಾನ್‌ನಲ್ಲಿ ಇದುವರೆಗೆ ಕನಿಷ್ಠ 555 ಜನರು ಸಾವನ್ನಪ್ಪಿದ್ದಾರೆ ಎಂದು ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿ ತಿಳಿಸಿದೆ. ಶನಿವಾರದಿಂದ ಇಸ್ರೇಲ್ ಮತ್ತು ಅಮೆರಿಕ ಇರಾನ್‌ನಾದ್ಯಂತ ದಾಳಿಗಳನ್ನು ನಡೆಸಿವೆ. ಖಮೇನಿ ಹತ್ಯೆಯೊಂದಿಗೆ ಪ್ರಾರಂಭವಾದ ಯುದ್ಧವು ಈ ಪ್ರದೇಶವನ್ನು ಆವರಿಸಿದೆ. ದುಬೈ, ಬಹ್ರೇನ್, ಇರಾಕ್ ಮತ್ತು ಇತರೆಡೆಗಳಲ್ಲಿ ಸ್ಫೋಟಗಳ ಸದ್ದು ಮೊಳಗುತ್ತಿವೆ.

ಕುವೈತ್‌ನಲ್ಲಿರುವ ಯುಎಸ್ ರಾಯಭಾರ ಕಚೇರಿಯಿಂದ ಕಪ್ಪು ಹೊಗೆ ಹೊರ ಹೊಮ್ಮಿದೆ. ಆದರೆ, ಯುಎಸ್ ಯುದ್ಧ ವಿಮಾನಗಳನ್ನು ಇರಾನ್ ಹೊಡೆದುರುಳಿಸಿದ್ದು, ಪೈಲಟ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇರಾನ್ ಕೊಲ್ಲಿಯಲ್ಲಿ ಮೂರನೇ ದಿನ ಪ್ರತೀಕಾರದ ದಾಳಿ ಮುಂದುವರಿದಿದೆ.

ಮಾ.5, 6ರಂದು ಮೆಮು ರೈಲು ಸಂಚಾರ ಭಾಗಶಃ ರದ್ದು

ಮೈಸೂರು, ಮಾ.2– ರಾಮನಗರ ರೈಲ್ವೆ ನಿಲ್ದಾಣದ ಯಾರ್ಡ್‌ನಲ್ಲಿ ಎಂಜಿನಿಯರಿಂಗ್ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಎರಡು ದಿನ ಮೆಮು ರೈಲುಗಳ ಸಂಚಾರ ಭಾಗಶಃ ರದ್ದುಗೊಳ್ಳಲಿದೆ.

ಮಾ.5ರಂದು ಅಶೋಕಪುರಂನಿಂದ ತೆರಳುವ ಅಶೋಕಪುರಂ–ಬೆಂಗಳೂರು ರೈಲು(ಸಂಖ್ಯೆ 66580) ಚನ್ನಪಟ್ಟಣದವರೆಗೆ ಮಾತ್ರ ಸಂಚರಿಸಲಿದೆ. ಚನ್ನಪಟ್ಟಣದಿಂದ ಕೆಎಸ್‌ಆರ್ ಬೆಂಗಳೂರು ನಡುವಿನ ಸಂಚಾರವನ್ನು ರದ್ದುಪಡಿಸಲಾಗಿದೆ.

ಮಾರ್ಚ್ 6ರಂದು ಬೆಂಗಳೂರು–ಅಶೋಕಪುರಂ ರೈಲು(ಸಂಖ್ಯೆ 66579) ಬೆಂಗಳೂರು ಬದಲಿಗೆ ಚನ್ನಪಟ್ಟಣದಿಂದ ಹೊರಡಲಿದೆ. ಬೆಂಗಳೂರು ಮತ್ತು ಚನ್ನಪಟ್ಟಣ ನಡುವೆ ಈ ರೈಲು ಸೇವೆ ಲಭ್ಯವಿರುವುದಿಲ್ಲ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ ಧರ್ಮರಾಜ ಕಲಗೊಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಬಿಕ್ಕಟ್ಟು; ಭಾರತಕ್ಕೆ ಪೂರೈಕೆಯಾಗುವ ಅಡುಗೆ ಅನಿಲ, ಕಚ್ಚಾ ತೈಲದಲ್ಲಿ ಕೊರತೆ ಸಾಧ್ಯತೆ



ಮೈಸೂರು,ಮಾ.2(ಪಿಎಂ)– ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಸಮರ ಸಾರಿದ ಪರಿಣಾಮ ಮಧ್ಯಪ್ರಾಚ್ಯದಲ್ಲಿ ಬಿಕ್ಕಟ್ಟು ನಿರ್ಮಾಣವಾಗಿದ್ದು, ಇದರಿಂದ ಭಾರತಕ್ಕೆ ಪೂರೈಕೆಯಾಗುವ ಅಡುಗೆ ಅನಿಲ ಹಾಗೂ ಕಚ್ಚಾ ತೈಲದಲ್ಲಿ ಕೊರತೆ ಉಂಟಾಗುವ ಸನ್ನಿವೇಶ ಎದುರಾಗಿದೆ.

ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದೆ ಎಂದು ಅಲ್ಲಿನ ಸರ್ಕಾರಿ ಸ್ವಾಮ್ಯದ ಮಾಧ್ಯಮ ವರದಿ ಮಾಡಿದೆ. ವಿಶ್ವದ ಕಚ್ಚಾ ತೈಲ ಹಾಗೂ ಅನಿಲ ರಫ್ತಿನಲ್ಲಿ ಶೇ.20ರಷ್ಟು ಈ ಜಲಸಂಧಿಯ ಮೂಲಕವೇ ಆಗುತ್ತದೆ. ಸದರಿ ಜಲಸಂಧಿಯು ದೀರ್ಘ ಕಾಲದವರೆಗೆ ಮುಚ್ಚಿದರೆ ಕಚ್ಚಾತೈಲ ಹಾಗೂ ಅನಿಲ ಸರಬರಾಜು ಸಂಬಂಧ ಭಾರತದ ಮೇಲೆ ಪರಿಣಾಮ ಉಂಟಾಗಲಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರಿನ ನಗರದ ಅಮರ್‌ದೀಪ್ ಗ್ಯಾಸ್ ಏಜೆನ್ಸಿ ಮಾಲೀಕರೂ ಆದ ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್, ಇರಾನ್ ಮತ್ತು ಯುಎಇ (ಯುನೈಟೆಡ್ ಅರಬ್ ಎಮಿರೇಟ್ಸ್)ಯಿಂದ ಭಾರತಕ್ಕೆ ಶೇ.40ರಷ್ಟು ಎಲ್‌ಪಿಜಿ, ಸಿಎಲ್‌ಜಿ ಹಾಗೂ ಕಚ್ಚಾತೈಲ ಪೂರೈಕೆಯಾಗುತ್ತದೆ. ಇವು ಹೊರ್ಮುಜ್ ಜಲಸಂಧಿ ಮಾರ್ಗ ಮೂಲಕ ಹಡಗುಗಳಲ್ಲಿ ಸರಬರಾಜು ಆಗಲಿದೆ. ಆ ಮೂಲಕ ಭಾರತದ ಮಂಗಳೂರು ಬಂದರು ಸೇರಿದಂತೆ ಭಾರತದ ವಿವಿಧ ಬಂದರುಗಳಿಗೆ ಬಂದಿಳಿಯಲಿದೆ. ಹಾಗಾಗಿ ಶೇ.40ರಷ್ಟು ಪೂರೈಕೆಯಾಗುವುದು ಸ್ಥಗಿತಗೊಂಡರೆ ಭಾರತದ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ. ಕೇವಲ 10ರಷ್ಟು ವ್ಯತ್ಯಯ ಉಂಟಾದರೆ ಸಾಕಷ್ಟು ಸಮಸ್ಯೆಗಳು ಭಾರತದಲ್ಲಿ ತಲೆದೋರಲಿದೆ. ಇನ್ನು ಶೇ.40ರಷ್ಟು ಎಂದರೆ ಸಮಸ್ಯೆಯನ್ನು ಊಹಿಸಲು ಅಸಾಧ್ಯವೇ ಸರಿ ಎಂದು ಆತಂಕ ವ್ಯಕ್ತಪಡಿಸಿದರು.

ವೆನೆಜುವೆಲಾ ಹಾಗೂ ರಷ್ಯಾದ ಕಚ್ಚಾ ತೈಲವನ್ನು ಭಾರತದಲ್ಲಿ ಸಂಸ್ಕರಣೆ ಮಾಡುವ ವ್ಯವಸ್ಥೆ ಇದೆ. ಯುದ್ಧ ಮುಂದುವರೆದಲ್ಲಿ ಪೂರೈಕೆಯಲ್ಲಿ ಕೊರತೆ ಸಹಜವಾಗಿಯೇ ಆಗಲಿದ್ದು, ಈಗಾಗಲೇ ಹೇಳಿದಂತೆ ಶೇ.40ರಷ್ಟು ಅನಿಲ ಹಾಗೂ ಕಚ್ಚಾತೈಲ ಕೊರತೆಯನ್ನು ಭಾರತ ಸರ್ಕಾರ ಹೇಗೆ ಸರಿದೂಗಿಸುತ್ತದೆ ಎಂಬುದು ಕಾದು ನೋಡಬೇಕು. ಕಚ್ಚಾತೈಲದ ಬೆಲೆ 100 ಡಾಲರ್‌ನಷ್ಟು ಹೆಚ್ಚಳಗೊಳ್ಳಬಹುದು. ಕೊರತೆ ಉಂಟಾಗುವ ಕಾರಣ ಭವಿಷ್ಯದಲ್ಲಿ ಬೆಲೆ ಏರಿಕೆ ಮುಂದುವರೆಯಬಹುದು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತ ಸರ್ಕಾರದ ನಿಯಂತ್ರಣ ಸಾಧ್ಯವಾಗುವುದಿಲ್ಲ. ಹಾಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಷ್ಟು ಪ್ರಮಾಣದ ದಾಸ್ತಾನು ಮಾಡಿಕೊಳ್ಳುತ್ತಾರೋ ಅಷ್ಟು ಪ್ರಮಾಣದಲ್ಲಿ ಬೆಲೆ ಏರಿಕೆ ಗಗನಕ್ಕೇರಲಿದೆ ಎಂದು ವಿವರಿಸಿದರು.

ದೇಶದಲ್ಲಿ ತಿಂಗಳವರೆಗಿಲ್ಲ ಸಮಸ್ಯೆ: ಭಾರತದಲ್ಲಿ ಒಂದು ತಿಂಗಳವರೆಗೆ ಯಾವುದೇ ಸಮಸ್ಯೆ ಆಗುವುದಿಲ್ಲ. ಆದರೆ ಮುಂದಿನ ಏಪ್ರಿಲ್‌ನಿಂದ ಸಮಸ್ಯೆಗಳು ಎದುರಾಗಬಹುದು. ಮುಖ್ಯವಾಗಿ ವಾಣಿಜ್ಯ ಅಡುಗೆ ಅನಿಲದ ಬೆಲೆ ಹೆಚ್ಚಿನ ಪ್ರಮಾಣದಲ್ಲಿ ದುಬಾರಿಯಾಗಬಹುದು. ಮನೆಗಳಿಗೆ ನೀಡುವ ಅಡುಗೆ ಅನಿಲ ಪೂರೈಕೆಯಲ್ಲಿ ದುರ್ಬಳಕೆ ತಡೆಯುವ ಸಲುವಾಗಿ ಸರ್ಕಾರ ಸಾಕಷ್ಟು ನಿಯಂತ್ರಣ ಹಾಕಬಹುದು. ಈಗ ಮನೆಗಳಿಗೆ ಅಡುಗೆ ಅನಿಲ್ ಸಿಲಿಂಡರ್ ನೀಡಲು ಒಟಿಪಿ ವ್ಯವಸ್ಥೆ ಮಾಡಿದ್ದು, ಈ ಸಂಬಂಧ ಶೇ.60ಷ್ಟು ಓಟಿಪಿ ವ್ಯವಸ್ಥೆ ಇದೆ. ಈಗ ಬಹುಶಃ ಇದನ್ನು ಶೇ.100 ಮಾಡಬಹುದು. ಏಕೆಂದರೆ ವಾಣಿಜ್ಯ ಉದ್ದೇಶಕ್ಕೆ ದುರ್ಬಳಕೆ ಆಗುವುದನ್ನು ತಡೆಯುವ ನಿಟ್ಟಿನಲ್ಲಿ ಈ ಕ್ರಮ ವಹಿಸಬಹುದು ಎಂದು ಹೇಳಿದರು.

ಮನೆಗಳಿಗೆ ನೀಡುವ ಅಡುಗೆ ಅನಿಲ ಬೆಲೆಯನ್ನು ಏರಿಕೆಯಾಗದೇ ಇದ್ದರೂ ವಾಣಿಜ್ಯ ಬೆಲೆ ಏರಿಕೆಯಾಗಲಿದೆ. ಏಕೆಂದರೆ ಮನೆಗಳಿಗೆ ನೀಡುವ ಅಡುಗೆ ಅನಿಲದ ಬೆಲೆಯನ್ನು ಸರ್ಕಾರ ನಿಗದಿ ಮಾಡಲಿದೆ. ಆದರೆ ವಾಣಿಜ್ಯ ಅನಿಲದ ಬೆಲೆ ನಿಗದಿಯು ಸರ್ಕಾರದ ನಿಯಂತ್ರಣದಲ್ಲಿ ಇಲ್ಲ. ಇದು ತೈಲ ಕಂಪನಿಗಳ ನಿಯಂತ್ರಣದಲ್ಲಿರುವ ಕಾರಣ ದುಬಾರಿಗೊಳ್ಳುವುದು ಸಾಧ್ಯತೆ ದಟ್ಟವಾಗಿದೆ. ಹಾಗಾಗಿ ವಾಣಿಜ್ಯ ಉದ್ದೇಶದ ಅನಿಲ ಸಹ ದಾಸ್ತಾನು ಇಟ್ಟುಕೊಳ್ಳುವುದು ಒಳ್ಳೆಯದು. ಜೊತೆಗೆ ಅನಿಲ ಪೂರೈಕೆಯಲ್ಲಿ ಕೊರತೆ ಉಂಟಾದರೆ ಮನೆಗಳ ಪೂರೈಕೆಗೆ ತೊಂದರೆ ಆಗದಿರಲೆಂದು ಸರ್ಕಾರ ಮೊದಲಿಗೆ ವಾಣಿಜ್ಯ ಉದ್ದೇಶಿತ ಅನಿಲ ಪೂರೈಕೆಗೆ ಹೆಚ್ಚು ನಿಯಂತ್ರಣ ಹಾಕಬಹುದು ಎಂದರು.

ಅಗತ್ಯ ವಸ್ತುವಾದ ಕಾರಣ ಕಾನೂನಿನಂತೆ ಮನೆಗಳಿಗೆ ಪೂರೈಕೆಯಾಗುವ ಅಡುಗೆ ಅನಿಲಕ್ಕೆ ಸರ್ಕಾರ ಮೊಟ್ಟ ಮೊದಲ ಆದ್ಯತೆ ನೀಡಲಿದೆ. ನಂತರ ವಾಣಿಜ್ಯ ಅನಿಲ ಪೂರೈಕೆ ಆದ್ಯತೆ ನೀಡಲಿದೆ. ವಾಣಿಜ್ಯ ಕ್ಷೇತ್ರದವರು ಅನಿಲದ ಸಿಲಿಂಡರ್ ದಾಸ್ತಾನು ಇಟ್ಟುಕೊಂಡರೆ ಎದುರಾಗಬಹುದಾದ ಸಮಸ್ಯೆಯಿಂದ ಪಾರಾಗಬಹು. ಜೊತೆಗೆ ಮನೆಗಳ ಅಡುಗೆ ಅನಿಲ ಸಿಲಿಂಡರ್ ಸಂಬಂಧ ಗ್ರಾಹಕರು ಇಂದು ಒಂದು ಸಿಲಿಂಡರ್ ಖರೀದಿ ಮಾಡಿದ್ದರೂ ಮಾರನೇ ದಿನವೇ ಮತ್ತೊಂದು ಖರೀದಿಸಲು ಈಗ ಅವಕಾಶ ಇದೆ. ಆದರೆ ಈ ಯುದ್ಧ ಬಿಕ್ಕಟ್ಟಿನ ಕಾರಣ ಒಂದು ಸಿಲಿಂಡರ್ ಖರೀದಿ ಮಾಡಿದ 21 ದಿನಗಳವರೆಗೆ ಮತ್ತೊಂದು ನೀಡುವ ವ್ಯವಸ್ಥೆ ಜಾರಿಗೆ ಬರಬಹುದು. ಹಾಗಾಗಿ ಷರತ್ತುಗಳು ಜಾರಿಗೊಳ್ಳುವ ಸಾಧ್ಯತೆ ಇರುವ ಕಾರಣ ಮನೆಗಳಿಗೇ ಆಗಲಿ ಹಾಗೂ ವಾಣಿಜ್ಯಕ್ಕೆ ಆಗಲಿ ಅಡುಗೆ ಅನಿಲ ಸಿಲಿಂಡರ್ ದಾಸ್ತಾನು ಮಾಡಿಕೊಳ್ಳುವುದು ಒಳ್ಳೆಯದು ಎಂದು ಸಲಹೆ ನೀಡಿದರು.

1991ರಲ್ಲಿ ಇದೇ ಸನ್ನಿವೇಶ ಇರಾಕ್ ಮತ್ತು ಅಮೆರಿಕ ಯುದ್ಧ ಸಂದರ್ಭದಲ್ಲಿ ನಿರ್ಮಾಣವಾಗಿತ್ತು. ಅದೇ ಪರಿಸ್ಥಿತಿ ಮತ್ತೆ ನಿರ್ಮಾಣ ಆಗಬಹುದು. ಪೆಟ್ರೋಲ್ ಮತ್ತು ಡಿಸೇಲ್ ಬೆಲೆಯಲ್ಲಿಯೂ ಏರಿಕೆಯಾಗುವ ಸಾಧ್ಯತೆ ದಟ್ಟವಾಗಿದೆ. ಆದರೆ ಸರ್ಕಾರ ಈ ಸಂಬಂಧ ನಿಯಂತ್ರಣ ಮಾಡಲು ಅವಕಾಶ ಹೊಂದಿದೆ. ಒಟ್ಟಾರೆ ಜನ ಈಗಲೇ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವುದು ಸೂಕ್ತವಾಗುತ್ತದೆ ಎಂದು ಅವರು ತಿಳಿಸಿದರು.

ಸರ್ಕಾರದ ಖಾಲಿ ಹುದ್ದೆ ನೇಮಕಾತಿ ವೇಳೆ ಸುಪ್ರೀಂಕೋರ್ಟ್ ಆದೇಶ ಉಲ್ಲಂಘನೆ ಆಗಬಾರದು

ಕರ್ನಾಟಕ ಸಾಮಾಜಿಕ ನ್ಯಾಯಪರ ವೇದಿಕೆ ಆಗ್ರಹ



ದಲಿತ ಸಮುದಾಯದ ಹಿರಿಯ ರಾಜಕಾರಣಿಗಳೊಂದಿಗೆ ಕರ್ನಾಟಕ ಸಾಮಾಜಿಕ ನ್ಯಾಯಪರ ವೇದಿಕೆ ಪದಾಧಿಕಾರಿಗಳು ಚರ್ಚಿಸಿದರು.

ಮೈಸೂರು, ಮಾ.2– ರಾಜ್ಯ ಸರ್ಕಾರದ ಸುಮಾರು 56 ಸಾವಿರ ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ಒಳಮೀಸಲಾತಿ ಸಂಬಂಧ ಸುಪ್ರೀಂಕೋರ್ಟ್ ಆದೇಶ ಉಲ್ಲಂಘನೆಯಾಗದಂತೆ ಕ್ರಮ ವಹಿಸಬೇಕು ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವೇದಿಕೆಯು ಸಮುದಾಯದ ಹಿರಿಯ ರಾಜಕಾರಣಿಗಳನ್ನು ಮನವಿ ಮಾಡಿದೆ.

ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ್, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಮಾಜಿ ಸಚಿವ ಹೆಚ್.ಆಂಜನೇಯ ಇನ್ನಿತರ ಹಿರಿಯ ರಾಜಕಾರಣಿಗಳೊಂದಿಗೆ ವೇದಿಕೆ ಪದಾಧಿಕಾರಿಗಳು ಇಂದು ಚರ್ಚೆ ನಡೆಸಿದರು.

ಈ ವೇಳೆ ವೇದಿಕೆ ಅಧ್ಯಕ್ಷರೂ ಆದ ಮೈಸೂರಿನ ಖ್ಯಾತ ವಕೀಲ ಎಸ್.ಅರುಣ್ ಕುಮಾರ್ ಮಾತನಾಡಿ, ರಾಜ್ಯ ಸರ್ಕಾರ ನಡೆಸುತ್ತಿರುವ 56432 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಸುಪ್ರೀಂಕೋರ್ಟ್ ಆದೇಶ, ರಾಜ್ಯಪಾಲರು ಹಾಗೂ ಜಸ್ಟೀಸ್ ನಾಗಮೋಹನ್‌ದಾಸ್ ಅವರ ಶಿಫಾರಸು ಉಲ್ಲಂಘನೆಯಾಗಿದ್ದು, ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮವಹಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ವೇದಿಕೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಉಪಾಧ್ಯಕ್ಷರಾದ ಮಾಳಪ್ಪ ಕುರ್ಕಿ, ಶಿವಕುಮಾರ್, ದಾಸಯ್ಯ, ಸುರೇಂದ್ರ ಕುಮಾರ್, ಚಾಮರಾಜನಗರದ ಮಲ್ಲು ಸೂಕ್ತ ಕ್ರಮಕ್ಕೆ ಆಗ್ರಹಿಸಿದರು.

ಸಚಿವ ಚೆಲುವರಾಯಸ್ವಾಮಿ, ಶಾಸಕರಾದ ನಾರಾ ಭರತ ರೆಡ್ಡಿ, ಭೋಜೆಗೌಡ ಸೇರಿ ಅಧಿಕಾರಿಗಳು, ಪ್ರಭಾವಿಗಳ ಕುಟುಂಬ ಅತಂತ್ರ

ಬೆಂಗಳೂರು, ಮಾ. 2(ಕೆಎಂಶಿ)– ಇರಾನ್ ವಿರುದ್ಧದ ಅಮೆರಿಕ–ಇಸ್ರೇಲ್ ಕದನದಿಂದ ಕೃಷಿ ಸಚಿವ ಚೆಲುವರಾಯಸ್ವಾಮಿ ಸೇರಿದಂತೆ ವಿಧಾನಸಭಾ ಸದಸ್ಯರು, ಅಧಿಕಾರಿಗಳು, ಪ್ರಭಾವೀ ರಾಜಕಾರಣಿಗಳು ಹಾಗೂ ಕುಟುಂಬ ವರ್ಗದವರು ಸಂಘರ್ಷ ಪ್ರದೇಶದಲ್ಲಿ ಸಿಲುಕಿದ್ದಾರೆ.

ಚೆಲುವರಾಯಸ್ವಾಮಿ ಮತ್ತು ಅಧಿಕಾರಿಗಳು ಇಂಗ್ಲೆಂಡ್‌ನ ನ್ಯೂಕ್ಯಾಸೆಲ್ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಪ್ರದೇಶಗಳ ಪ್ರವಾಸದಲ್ಲಿದ್ದಾರೆ. ಇವರು ನಾಳೆ, ಮಂಗಳವಾರ ದುಬೈ ಮೂಲಕ ನಗರಕ್ಕೆ ಹಿಂತಿರುಗಬೇಕಿತ್ತು. ಆದರೆ, ಪಶ್ಚಿಮ ಏಷ್ಯಾದಲ್ಲಿನ ಯುದ್ಧ ವಾತಾವರಣದಿಂದಾಗಿ ಬರಲು ಸಾಧ್ಯವಾಗುತ್ತಿಲ್ಲ.

ವಿಶ್ವದ ಅನೇಕ ರಾಷ್ಟ್ರಗಳಿಂದ ದುಬೈ ವಿಮಾನ ನಿಲ್ದಾಣ ಮಾರ್ಗವಾಗಿಯೇ ಭಾರತಕ್ಕೆ ಬರಬೇಕಿದೆ. ಆದರೆ, ದುಬೈನಲ್ಲಿ ವಿಮಾನ ಹಾರಾಟ ಸ್ಥಗಿತಗೊಂಡಿರುವುದರಿಂದ ಅವರುಗಳು ಹಿಂತಿರುಗಲು ಇನ್ನೂ ಸಮಯ ಬೇಕಾಗಬಹುದು.

ಚೆಲುವರಾಯಸ್ವಾಮಿ ಜೊತೆ 10ಕ್ಕೂ ಹೆಚ್ಚು ಹಿರಿಯ ಅಧಿಕಾರಿಗಳು ಮತ್ತು ಕುಟುಂಬ ವರ್ಗದವರೂ ಇದ್ದಾರೆ. ಶಾಸಕರಾದ ನಾರಾ ಭರತ ರೆಡ್ಡಿ, ಭೋಜೇಗೌಡ ಸೇರಿದಂತೆ ಕೆಲವು ವಿಧಾನಸಭಾ ಸದಸ್ಯರು ಮತ್ತು ರಾಜಕಾರಣಿಗಳು ಮತ್ತು ಕುಟುಂಬ ವರ್ಗ ದುಬೈನಲ್ಲಿ ಸಿಲುಕಿಗೊಂಡಿದೆ.

ಅಲ್ಲದೆ, ರಾಜ್ಯ ಚುನಾವಣಾ ಆಯುಕ್ತ ಎಸ್.ಸಂಗ್ರೇಶಿ ಅವರೂ ದುಬೈನಲ್ಲಿದ್ದಾರೆ. ಇವರೂ ಸೇರಿದಂತೆ ಕೆಲವು ಶಾಸಕರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರವಾಣಿ ಮೂಲಕ ಸಂಪರ್ಕಿಸಿ ಧೈರ್ಯ ತುಂಬಿದ್ದಾರೆ.

ಕೆಎಸ್‌ಆರ್‌ಟಿಸಿ ನೌಕರರ ವಿವಿಧ ಬೇಡಿಕೆ ಸಂಬಂಧ ಹಿರಿಯ ಅಧಿಕಾರಿಗಳೊಂದಿಗೆ ಸಭೆ

ಮೈಸೂರು, ಮಾ.2(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಕೇಂದ್ರ ಸಮಿತಿ ಕಚೇರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಂಟಿ ಕ್ರಿಯಾ ಸಮಿತಿ ಸದಸ್ಯರೊಂದಿಗೆ ಸೋಮವಾರ ಸಭೆ ನಡೆಯಿತು.

ಈ ವೇಳೆ ನಾಲ್ಕೂ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಿಗಮಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂಪಾಷ ಪ್ರಾಸ್ತಾವಿಕವಾಗಿ ಮಾತನಾಡಿ, ಸರ್ಕಾರದ ಹಾಗೂ ಆಡಳಿತ ವರ್ಗದ ಪರವಾಗಿ ವಿಷಯ ಮಂಡಿಸಿ ಫೆ.18ರಂದು ಸರ್ಕಾರ ಹೊರಡಿಸಿರುವ ಆದೇಶದ ಚೌಕಟ್ಟಿನಲ್ಲಿಯೇ ಚರ್ಚೆ ನಡೆಯಬೇಕು ಎಂದು ತಾಕೀತು ಮಾಡಿದ್ದಾರೆ.

ಇದಕ್ಕೊಪ್ಪದ ಜಂಟಿ ಕ್ರಿಯಾ ಸಮಿತಿ ಸದಸ್ಯರು, ನಮ್ಮ ಬೇಡಿಕೆ ನ್ಯಾಯಯುತವಾಗಿದ್ದು, 1.1.2020ರಿಂದ 38 ತಿಂಗಳ ಬಾಕಿ ಹಣವನ್ನು ನೌಕರರಿಗೆ ಪಾವತಿಸುವುದು ನಾಲ್ಕು ಸಾರಿಗೆ ನಿಗಮಗಳ ಜವಾಬ್ದಾರಿ, ಈಗಾಗಲೇ ರಾಜ್ಯ ಸರ್ಕಾರ 1272 ಕೋಟಿ ರೂ.ಗಳನ್ನು ಕೊಡಲು (26 ತಿಂಗಳ ವೇತನ ಬಾಕಿ)ಆದೇಶ ನೀಡಿದೆ. ಉಳಿದ ಮೊತ್ತವನ್ನು ನಾಲ್ಕು ಸಾರಿಗೆ ನಿಗಮಗಳು ಹಂಚಿಕೊಂಡು ಪಾವತಿಸಬೇಕು.

17.3.2023ರ ಆದೇಶವನ್ನು ಕೆಎಸ್‌ಆರ್‌ಟಿಸಿ ನೌಕರರಿಗೆ ಪ್ರತಿಕೂಲವಾಗುವಂತೆ ಅರ್ಥೈಸಿ ವೇತನ ಪರಿಷ್ಕರಣೆ ದಿನಾಂಕವನ್ನು 15 ತಿಂಗಳು ಮುಂದೂಡಿರುವುದು ಅವೈಜ್ಞಾನಿಕ ಎಂದು ಖಂಡಿಸಿದ್ದಾರೆ. ಕಾರ್ಮಿಕ ಮುಖಂಡರ ವಾದವನ್ನು ಆಲಿಸಿದ ಎಂಡಿ ಅವರು, ಫೆ.19ರ 'ಬೆಂಗಳೂರು ಚಲೋ' ಕಾರ್ಯಕ್ರಮದ ದಿನ ಜಾರಿಗೊಳಿಸಿದ್ದ ನೋ ವರ್ಕ್, ನೋ ಪೇ ಆದೇಶ ಹಿಂಪಡೆದು ಕೂಡಲೇ ಸದರಿ ದಿನ ನೌಕರರ ರಜಾ ಮಂಜೂರಾತಿಗೆ ಅನುಮತಿ ನೀಡಿದ್ದಾರೆ.

ಇನ್ನುಳಿದಂತೆ ನೌಕರರ ಬೇಡಿಕೆ ಸಂಬಂಧ ಸೋಮವಾರದ ಸಭೆಯಲ್ಲಿ ಯಾವುದೇ ನಿರ್ಧಾರಕ್ಕೆ ಬರಲಾಗಿಲ್ಲ ಹಾಗೂ ಮುಂದಿನ ಸಭೆ ನಡೆಯುವ ದಿನಾಂಕವನ್ನು ಮತ್ತೊಮ್ಮೆ ತಿಳಿಸಲಾಗುವುದು ಎಂದು ಜಂಟಿ ಕ್ರಿಯಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಎಐ ಶೃಂಗಸಭೆಯಲ್ಲಿ ಅರೆಬೆತ್ತಲೆ ಪ್ರತಿಭಟನೆ: ಕಾಂಗ್ರೆಸ್ ಕಾರ್ಯಕರ್ತರಿಗೆ ಜಾಮೀನು


ನವದೆಹಲಿ: 'ಇಂಡಿಯಾ ಎಐ ಇಂಪ್ಯಾಕ್ಟ್' ಶೃಂಗಸಭೆಯ ಸಂದರ್ಭದಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದ ಕಾರಣಕ್ಕೆ ಬಂಧಿಸಲಾಗಿದ್ದ ರಾಷ್ಟ್ರೀಯ ಯುವ ಕಾಂಗ್ರೆಸ್‌ನ (ಐವೈಸಿ) 9 ಮಂದಿ ಕಾರ್ಯಕರ್ತರಿಗೆ ದೆಹಲಿ ನ್ಯಾಯಾಲಯ ಸೋಮವಾರ ಜಾಮೀನು ಮಂಜೂರು ಮಾಡಿದೆ.



ಕೃಷ್ಣ ಹರಿ, ನರಸಿಂಹ ಯಾದವ್, ಕುಂದನ್ ಕುಮಾರ್ ಯಾದವ್, ಅಜಯ್ ಕುಮಾರ್ ಸಿಂಗ್, ಜಿತೇಂದ್ರ ಸಿಂಗ್ ಯಾದವ್, ರಾಜಾ ಗುರ್ಜರ್, ಅಜಯ್ ಕುಮಾರ್ ವಿಮಲ್ ಅಲಿಯಾಸ್ ಬಂಟು, ಸೌರಭ್ ಸಿಂಗ್ ಮತ್ತು ಅರ್ಬಾಜ್ ಖಾನ್ ಅವರಿಗೆ ನ್ಯಾಯಾಧೀಶರಾದ ರವಿ ಅವರು ಜಾಮೀನು ಮಂಜೂರು ಮಾಡಿದ್ದಾರೆ.

ದೆಹಲಿಯ ಭಾರತ ಮಂಟಪಂನಲ್ಲಿ ಕೃತಕ ಬುದ್ಧಿಮತ್ತೆ ಕುರಿತ ಸಮ್ಮೇಳನದಲ್ಲಿ ತಮ್ಮ ಅಂಗಿ ಕಳಚಿ ಪ್ರಧಾನಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧದ ಘೋಷಣೆ ಇದ್ದ ಬರಹಗಳನ್ನು ಪ್ರದರ್ಶಿಸಲಾಗಿತ್ತು. ಈ ಸಂಬಂಧ ಪೊಲೀಸರು ಅವರನ್ನು ಬಂಧಿಸಿದ್ದರು. ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್ ಅವರಿಗೆ ದೆಹಲಿ ನ್ಯಾಯಾಲಯ ಶನಿವಾರ ಜಾಮೀನು ಮಂಜೂರು ಮಾಡಿತ್ತು.

ಕೆಆರ್‌ಎಸ್ ಹಿನ್ನೀರಲ್ಲಿ 58.62 ಕೋಟಿಯ ಪ್ರವಾಸೋದ್ಯಮ ಯೋಜನೆ ಜಾರಿಗೆ ಚಿಂತನೆ



KTIL ವೆಬ್‌ಸೈಟ್‌ನಲ್ಲಿ ತೋರಿಸಿರುವಂತೆ KRS ಹಿನ್ನೀರಿನಲ್ಲಿರುವ ಚೋಳನಹಳ್ಳಿಯಲ್ಲಿ ಯೋಜಿಸಲಾದ ಚಟುವಟಿಕೆಗಳ ಮಾದರಿ.



ಶ್ರೀರಂಗಪಟ್ಟಣ, ಮಾ. 2– ಕೆಆರ್‌ಎಸ್ ಜಲಾಶಯದ ಹಿನ್ನೀರಲ್ಲಿ 58.62 ಕೋಟಿ ವೆಚ್ಚದಲ್ಲಿ ಕಾಟೇಜ್, ಹೌಸ್ ಬೋಟ್ ಜೊತೆಗೆ ನಾನಾ ಸಾಹಸ ಕ್ರೀಡೆಗಳನ್ನು ಒಳಗೊಂಡ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ನಿಗಮವು ಮೈಸೂರು ತಾಲೂಕು ಸಾಗರಕಟ್ಟೆ ಬಳಿಯ ಚೋಳನಹಳ್ಳಿ ಸಮೀಪ ಹಿನ್ನೀರಿಗೆ ಹೊಂದಿಕೊಂಡಂತೆ ಇಂತಹ ಪರಿಸರಸ್ನೇಹಿ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ

ಇದಲ್ಲದೇ ಮೈಸೂರು, ಶ್ರೀರಂಗಪಟ್ಟಣ, ಹಾಸನದ ಬೇಲೂರು, ಹಳೇಬೀಡು ಒಳಗೊಂಡ ದಕ್ಷಿಣ ವಲಯದ 19 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ.

ಅದರಲ್ಲಿ ಪ್ರಮುಖವಾಗಿ ಮೈಸೂರಿನಿಂದ 25 ಕಿಮೀ ದೂರದಲ್ಲಿರುವ ಸಾಗರಕಟ್ಟೆಯ ಚೋಳನಹಳ್ಳಿಯಲ್ಲಿ ಭೂಮಿ ಮತ್ತು ನೀರಿನ ಮೇಲೆ ಹಲವು ಕ್ರೀಡೆ ಮತ್ತು ಮನೋರಂಜನಾ ಚಟುವಟಿಕೆಗಳನ್ನು ಒಳಗೊಂಡ ಯೋಜನೆಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸಕ್ತ ಬಜೆಟ್‌ನಲ್ಲಿ ಘೋಷಿಸುವ ವಿಶ್ವಾಸವನ್ನು, ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಕೆಆರ್‌ಎಸ್ ಹಿನ್ನೀರಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪೂರಕವಾಗಿ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸುವ ಉದ್ದೇಶವನ್ನು ಸರ್ಕಾರ ಹೊಂದಿದ್ದು, ಅದರ ಜಾರಿ ಸಂಬಂಧ ನಿರ್ದಿಷ್ಟ ತೀರ್ಮಾನಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಆದರೆ, ಈಗ ದಕ್ಷಿಣ ವಲಯ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿರುವುದರಿಂದ ಸದರಿ ಯೋಜನೆ ಸಾಕಾರಗೊಳ್ಳುವ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಪ್ರಜ್ವಲ್ ರೇವಣ್ಣ ಜೈಲು ಸೇರಲು ಕುಮಾರಸ್ವಾಮಿ ಕಾರಣ

ಮದ್ದೂರಲ್ಲಿ ಬಾಂಬ್ ಸಿಡಿಸಿದ ಶಾಸಕ ಕೆ.ಎಂ.ಉದಯ್

ಮದ್ದೂರು: ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲು ಸೇರಲು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿರವರೇ ಕಾರಣ ಎಂದು ಶಾಸಕ ಕೆ.ಎಂ. ಉದಯ್ ಬಾಂಬ್ ಸ್ಫೋಟಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ, ಅವರು ನಿಖಿಲ್ ಕುಮಾರಸ್ವಾಮಿ ಅವರನ್ನು ಜನತೆ 3 ಬಾರಿ ತಿರಸ್ಕರಿಸಿದ್ದಾರೆ. ನಿಖಿಲ್‌ಕುಮಾರಸ್ವಾಮಿ ಏನೂ ಆಗಲಿಲ್ಲವಲ್ಲ ಎಂಬ ಕಾರಣಕ್ಕೆ ಅವರ ಅಣ್ಣನ ಪುತ್ರ ಪ್ರಜ್ವಲ್ ರೇವಣ್ಣ ಅವರನ್ನೆ ಎಚ್.ಡಿ.ಕುಮಾರಸ್ವಾಮಿರವರು ಜೈಲಿಗೆ ಹಾಕಿಸಿದರು ಎಂದರು.

ಪ್ರಜ್ವಲ್ ಜನಪ್ರಿಯತೆ ಸಹಿಸದೆ ಕುಮಾರಸ್ವಾಮಿ ಅವರು ಚುನಾವಣಾ ವೇಳೆ ಪೆನ್ ಮತ್ತು ಡ್ರೈವ್‌ಗಳನ್ನು ಸೃಷ್ಟಿಸಿ ಜೈಲಿಗೆ ಹಾಕಿಸಿದರು. ಮಾಜಿ ಪ್ರಧಾನಿ ದೇವೇಗೌಡರು ಮನಸ್ಸು ಮಾಡಿದ್ದರೆ ಹೊರಗೆ ತರಬಹುದಿತ್ತು. ಆದರೆ, ಕುಮಾರಸ್ವಾಮಿ ಕುಮ್ಮಕ್ಕಿನಿಂದ ಪ್ರಜ್ವಲ್ ರೇವಣ್ಣ ಜೈಲಿನಿಂದ ಹೊರ ಬರಲು ಆಗುತ್ತಿಲ್ಲ ಎಂದು ಕುಟುಕಿದರು.

ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳ್ತಾರೆ. ಆದರೆ ಕುಮಾರಸ್ವಾಮಿ ಅವರು ಗ್ರಾಮೀಣ ಪ್ರದೇಶಗಳು ಉಳಿಯಬೇಕು ನಗರೀಕರಣ ಆಗಬಾರದೆಂದು ಇಲ್ಲಿ ಬಂದು ಗೆಜ್ಜಲಗೆರೆಯ ಜನರನ್ನು ಪ್ರತಿಭಟನೆಗೆ ಪ್ರಚೋದನೆ ನೀಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ಕೇಂದ್ರ ಸಚಿವರಾಗಿ ನಿಮ್ಮ ಸಾಧನೆ ಶೂನ್ಯವೆಂದ ಅವರು ಎರಡು ವರ್ಷಗಳ ಅವಧಿಯಲ್ಲಿ ಸಿಎಸ್‌ಆರ್, ಎಂಪಿ ಅನುದಾನದಲ್ಲಿ ಬಸ್ ನಿಲ್ದಾಣ, ಆಟೋ ನಿಲ್ದಾಣ ಮಾಡಿರೋದೆ ಕೇಂದ್ರ ಸಚಿವರ ಸಾಧನೆಯೇ ಎಂದು ಪ್ರಶ್ನಿಸಿದ ಅವರು ಲೋಕಸಭಾ ಸದಸ್ಯನಾದ 5 ನಿಮಿಷದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಚರ್ಚಿಸಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸುತ್ತೇನೆ ಎಂದು ಜಿಲ್ಲೆಯ ಜನತೆಗೆ ವಾಗ್ದಾನ ಕೊಟ್ಟಿದ್ದರು ಇವರು ಮಾತಿಗೆ ನಿಲ್ಲುವವರೇ ಎಂದು ಪ್ರಶ್ನಿಸಿದರು.

ಮಾತೆತ್ತಿದರೆ ಮಣ್ಣಿನ ಮಗ ಅಂತಾರೆ. ಎರಡು ಬಾರಿ ಸಿಎಂ ಆಗಿ ಜಿಲ್ಲೆಯ ಕೊನೆ ಭಾಗಕ್ಕೆ ಕೆಆರ್‌ಎಸ್‌ನಿಂದ ನೀರು ಹರಿಸಲು ಆಗಲಿಲ್ಲ ಇವರಿಗೆ, ನಾಲೆಗಳ ಆಧುನೀಕರಣ ಮಾಡಿದ್ರಾ, ರೈತರ ಸಮಸ್ಯೆಗಳಿಗೆ ಏನಾದ್ರೂ ಶಾಶ್ವತ ಕೊಡುಗೆ ಕೊಟ್ಟಿದ್ದಿರಾ, ಕೇವಲ ಭಾವನಾತ್ಮಕ ಮಾತುಗಳನ್ನಾಡಿ ಜನರನ್ನು ಮರಳು ಮಾಡುತ್ತಾ ಓಡಾಡುತ್ತಿದ್ದಾರೆ ಎಂದ ಅವರು ನಿಮ್ಮ ಬೂಟಾಟಿಕೆ ಎಲ್ಲವನ್ನು ಜನತೆ ನೋಡುತ್ತಿದ್ದಾರೆ ಎಂದು ಕಿಡಿಕಾರಿದರು.

ಈ ಹಿಂದೆ ಜೆಡಿಎಸ್ ಪಕ್ಷದ ನಿಷ್ಠಾವಂತ, ಮದ್ದೂರಿನ ದಿವಂಗತ ಎಂ.ಎಸ್. ಸಿದ್ದರಾಜು ಅವರಿಗೆ ಡಬಲ್ ಬಿ.ಫಾರಂ ನೀಡಿ ಸೋಲಿಸಿ ಮ್ಯಾಚ್ ಫಿಕ್ಸಿಂಗ್ ಮೂಲಕ ನಿಮ್ಮ ಬೀಗರನ್ನು ಗೆಲ್ಲಿಸಿಕೊಂಡಿರಿ ಎಂದ ಅವರು ನಿಮ್ಮ ದೊಂಬರಾಟವನ್ನು ಕ್ಷೇತ್ರದ ಜನತೆ ಮರೆತಿಲ್ಲ ಎಂದು ಕಿಡಿ ಕಾರಿದರು.

ತಾಲೂಕಿನಲ್ಲಿ 70 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕೆ ನೀಡುತ್ತೇನೆ, ತಾಕತ್ತಿದ್ದರೆ ಯಾವ ಕೈಗಾರಿಕೆ ತರುತ್ತಾರೆ ಎಂಬುದನ್ನು ಕುಮಾರಸ್ವಾಮಿ ಅವರು ಹೇಳಲಿ. ಅಭಿವೃದ್ಧಿ ಮಾಡೋಕು ಆಸಕ್ತಿ, ಛಲ, ರೈತರ ಕಷ್ಟ ಗೊತ್ತಿರಬೇಕು ಬರಿ ಭಾಷಣ ಮಾಡೋದಲ್ಲ. ಜಿಲ್ಲೆಯ ಜನತೆಗೆ ಪ್ರಮಾಣಿಕವಾಗಿ ಕೆಲಸ ಮಾಡಲಿ ಎಂದು ಸಲಹೆ ನೀಡಿದರು.

ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೆ ನನ್ನ ಮೇಲೆ ಅಪವಾದ ತರಲು ಗೆಜ್ಜಲಗೆರೆ ಹೋರಾಟ ಮುಂದಿಟ್ಟುಕೊಂಡು ವಿಪಕ್ಷಗಳು ಹಿಂದೆ ನಿಂತು ಪ್ರತಿಭಟನೆ ಮಾಡಿಸುತ್ತಿದ್ದಾರೆ. ಜನರ ಒತ್ತಾಸೆಯಂತೆಯೇ ನಾನು ಮದ್ದೂರು ಪುರಸಭೆಯನ್ನು ನಗರಸಭೆ ಮಾಡಿದ್ದು ನನಗಾಗಿ ಅಲ್ಲ ಅಬಿವೃದ್ಧಿಯ ಉದ್ದೇಶದಿಂದ ಎಂದ ಅವರು ನನಗೆ ಸಚಿವನಾಗುವ ಆಸೆಯಿಲ್ಲ, ಕ್ಷೇತ್ರದ ಜನರ ಅಶೀರ್ವಾದದಿಂದ ಶಾಸಕನಾಗಿ ಆಯ್ಕೆಯಾಗಿದ್ದೇನೆ. ನನಗೆ ನನ್ನ ಕ್ಷೇತ್ರದ ಅಭಿವೃದ್ಧಿ ಮಾಡುವುದಷ್ಟೇ ಮುಖ್ಯ ಎಂದರು.

ಮನ್‌ಮುಲ್ ನಿರ್ದೇಶಕ ಹರೀಶ್‌ಬಾಬು, ನಗರಸಭಾ ಮಾಜಿ ಅಧ್ಯಕ್ಷೆ ಕೋಕಿಲಾ ಅರುಣ್, ಮಾಜಿ ಉಪಾಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್, ಮಾಜಿ ಸದಸ್ಯರಾದ ಸರ್ವಮಂಗಳ, ಬಸವರಾಜು, ಎಂ.ಬಿ.ಸಚಿನ್, ವನಿತಾ, ಪ್ರಮೀಳ, ತಾಲೂಕು ಬ್ಲಾಕ್ ಕಾಂಗ್ರೆಸ್‌ನ ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಶಂಕರೇಗೌಡ, ಮುಖಂಡರಾದ ಕೆ.ಎಂ.ರವಿ, ಎಂ.ಡಿ.ಮಹಾಲಿಂಗಯ್ಯ, ವಿಜಯ್ ಕುಮಾರ್, ಅರುಣ್, ಹೊಂಬಯ್ಯ, ಸಿದ್ದರಾಮಣ್ಣ, ದಿನೇಶ್‌ಬಾಬು, ರಾಜು, ಸೇರಿದಂತೆ ಹಲವರು ಹಾಜರಿದ್ದರು.

ಸೈಕಲ್ ಸವಾರರಿಗೆ ಕಾರು ಡಿಕ್ಕಿ: ಓರ್ವ ಸಾವು, ಮತ್ತೋರ್ವ ಗಂಭೀರ

ಮದ್ದೂರು: ಸೈಕಲ್ ಸವಾರರಿಗೆ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಓರ್ವ ವ್ಯಕ್ತಿ ಮೃತಪಟ್ಟಿದ್ದು, ಮತ್ತೊಬ್ಬ ಗಂಭೀರ ಗಾಯಗೊಂಡಿರುವ ಘಟನೆ ಮದ್ದೂರು ಬಳಿ ಸೋಮವಾರ ಬೆಳಿಗ್ಗೆ ಜರುಗಿದೆ.

ಮದ್ದೂರು ತಾಲೂಕಿನ ಸೋಮನಹಳ್ಳಿಯ ಮಲ್ಲಯ್ಯ ನಗರದ ನಿವಾಸಿ ಚಂದ್ರು (47) ಸಾವಿಗೀಡಾದ ವ್ಯಕ್ತಿಯಾಗಿದ್ದು, ಕರಿಯಪ್ಪ (55) ಅವರನ್ನು ಮದ್ದೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಂದ್ರು ಮತ್ತು ಕರಿಯಪ್ಪ ಅವರುಗಳು ಬೆಳಿಗ್ಗೆ 7 ಗಂಟೆ ಸಮಯದಲ್ಲಿ ತಿಮ್ಮದಾಸ್ ಹೋಟೆಲ್ ಕಡೆಯಿಂದ ಸೋಮನಹಳ್ಳಿಗೆ ಸೈಕಲ್‌ನಲ್ಲಿ ತೆರಳುತ್ತಿದ್ದ ವೇಳೆ ಹಳೇ ಎಂಪೈರ್ ಹೋಟೆಲ್ ಎದುರು ಕಾರೊಂದು ಚಾಲಕನ ಅಜಾಗರುಕತೆಯಿಂದ ಡಿಕ್ಕಿ ಹೊಡೆದಿದ್ದು, ಡಿಕ್ಕಿಯ ರಭಸಕ್ಕೆ ಚಂದ್ರು ಸ್ಥಳದಲ್ಲೇ ಮೃತಪಟ್ಟರೆ ಕರಿಯಪ್ಪ ಅವರಿಗೆ ಗಂಭೀರ ಗಾಯವಾಗಿದ್ದು, ತಕ್ಷಣವೇ ಸ್ಥಳೀಯರು ಮತ್ತು ವಾಹನ ಸವಾರರು ಅವರನ್ನು ಮದ್ದೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ.

ಆದರೆ, ಡಿಕ್ಕಿಯ ರಭಸಕ್ಕೆ ಚಂದ್ರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ವೈದ್ಯರು ದೃಢಪಡಿಸಿದ್ದಾರೆ. ಆದರೆ, ಕಾರಿನ ಚಾಲಕ ಅಪಘಾತ ನಡೆಸಿ ಮಾನವೀಯತೆ ಸಹ ತೋರದೆ ಸ್ಥಳದಿಂದ ಪರಾರಿಯಾಗಿದ್ದಾನೆ. ಇನ್ನು ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಮದ್ದೂರು ಪೊಲೀಸ್ ಇನ್ಸ್ಪೆಕ್ಟರ್ ನವೀನ್ ಕುಮಾರ್ ಹಾಗೂ ಸಂಚಾರ ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ರಾಮಸ್ವಾಮಿ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕೆ.ವಿ.ಶಂಕರಗೌಡರ ಕುರಿತ ಗೀತನಮನ, ಪುಸ್ತಕಗಳ ಬಿಡುಗಡೆ ಸಮಾರಂಭ ನಾಳೆ

ಮಂಡ್ಯ: ಇಲ್ಲಿನ ಕರ್ನಾಟಕ ಸಂಘ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದ ವತಿಯಿಂದ ಹಾಗೂ ಕೆ.ವಿ.ಶಂಕರಗೌಡ ಅಧ್ಯಯನ ಪೀಠದ ಸಹಯೋಗದಲ್ಲಿ ನಾಳೆ(ಮಾ.4) ಶಂಕರ ಸಂಸ್ಮರಣೆ–36 ಪ್ರಯುಕ್ತ ಶಂಕರಗೌಡರ ಕುರಿತ ಗೀತನಮನ ಹಾಗೂ ಪುಸ್ತಕಗಳ ಬಿಡುಗಡೆ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ಸಂಘದ ಸಂಪನ್ಮೂಲ ವ್ಯಕ್ತಿ, ಚಿಂತಕ ಡಾ.ಎಸ್.ಬಿ. ಶಂಕರಗೌಡ ತಿಳಿಸಿದರು.



ಚಿಂತಕ ಡಾ.ಎಸ್.ಬಿ. ಶಂಕರಗೌಡ ಮಾತನಾಡಿದರು.

ಅಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆಯಲಿರುವ ಸಮಾರಂಭದ ಅಧ್ಯಕ್ಷತೆಯನ್ನು ಜನತಾ ಶಿಕ್ಷಣ ಟ್ರಸ್ಟ್ ನಿರ್ದೇಶಕ ಡಾ.ರಾಮಲಿಂಗಯ್ಯ ವಹಿಸಲಿದ್ದು, ಮಹಿಳಾ ಸರ್ಕಾರಿ ಕಾಲೇಜಿನ ಸಹಪ್ರಾಧ್ಯಾಪಕ ಡಾ.ಎಸ್.ಶಿವರಾಮು ಶಂಕರಗೌಡ ಸಂಸ್ಮರಣೆ ಮಾಡುವರು. ಇದೇ ಸಂದರ್ಭದಲ್ಲಿ ಪ್ರೊ.ಜಯಪ್ರಕಾಶಗೌಡರ ಎರಡು ಕೃತಿಗಳಾದ ಜನತಾ–70 (ಎಪ್ಪತ್ತರ ಹಾದಿಯಲ್ಲಿ ಮಂಡ್ಯ ಜನತಾ ಶಿಕ್ಷಣ ಸಂಸ್ಥೆ) ಹಾಗೂ ನೆನಪು ಮಾಸುವ ಮುನ್ನ (ವ್ಯಕ್ತಿ ಚಿತ್ರ ವಿಹಾರ) ಕೃತಿಗಳನ್ನು ಮೈಸೂರಿನ ವಿಶ್ರಾಂತ ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಬಿಡುಗಡೆ ಮಾಡುವರು. ಕೆ ವಿ ಶಂಕರಗೌಡ ಸಂಸ್ಮರಣೋತ್ಸವ ಅಂಗವಾಗಿ ಗಾಮನಹಳ್ಳಿ ಸ್ವಾಮಿ ಮತ್ತು ತಂಡ ಕೆ.ವಿ.ಶಂಕರಗೌಡರನ್ನು ಕುರಿತ ಗೀತೆಗಳ ಗೀತಗಾಯನ ನಡೆಸಿಕೊಡಲಿದೆ. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಉಪಸ್ಥಿತರಿರುವರು ಎಂದು ತಿಳಿಸಿದರು.

ಮಾ.6 ರಂದು 2ನೇ ವರ್ಷದ ಜೆಪಿ ಪ್ರಶಸ್ತಿ ಪ್ರದಾನ ಸಮಾರಂಭ: ಕರ್ನಾಟಕ ಸಂಘದ ವತಿಯಿಂದ ಮಾ.6ರ (ಶುಕ್ರವಾರ)ಸಂಜೆ 5.30ಕ್ಕೆ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ 2ನೇ ವರ್ಷದ ಪ್ರೊ.ಜಯಪ್ರಕಾಶಗೌಡ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಪ್ರಾಂಶುಪಾಲ ಶಂಕರಗೌಡ ತಿಳಿಸಿದರು.

ಪ್ರಸ್ತುತ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಡಾ.ಬಿ.ಜಯಪ್ರಕಾಶಗೌಡ ಅವರು ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಸಂಶೋಧನೆ, ಸಂಘಟನೆ ಹೀಗೆ ಹಲವು ರಂಗಗಳಲ್ಲಿ ತೊಡಗಿಸಿಕೊಂಡು ನಾಡಿನ ಗಮನ ಸೆಳೆದಿದ್ದಾರೆ.ಇವರ ಹೆಸರಿನಲ್ಲಿ ಕೊಡಮಾಡುವ ರಂಗ ಸಂಘಟಕ ಪ್ರಶಸ್ತಿಯನ್ನು ಬೆಂಗಳೂರಿನ ಶ್ರೀನಿವಾಸ ಜಿ.ಕಪ್ಪಣ್ಣ ಅವರಿಗೆ ಹಾಗೂ ರಂಗಕರ್ಮಿ ಪ್ರಶಸ್ತಿಯನ್ನು ಬೆಂಗಳೂರಿನ ರಂಗಕರ್ಮಿ ಶಶಿಧರ್ ಭಾರಿಘಾಟ್ ಅವರಿಗೆ 50,000 ರೂ. ನಗದು ಹಾಗೂ ಪ್ರಶಸ್ತಿ ಫಲಕದೊಂದಿಗೆ ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು.

ಈ ಸಮಾರಂಭದ ದಿವ್ಯ ಸಾನಿಧ್ಯವನ್ನು ಆದಿಚುಂಚನಗಿರಿ ಕ್ಷೇತ್ರದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸಾನಿಧ್ಯವನ್ನು ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ ವಹಿಸಲಿದ್ದಾರೆ. ಉದ್ಯಮಿ ಗಳಾದ ವೆಂಕಟರಮಣಗೌಡ(ಸ್ಟಾರ್ ಚಂದ್ರು) ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಆಂಧ್ರಪ್ರದೇಶದ ಮುಖ್ಯ ಆಯುಕ್ತ ಜಯರಾಮ್ ರಾಯಪುರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಈ ಸಮಾರಂಭದಲ್ಲಿ ಜಯಪ್ರಕಾಶ್‌ಗೌಡ ದಂಪತಿಗಳು ಉಪಸ್ಥಿತರಿರುವರು ಎಂದರು. ಗೋಷ್ಠಿಯಲ್ಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಲೋಕೇಶ್ ಚಂದಗಾಲು, ನಿರ್ದೇಶಕರಾದ ಮಂಜುಳಾ ಉದಯಶಂಕರ್, ಎಚ್.ಬಿ.ನಾಗಪ್ಪ ಹನಕೆರೆ, ಬಾಲಕೃಷ್ಣ ಹಾಗೂ ವತ್ಸಲಾ ಹಾಜರಿದ್ದರು.

ಮದ್ದೂರು ನಗರಸಭೆಯಿಂದ ಗೆಜ್ಜಲಗೆರೆ, ಗೊರವನಹಳ್ಳಿ, ಚಾಮನಹಳ್ಳಿ, ಸೋಮನಹಳ್ಳಿಗಳನ್ನು ಕೈಬಿಡಿ

ಮುಖ್ಯಮಂತ್ರಿಗಳಿಗೆ ಕೇಂದ್ರ ಸಚಿವ ಹೆಚ್‌ಡಿಕೆ ಪತ್ರ

ಬೆಂಗಳೂರು: ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಗೆಜ್ಜಲಗೆರೆ, ಗೊರವನಹಳ್ಳಿ, ಚಾಮನಹಳ್ಳಿ, ಸೋಮನಹಳ್ಳಿ ಸೇರಿದಂತೆ ವಿವಿಧ ಪ್ರದೇಶಗಳನ್ನು ಸ್ಥಳೀಯರ ಆಶಯಗಳಿಗೆ ವಿರುದ್ಧವಾಗಿ ಮದ್ದೂರು ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿದ್ದು, ಕೂಡಲೇ ರಾಜ್ಯ ಸರಕಾರ ಈ ನಿರ್ಧಾರವನ್ನು ಕೈಬಿಡಬೇಕು ಎಂದು ಮಂಡ್ಯ ಸಂಸದರೂ ಆಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಕೇಂದ್ರ ಸಚಿವರು; ಜನಾಭಿಪ್ರಾಯ ಪರಿಗಣಿಸದೆ ಏಕಪಕ್ಷೀಯವಾಗಿ ಸಂಪುಟ ಸಭೆಯಲ್ಲಿ ಕೂಡ ಈ ಪಂಚಾಯಿತಿಗಳನ್ನು ಮದ್ದೂರು ನಗರಸಭೆಗೆ ಸೇರಿಸುವ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕೇಳಿದ್ದೇನೆ. ಸರಕಾರ ಜನತೆಯ ನಿಲುವುಗಳಿಗೆ ವಿರುದ್ಧವಾಗಿ ಹೋಗಬಾರದು. ಈ ಹಿನ್ನೆಲೆಯಲ್ಲಿ ತಾವು ಮಧ್ಯಪ್ರವೇಶ ಮಾಡಿ ಇದಕ್ಕೆ ತಡೆಯೊಡ್ಡಬೇಕು ಎಂದು ಕೋರಿದ್ದಾರೆ.

ಈ ಎಲ್ಲಾ ಪಂಚಾಯಿತಿಗಳ ಗ್ರಾಮಸ್ಥರು ಹಾಗೂ ಪಂಚಾಯಿತಿಗಳ ಸದಸ್ಯರು, ರೈತ ಮುಖಂಡರಾದ ಸುನಂದಾ ಜಯರಾಂ ಅವರು ಸೇರಿದಂತೆ ಅನೇಕರು ಈ ಬಗ್ಗೆ ಮನವಿ ಮಾಡಿದ್ದು, ಇವರೆಲ್ಲರೂ 70 ದಿನಗಳಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದು, ನಾನು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಅವರ ಬೇಡಿಕೆಗಳನ್ನು ಆಲಿಸಿದ್ದೇನೆ ಎಂದು ಕೇಂದ್ರ ಸಚಿವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೆ, ಈ ಬಗ್ಗೆ ಸುನಂದಾ ಜಯರಾಮ್ ಅವರು ತಮಗೆ ನೀಡಿದ್ದ ಮನವಿ ಪತ್ರವನ್ನು ಲಗತ್ತಿಸಿದ್ದಾರೆ.



ಯಾವುದೇ ಕಾರಣಕ್ಕೂ ಮದ್ದೂರು ನಗರಸಭೆ ವ್ಯಾಪ್ತಿಗೆ ಈ ಗ್ರಾಮಗಳನ್ನು ಸೇರಿಸಬಾರದು. ಕೂಡಲೇ ಈ ಜನವಿರೋಧಿ ನಿರ್ಧಾರವನ್ನು ಹಿಂಪಡೆಯಬೇಕೆಂದು ಒಕ್ಕೊರಲ ಒತ್ತಾಯ ಮಾಡಿರುತ್ತಾರೆ. ಸ್ಥಳೀಯರ ಮನವಿಗೆ ಮನ್ನಣೆ ನೀಡುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯವಾಗಿದೆ ಅಲ್ಲದೆ, ಜನತೆಯ ನಿರ್ಧಾರಕ್ಕೆ ವಿರುದ್ಧವಾಗಿ ಸರಕಾರ ನಡೆದುಕೊಳ್ಳುವುದು ಸರಿಯಲ್ಲ ಎಂದು ಸಚಿವರು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಈ ಭಾಗದ ಎಲ್ಲಾ ಗ್ರಾಮಗಳು ಕೃಷಿ ಆಧರಿತವಾಗಿದ್ದು, ಸುಮಾರು 2,000 ಎಕರೆಗೂ ಹೆಚ್ಚು ಭೂಮಿ ನೀರಾವರಿ ಪ್ರದೇಶವಾಗಿರುತ್ತದೆ ಎಂಬುದು ಗಮನಾರ್ಹ. ಭತ್ತ, ಕಬ್ಬು, ಹೂವು, ತರಕಾರಿ ಇನ್ನಿತರ ಬೆಳೆಗಳನ್ನು ಸಮೃದ್ಧವಾಗಿ ಬೆಳೆಯಲಾಗುತ್ತಿದೆ. ಹೈನುಗಾರಿಕೆ, ಪಶು ಸಾಕಾಣಿಕೆಯಲ್ಲಿ ರೈತಾಪಿ ಜನ ತೊಡಗಿಕೊಂಡಿದ್ದಾರೆ. ಜತೆಗೆ ಗೆಜ್ಜಲಗೆರೆ ಗ್ರಾಮದಲ್ಲಿಯೇ ಮಂಡ್ಯ ಜಿಲ್ಲೆಯ ಹಾಲು ಉತ್ಪಾದನಾ ಮಂಡಳಿ (ಮನ್‌ಮುಲ್) ಕಾರ್ಯ ನಿರ್ವಹಿಸುತ್ತಿದೆ. ಸರಕಾರಿ ಆಸ್ಪತ್ರೆ, ವಿದ್ಯಾಸಂಸ್ಥೆಗಳು ಸೇರಿ ಅನೇಕ ಮೂಲ ಸೌಕರ್ಯ ಸೇವೆಗಳು ಜನರಿಗೆ ಲಭ್ಯವಿವೆ ಎಂಬ ಅಂಶವನ್ನು ಸಚಿವರು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಯಾವುದೇ ಮುನ್ಸೂಚನೆ ನೀಡದೇ ಸಾರ್ವಜನಿಕರ, ರೈತರ ಅಭಿಪ್ರಾಯವನ್ನು ಆಲಿಸದೇ, ಗ್ರಾಮಸಭೆಯನ್ನು ನಡೆಸದೆ ಸದರಿ ಗ್ರಾಮಗಳನ್ನು ಮದ್ದೂರು ನಗರಸಭೆಗೆ ಸೇರ್ಪಡೆ ಮಾಡುವ ನಿರ್ಣಯ ಮಾಡಿರುವುದು ಜನವಿರೋಧಿ ಕ್ರಮವಾಗಿದೆ. ಬಹುಮತವನ್ನು ಲೆಕ್ಕಿಸದೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಕೆಲವರಷ್ಟೇ ಸದಸ್ಯರು ಗ್ರಾಮಸಭೆಯಲ್ಲಿ ಏಕಪಕ್ಷೀಯ ನಿರ್ಣಯ ಕೈಗೊಂಡು ಗ್ರಾಮ ಪಂಚಾಯಿತಿ ಕಾಯ್ದೆಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂದು ಸ್ಥಳೀಯರು ಆರೋಪ ಮಾಡಿದ್ದಾರೆ. ಅಲ್ಲದೆ, ಈ ಜನವಿರೋಧಿ ನಿರ್ಣಯದ ಬಗ್ಗೆ ಗ್ರಾಮಗಳ ಗ್ರಾಮಸ್ಥರು, ರೈತರು ಹಾಗೂ ಎಲ್ಲಾ ಸಾರ್ವಜನಿಕರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ಹೂಡಿರುವುದಾಗಿ ತಿಳಿದುಬಂದಿದೆ ಎಂದು ಸಚಿವರು ಪತ್ರದಲ್ಲಿ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಜನತೆಯ ಹಿತದೃಷ್ಟಿಯಿಂದ ಗೆಜ್ಜಲಗೆರೆ, ಗೊರವನಹಳ್ಳಿ, ಚಾಮನಹಳ್ಳಿ ಮತ್ತು ಸೋಮನಹಳ್ಳಿ ಗ್ರಾಮಗಳನ್ನು ಮದ್ದೂರು ನಗರಸಭೆ ವ್ಯಾಪ್ತಿಗೆ ಸೇರಿಸಿರುವ ನಿರ್ಣಯವನ್ನು ಕೂಡಲೇ ವಾಪಸ್ ಪಡೆಯಬೇಕು. ತಾವು ಸ್ಥಳೀಯರ ಮನವಿಗೆ ಓಗೊಟ್ಟು ಅವರ ಪರವಾಗಿ ನಿರ್ಧಾರ ಕೈಗೊಳ್ಳುತ್ತೀರಿ ಎಂದು ಆಶಿಸುತ್ತೇನೆ ಎಂದು ಸಚಿವರು ಪತ್ರದಲ್ಲಿ ಕೋರಿದ್ದಾರೆ.

ಒಂದನೇ ಪುಟದಿಂದ

50ಕ್ಕೂ ಹೆಚ್ಚು ಪ್ರವಾಸಿಗರಿಗೆ ಸಂಕಷ್ಟ!

ಇದೀಗ ನಾವು ಹೊರಗಡೆ ನಿಂತುಕೊಂಡಿದ್ದೇವೆ. ಎಲ್ಲಿಯೂ ಹೋಗಲು ಸಾಧ್ಯವಾಗುತ್ತಿಲ್ಲ ಎಂದು ಪ್ರವಾಸಿಗನೋರ್ವ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದು, ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಗುಂಪಿನ ಹಲವಾರು ಸದಸ್ಯರು ಹಿರಿಯ ನಾಗರಿಕರಾಗಿರುವುದರಿಂದ ಪರಿಸ್ಥಿತಿ ಚಿಂತಾಜನಕವಾಗಿದೆ, ಅವರಲ್ಲಿ ಕೆಲವರು 70 ಮತ್ತು 80 ವರ್ಷಕ್ಕಿಂತ ಮೇಲ್ಪಟ್ಟವರು. ಪ್ರವಾಸ ಮುಗಿದ ನಂತರ ಹಣ ಖಾಲಿಯಾಗಿರುವುದರಿಂದ, ಅನೇಕರು ದುಬೈನಲ್ಲಿ ವಸತಿ ಸೌಕರ್ಯವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ, ಹೋಟೆಲ್ ದರಗಳು ರಾತ್ರಿಗೆ 15,000 ರಿಂದ 20,000 ರೂ.ಗಳವರೆಗೆ ಏರಿದೆ ಎಂದು ತಿಳಿಸಿದ್ದಾರೆ. ನಾವು ಪಾದಚಾರಿ ಮಾರ್ಗದ ಮೇಲೆ ನಿಂತಿದ್ದೇವೆ. ಅನೇಕ ವೃದ್ಧರು ನಮ್ಮೊಂದಿಗಿದ್ದಾರೆ. ಇದು ಗಂಭೀರ ಆರೋಗ್ಯ ಅಪಾಯವಾಗಿ ಪರಿಣಮಿಸುತ್ತಿದೆ ಎಂದು ಹೇಳಿದ್ದಾರೆ.

ಇದೇ ವೇಳೆ ಸಂಕಷ್ಟದಲ್ಲಿರುವವರಿಗೆ ತಾತ್ಕಾಲಿಕ ಆಶ್ರಯ, ವೈದ್ಯಕೀಯ ನೆರವು ಹಾಗೂ ತ್ವರಿತವಾಗಿ ಭಾರತಕ್ಕೆ ಮರಳಲು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ ಈ ನಡುವೆ ಬಳ್ಳಾರಿ ಗ್ರಾಮಾಂತರ ಶಾಸಕ ಬಿ. ನಾಗೇಂದ್ರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಧ್ಯಪ್ರವೇಶಿಸುವಂತೆ ಮನವಿ ಮಾಡಿದ್ದಾರೆ.

150ಕ್ಕೂ ಹೆಚ್ಚು ಕನ್ನಡಿಗರು ದುಬೈನಲ್ಲಿ: ಏತನ್ಮಧ್ಯೆ ಭಾನುವಾರ ಮಾತನಾಡಿದ ಗೃಹ ಸಚಿವ ಪರಮೇಶ್ವರ್ ಅವರು, ಸಂಕಷ್ಟಕ್ಕೆ ಸಿಲುಕಿರುವವರ ನಿಖರ ಸಂಖ್ಯೆಯ ಬಗ್ಗೆ ಇನ್ನೂ ಸಂಪೂರ್ಣ ಮಾಹಿತಿ ಲಭ್ಯವಾಗಿಲ್ಲ. ಇದೀಗ ನಮಗಿರುವ ಮಾಹಿತಿಗಳ ಪ್ರಕಾರ 150ಕ್ಕೂ ಹೆಚ್ಚು ಕನ್ನಡಿಗರು ದುಬೈನಲ್ಲಿ ಸಿಲುಕಿದ್ದಾರೆಂದು ತಿಳಿದುಬಂದಿದೆ. ಇದರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ವಿದ್ಯಾರ್ಥಿಗಳೂ ಸೇರಿದ್ದಾರೆಂದು ಹೇಳಿದ್ದಾರೆ.

ಎಲ್ಲರನ್ನೂ ಸಂಪರ್ಕಿಸಿ ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರಲು ಪ್ರಯತ್ನಗಳು ನಡೆಯುತ್ತಿವೆ. ಅಗತ್ಯ ಸೌಲಭ್ಯಗಳನ್ನು ಒದಗಿಸಲು ಅಧಿಕಾರಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ತೊಂದರೆಯಿಲ್ಲದೆ ಅವರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ಎಲ್ಲಾ ಸಿದ್ಧತೆಗಳನ್ನು ಮಾಡಿದ್ದೇವೆ ಎಂದು ತಿಳಿಸಿದ್ದಾರೆ.

ಹೊಡೆದುರುಳಿಸಿದ್ದು ಕುವೈತ್; ಇರಾನ್ ಅಲ್ಲ

ಯುಎಸ್ ಮಿಲಿಟರಿ 1,000ಕ್ಕೂ ಹೆಚ್ಚು ಇರಾನಿನ ಗುರಿಗಳನ್ನು ಹೊಡೆದುರುಳಿಸಿದೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ವರದಿ ಮಾಡಿದೆ. ಈ ಗುರಿಗಳಲ್ಲಿ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರಗಳು, ಐಆರ್‌ಜಿಸಿ ಜಂಟಿ ಪ್ರಧಾನ ಕಚೇರಿ, ಐಆರ್‌ಜಿಸಿ ಏರೋಸ್ಪೇಸ್ ಪ್ರಧಾನ ಕಚೇರಿ, ಸಂಯೋಜಿತ ವಾಯು ರಕ್ಷಣಾ ವ್ಯವಸ್ಥೆಗಳು, ಬ್ಯಾಲಿಸ್ಟಿಕ್ ಕ್ಷಿಪಣಿ ಕೇಂದ್ರಗಳು, ಇರಾನಿನ ನೌಕಾ ಹಡಗುಗಳು, ಜಲಾಂತರ್ಗಾಮಿ ನೌಕೆಗಳು, ಹಡಗು ವಿರೋಧಿ ಕ್ಷಿಪಣಿ ಕೇಂದ್ರಗಳು ಮತ್ತು ಮಿಲಿಟರಿ ಸಂವಹನ ಸಾಮರ್ಥ್ಯಗಳು ಸೇರಿವೆ.

ಅಮೆರಿಕ–ಇಸ್ರೇಲಿ ಜಂಟಿ ಕಾರ್ಯಾಚರಣೆಯಲ್ಲಿ ಇರಾನ್‌ನ ಸರ್ವೋಚ್ಚನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಮರಣವು ವಿಶ್ವಾದ್ಯಂತ ಪ್ರತಿಕ್ರಿಯೆಯನ್ನು ಹುಟ್ಟುಹಾಕಿದೆ. ಹೆಚ್ಚಿನ ದೇಶಗಳು ಖಮೇನಿ ಅವರ ಹತ್ಯೆಯನ್ನು ಖಂಡಿಸಿವೆ ಮತ್ತು ಅಮೆರಿಕ ಮತ್ತು ಇರಾನ್ ಯುದ್ಧವನ್ನು ನಿಲ್ಲಿಸಿ ಮಾತುಕತೆಯನ್ನು ಪುನರಾರಂಭಿಸುವಂತೆ ಕರೆ ನೀಡಿವೆ. ಕೊಲ್ಲಿಯಲ್ಲಿನ ಪ್ರಸ್ತುತ ಪರಿಸ್ಥಿತಿ ಜಾಗತಿಕ ಶಾಂತಿ ಮತ್ತು ಸ್ಥಿರತೆಗೆ ಅಪಾಯಕಾರಿ ಎಂದು ದೇಶಗಳು ಬಣ್ಣಿಸಿವೆ.

ಗರಿಷ್ಠ ಬೆಲೆ ಕೊಡಿ ಅಷ್ಟೆ

ಕರ್ನಾಟಕದ ರೈತರಿಗೆ ಏಕೆ ಮೋಸ ಮಾಡುತ್ತೀರಾ. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಚ್ಚುವುದನ್ನು ಬಿಡಿ. ತಂಬಾಕಿಗೆ ಸರಾಸರಿ ಬೆಲೆ ಏನಿದೆ ಅದನ್ನು ಕೊಡಿ. ಅದು ಬಿಟ್ಟು ನಮ್ಮ ಹತ್ತಿರ ಕಥೆ ಹೇಳಿ ವಿಷಯಾಂತರ ಮಾಡಬೇಡಿ ಎಂದು ವೆಂಕಟೇಶ್ ಅವರು ತಂಬಾಕು ಖರೀದಿ ಕಂಪನಿಗಳಿಗೆ ಕಟು ಮಾತುಗಳಲ್ಲಿ ಹೇಳಿದರು. ಆಂಧ್ರ ಪ್ರದೇಶದಲ್ಲಿ 470 ರೂಪಾಯಿ ನೀಡಿ, ಕರ್ನಾಟಕದಲ್ಲಿ 325 ರೂಪಾಯಿ ನೀಡುತ್ತಿದ್ದೀರಾ. ಗ್ರಾಹಕರ ಮೇಲೆ ಹಾಕಬೇಕಾದ ತೆರಿಗೆಯನ್ನು ರೈತರ ಮೇಲೇಕೆ ಹಾಕಿ ಅವರ ಹೊಟ್ಟೆ ಮೇಲೆ ಹೊಡೆಯುತ್ತಿದ್ದೀರಾ ಎಂದು ವೆಂಕಟೇಶ್ ಪ್ರಶ್ನಿಸಿದರು.

ಕನ್ನಡಿಗರ ಸುರಕ್ಷತೆ ಸರ್ಕಾರದ ಆದ್ಯತೆ

ಸುರಕ್ಷತೆಗಾಗಿ ರಾಜ್ಯದ ಮುಖ್ಯಕಾರ್ಯದರ್ಶಿಗಳವರು, ಕೇಂದ್ರ ವಿದೇಶಾಂಗ ಇಲಾಖೆಯ ವಿವಿಧ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಸ್ಥಳೀಯ ಅಧಿಕಾರಿಗಳು ಮತ್ತು ರಾಯಭಾರ ಕಚೇರಿಗಳು ನೀಡುವ ಸಲಹೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಸಹಾಯವಾಣಿ ಸಂಖ್ಯೆಗಳ ಮೂಲಕ ರಾಯಭಾರ ಕಚೇರಿಗಳಲ್ಲಿ ನಿಮ್ಮ ವಿವರ ನೋಂದಾಯಿಸಿಕೊಳ್ಳಿ ಎಂದಿದ್ದಾರೆ. ರಾಜ್ಯ ಸರ್ಕಾರದ ಅಧಿಕಾರಿಗಳು ನಿಮ್ಮ ಮಾಹಿತಿಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ವಿದೇಶಾಂಗ ಇಲಾಖೆ ಮತ್ತು ಸಂಬಂಧಪಟ್ಟ ರಾಯಭಾರ ಕಚೇರಿಗಳಿಗೂ ರವಾನೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ನೀವು ಎದೆಗುಂದ ಬೇಡಿ, ನಿಮ್ಮನ್ನು ಸುರಕ್ಷಿತವಾಗಿ, ರಾಜ್ಯಕ್ಕೆ ಕರೆತರಲು ನಾವು ಎಲ್ಲಾ ಅಗತ್ಯ ಕ್ರಮ ಕೈಗೊಂಡಿರುವುದಾಗಿ ತಮ್ಮ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಗರಿಷ್ಠ ಬೆಲೆ ನಿಗದಿ ಸಂಬಂಧ 2 ದಿನದಲ್ಲಿ ವರದಿ ನೀಡಿ

ಬದಲು ರೈತರ ಮೇಲೇಕೆ ಹೊರಿಸುತ್ತಿದ್ದೀರಾ. ಸಂಬಂಧವಿಲ್ಲದ ರೈತರ ಮೇಲೇಕೆ ಬರೆ ಎಳೆಯುತ್ತಿದ್ದೀರಾ ಎಂದು ಕುಮಾರಸ್ವಾಮಿ ಅವರು ತಂಬಾಕು ವರ್ತಕರನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ನಿಮ್ಮ ಸುಂಕ ಸಮಸ್ಯೆ ಬಗ್ಗೆ ನಾನು ಕೇಂದ್ರ ಸರ್ಕಾರದ ಹಣಕಾಸು ಸಚಿವರು ಹಾಗೂ ವಾಣಿಜ್ಯ ಸಚಿವರ ಜೊತೆ ಮಾತನಾಡುತ್ತೇನೆ. ಆದರೆ ಇದಕ್ಕೂ ಮೊದಲು ನೀವು ರೈತರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಿ ಎಂದು ತಾಕೀತು ಮಾಡಿದರು.

ಹರಾಜು ಪ್ರಕ್ರಿಯೆಯಲ್ಲಿ ವಿದೇಶಿ ಕಂಪನಿಗಳು ಭಾಗಿಯಾಗಲು ನಿರ್ಬಂಧ ಇದೆಯೇ ಎಂದು ಪ್ರಶ್ನಿಸಿದಾಗ ತಂಬಾಕು ಮಂಡಳಿ ಅಧಿಕಾರಿಗಳು ಇಲ್ಲವೆಂದು ಸ್ಪಷ್ಟಪಡಿಸಿದರು. ಹಾಗಾದರೆ ವಿದೇಶಿ ಕಂಪನಿಗಳು ಹರಾಜು ಪ್ರಕ್ರಿಯೆಯಲ್ಲಿ ಭಾಗಿಯಾಗಲು ಅವಕಾಶ ನೀಡಿ ಎಂದು ಸೂಚನೆ ನೀಡಿದರು.

ಏಕಾಏಕಿ ಹರಾಜು ನಿಲ್ಲಿಸಲು ಸಾಧ್ಯವಿಲ್ಲ. ಇಂತಹ ನಿರ್ಧಾರದಿಂದ ತಂಬಾಕು ಮಂಡಳಿ ಹಾಗೂ ಖರೀದಿದಾರರ ಬಗ್ಗೆ ರೈತರು ತಪ್ಪಾಗಿ ತಿಳಿಯುತ್ತಾರೆ. ನೀವೇನಾದರೂ ತಂಬಾಕು ಖರೀದಿಸಲ್ಲ ಎಂದು ಹೇಳಿದರೆ ರೈತರು ಪರ್ಯಾಯ ಬೆಳೆ ಬೆಳೆಯಲು ಮುಂದಾದರೆ ನೀವೇನು ಮಾಡುತ್ತೀರಾ. ಈ ಹಿನ್ನೆಲೆಯಲ್ಲಿ ರೈತರ ಹಿತಕ್ಕೆ ಧಕ್ಕೆ ತರಬೇಡಿ, ನಿಮ್ಮ ಸಮಸ್ಯೆ ಇದ್ದರೆ ದೆಹಲಿಗೆ ಬನ್ನಿ, ಸರ್ಕಾರದ ಹಂತದಲ್ಲಿ ಅದನ್ನು ಪರಿಹರಿಸಲು ಯತ್ನಿಸುತ್ತೇನೆ ಎಂದು ಭರವಸೆ ನೀಡಿದರು. ತಂಬಾಕು ಮಂಡಳಿಯವರು ತಂಬಾಕು ವರ್ತಕರ ಅಸೋಸಿಯೇಷನ್ ಜೊತೆ ಸಮಾಲೋಚನೆ ನಡೆಸಿ ಕರ್ನಾಟಕದಲ್ಲಿ ಗರಿಷ್ಟ ಎಷ್ಟು ಬೆಲೆ ನಿಗದಿ ಮಾಡಲಾಗಿದೆ ಎಂಬ ಬಗ್ಗೆ ಇನ್ನೆರಡು ದಿನದಲ್ಲಿ ನನಗೆ ವರದಿ ನೀಡಬೇಕು. ಈ ವಿಚಾರದಲ್ಲಿ ಪಲಾಯನ ಮಾಡಬಾರದು ಎಂದು ಕುಮಾರಸ್ವಾಮಿ ಅವರು ತಂಬಾಕು ಮಂಡಳಿ ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದರು. ಇದೇ ವಿಚಾರವಾಗಿ ನಾಳೆ (ಮಾರ್ಚ್ 3) ತಂಬಾಕು ಬೆಳೆಗಾರರ ಜೊತೆ ಸಭೆ ನಡೆಸುತ್ತೇನೆ ಎಂದು ತಿಳಿಸಿದರು.

ಇಂದಿನ ಸಭೆಯಲ್ಲಿ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಸಂಸದರಾದ ಯದುವೀರ್, ಸುನೀಲ್ ಬೋಸ್, ಶಾಸಕರಾದ ಜಿ.ಡಿ.ಹರೀಶ್ ಗೌಡ, ಡಿ.ರವಿಶಂಕರ್, ಸಿ.ಎನ್. ಮಂಜೇ ಗೌಡ, ವಿವೇಕಾನಂದ, ಮಾಜಿ ಶಾಸಕ ಕೆ.ಮಹದೇವ್, ತಂಬಾಕು ಮಂಡಳಿ ಅಧ್ಯಕ್ಷ ಶರತ್ ಕುಮಾರ್, ಕಾರ್ಯನಿರ್ವಾಹಕ ಕಾರ್ಯ ದರ್ಶಿ ಬಿ. ವಿಶ್ವಶ್ರೀ, ನಿರ್ದೇಶಕ ಶ್ರೀನಿವಾಸ್ ಸೇರಿದಂತೆ ಇತರರು ಹಾಜರಿದ್ದರು.

ತೆರಿಗೆ ಏರಿಕೆಯಿಂದ ಸಿಗರೇಟ್ ಸೇದುವವರ ಸಂಖ್ಯೆ ಭಾರೀ ಇಳಿಕೆ

ದುಬಾರಿ ತೆರಿಗೆ ವಿಧಿಸಿದ ಪರಿಣಾಮ ಸಿಗರೇಟ್ ಸೇದುವವರ ಸಂಖ್ಯೆ ಭಾರೀ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಇದನ್ನು ಸರಿದೂಗಿಸಲು ರೈತರಿಂದ ಖರೀದಿ ಮಾಡುವ ತಂಬಾಕಿನ ಬೆಲೆ ಸಹಜ ವಾಗಿಯೇ ಕಡಿಮೆ ಮಾಡಲಾಗಿದೆ ಎಂದು ಐಟಿಸಿ ಕಂಪನಿಯ ಪ್ರತಿನಿಧಿ ರವಿಶೆಟ್ಟಿ ಸ್ಪಷ್ಟನೆ ನೀಡಿದರು.

ಸಿಗರೇಟ್ ಮೇಲೆ ಈ ಹಿಂದೆ ಶೇಕಡ 18 ರಷ್ಟಿದ್ದ ಜಿಎಸ್‌ಟಿಯನ್ನು ಶೇಕಡ 40 ಕ್ಕೆ ಏರಿಕೆ ಮಾಡಲಾಗಿದೆ. ಇದರಿಂದ ಒಂದು ಸಿಗರೇಟ್ ಬೆಲೆ 17 ರಿಂದ 25 ರೂ.ಗೆ ಹೆಚ್ಚಳವಾಗಿದೆ ಎಂದು ಅಂಕಿ ಅಂಶಗಳ ಸಹಿತ ಮಾಹಿತಿ ನೀಡಿದರು.

2014 ರಲ್ಲಿ ಇದೇ ರೀತಿ ಸಿಗರೇಟ್ ಮೇಲಿನ ತೆರಿಗೆ ಹೆಚ್ಚಳ ಮಾಡಿ ಶೇಕಡ 20 ರಷ್ಟು ಸಿಗರೇಟ್ ಮಾರಾಟ ಕಡಿಮೆ ಯಾಯಿತು. ಇದರಿಂದ ತಂಬಾಕು ಕಂಪನಿಗಳು ಚೇತರಿಸಿಕೊಳ್ಳಲು ನಾಲ್ಕೈದು ವರ್ಷ ಬೇಕಾಯಿತು. ಈಗ ಅದೇ ಪರಿಸ್ಥಿತಿ ಪುನಾರಾವರ್ತನೆಯಾಗಿದೆ. ಈ ಹಿನ್ನೆಲೆಯಲ್ಲಿ ತೆರಿಗೆ ಕಡಿಮೆ ಮಾಡಿಸುವ ನಿಟ್ಟಿನಲ್ಲಿ ಹಣಕಾಸು ಸಚಿವರ ಜೊತೆ ಮಾತ ನಾಡಬೇಕು ಎಂದು ರವಿಶೆಟ್ಟಿ ಅವರು ಕುಮಾರಸ್ವಾಮಿ ಅವರಲ್ಲಿ ಮನವಿ ಮಾಡಿದರು.

ಕಳೆದ ವರ್ಷ ತಂಬಾಕು ಬೆಲೆ 330 ರೂಪಾಯಿ ಇತ್ತು, ಈ ವರ್ಷ 290 ರೂಪಾಯಿ ನಿಗದಿ ಯಾಗಿದ್ದು, 40 ರೂಪಾಯಿ ಕಡಿಮೆ ಯಾಗಿದೆ. ಆದರೆ ಮೈಸೂರಿನಲ್ಲಿ 254 ರಿಂದ 280 ರೂಪಾಯಿಗೆ ಹೆಚ್ಚಳ ಮಾಡಲಾಗಿದೆ. ಈ ಅಂಕಿ ಅಂಶವನ್ನು ಸೂಕ್ಷ್ಮವಾಗಿ ಗಮನಿಸುವುದನ್ನು ಬಿಟ್ಟು ಗರಿಷ್ಟ ಬೆಲೆ ಆಧಾರದ ಮೇಲೆ ಮಾತ ನಾಡಬಾರದು ಎಂದು ಶಾಸಕರಿಗೆ ಸಲಹೆ ನೀಡಿದರು.

ಇದೇನೆ ಇರಲಿ, ಈಗ ತಂಬಾಕಿಗೆ ಉತ್ತಮ ಬೆಲೆ ನೀಡುತ್ತೇವೆ. ಆದರೆ ಈಗಲೇ ಬೆಲೆ ನಿಗದಿ ಮಾಡಿ ಹೇಳಲು ಸಾಧ್ಯವಿಲ್ಲ. ಸ್ವಲ್ಪ ಸಮಯ ಕೊಡಿ ನ್ಯಾಯ ಯುತ ಬೆಲೆ ನಿಗದಿ ಮಾಡುತ್ತೇವೆ ಎಂದು ರವಿಶೆಟ್ಟಿ ಅವರು ಮನವಿ ಮಾಡಿದರು.

ಯುದ್ಧ ವಿಶ್ವರೂಪ ಭೀತಿ

ಯುದ್ಧಪೀಡಿತ ದೇಶಗಳಲ್ಲಿ ಮತ್ತಷ್ಟು ಆತಂಕ ಹೆಚ್ಚಿಸಿದೆ.

ಮಾತುಕತೆಗೆ ಇರಾನ್ ನಿರಾಕರಣೆ: ಉದ್ವಿಗ್ನತೆ ಶಮನಗೊಳಿಸುವ ನಿಟ್ಟಿನಲ್ಲಿ ಇರಾನ್‌ನ ಹೊಸ ಆಡಳಿತದೊಂದಿಗೆ ಮಾತುಕತೆ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದ್ದರು. ಆದರೆ ಇದನ್ನು ನಿರಾಕರಿಸಿರುವ ಇರಾನ್‌ನ ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿ ಅಲಿ ಲಾರಿಜಾನಿ, ಅಮೆರಿಕದೊಂದಿಗೆ ಮಾತುಕತೆ ನಡೆಸುವುದಿಲ್ಲ ಎಂದು ಸೋಮವಾರ ಸ್ಪಷ್ಟವಾಗಿ ತಿಳಿಸಿದ್ದಾರೆ. ಲಾರಿಜಾನಿ, ಒಮನ್ ಮೂಲಕ ಮಧ್ಯವರ್ತಿಯಾಗಿ ಅಮೆರಿಕದೊಂದಿಗೆ ಮಾತುಕತೆಗಳನ್ನು ಪುನರಾರಂಭಿಸಲು ಸಿದ್ಧರಾಗಿದ್ದಾರೆ ಎಂದು ವಾಲ್ ಸ್ಟ್ರೀಟ್ ಜರ್ನಲ್‌ನ್ನು ಉಲ್ಲೇಖಿಸಿ ಅಲ್ ಜಜೀರಾ ಮಾಡಿರುವ ವರದಿಯನ್ನು ನಿರಾಕರಿಸುವ ಮೂಲಕ ಪ್ರತಿದಾಳಿ ಮುಂದುವರೆಸುವ ಸೂಚನೆ ನೀಡಿದ್ದಾರೆ.

ರಣಭೀಕರ ದಾಳಿ–ಪ್ರತಿದಾಳಿ: ಖಮೇನಿ ಹತ್ಯೆ ಬೆನ್ನಲ್ಲೇ ಇರಾನ್ ಉಗ್ರ ರೂಪ ತಾಳಿ, ಅಮೆರಿಕ ಮತ್ತು ಇಸ್ರೇಲ್ ಪಡೆಗಳಿರುವ ಕುವೈತ್, ಬಹ್ರೇನ್, ಕತಾರ್, ಸೌದಿ ಅರೇಬಿಯಾ ಮತ್ತು ಯುಎಇ ಮೇಲೆ ಇರಾನ್ ಕ್ಷಿಪಣಿ ಮಳೆ ಸುರಿಸುತ್ತಿದೆ. ಈ ದಾಳಿಗಳಲ್ಲಿ ಅಮೆರಿಕದ ಮೂವರು ಸೈನಿಕರು ಮೃತಪಟ್ಟಿದ್ದು, ಯುರೋಪಿಯನ್ ರಾಷ್ಟ್ರಗಳ ನಾಗರಿಕರಿಗೂ ಭೀತಿ ಎದುರಾಗಿದೆ. ಇಸ್ರೇಲ್ ಕೇಂದ್ರ ಭಾಗದ ನಗರ ಬೆಟ್ ಶೆಮೆಷ್ ಮೇಲೆ ಇರಾನ್ ನಡೆಸಿದ ಕ್ಷಿಪಣಿಗಳ ದಾಳಿಯಲ್ಲಿ ಕನಿಷ್ಠ 9 ಮಂದಿ ಮೃತಪಟ್ಟು, 23 ಮಂದಿ ಗಾಯಗೊಂಡಿರುವುದಾಗಿ ಮೂಲಗಳು ಹೇಳಿವೆ. ಹಾಗೆಯೇ ಇರಾಕ್ ಗಡಿಗೆ ಹೊಂದಿಕೊಂಡ ಇರಾನ್‌ನ ಮೆಹ್ರಾನ್ ನಗರದಲ್ಲಿರುವ ಗಡಿ ಭದ್ರತಾ ಪಡೆಯ ಕೇಂದ್ರ ಕಚೇರಿ ಮೇಲೆ ಅಮೆರಿಕ ಹಾಗೂ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ 43 ಸೈನಿಕರು ಮೃತಪಟ್ಟಿದ್ದಾರೆ. ಉತ್ತರ ಟೆಹರಾನ್‌ನಲ್ಲಿರುವ ಗಾಂಧಿ ಆಸ್ಪತ್ರೆಗೆ ಹಾನಿಯಾಗಿದೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ ಮತ್ತೊಂದೆಡೆ ಇರಾನ್ ನೌಕಾ ಪಡೆಯ 9 ಹಡಗುಗಳ ಮೇಲೆ ದಾಳಿ ನಡೆಸಿ, ನಾಶಪಡಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ.

ಅಮೆರಿಕ ವಿಮಾನಗಳ ಪತನ: ಕುವೈತ್‌ನಲ್ಲಿ ಸೋಮವಾರ ಅಮೆರಿಕದ ಹಲವಾರು ಎಫ್–15 ಯುದ್ಧವಿಮಾನಗಳು ಪತನಗೊಂಡಿದ್ದು, ಆದರೆ ಪೈಲಟ್‌ಗಳು ಸುರಕ್ಷಿತವಾಗಿದ್ದಾರೆ. ವಿಮಾನದ ಎಲ್ಲಾ ಸಿಬ್ಬಂದಿಯನ್ನು ಸುರಕ್ಷಿತವಾಗಿ ವೈದ್ಯಕೀಯ ತಪಾಸಣೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಕುವೈತ್ ಮೇಲೆ ಇರಾನ್ ದಾಳಿ ನಂತರ ಅಮೆರಿಕ ರಾಯಭಾರ ಕಚೇರಿ ಆವರಣದಲ್ಲಿ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿರುವುದಾಗಿ ವರದಿಯಾಗಿದೆ. ಕುವೈತ್ ಅನ್ನು ಗುರಿಯಾಗಿಸಿಕೊಂಡು, ಇರಾನ್ ಕ್ಷಿಪಣಿ ಮತ್ತು ಡ್ರೋನ್ ಗುಂಡಿನ ದಾಳಿ ತೀವ್ರಗೊಳಿಸಿರುವುದರಿಂದ ಇಲ್ಲಿನ ರಾಯಭಾರ ಕಚೇರಿಗೆ ಬರಬೇಡಿ ಎಂದು ನಾಗರಿಕರಿಗೆ ಅಮೆರಿಕ ಸೂಚನೆ ನೀಡಿದೆ.

ಪರಮಾಣು ಕೇಂದ್ರದ ಮೇಲೆ ದಾಳಿ: ಮಧ್ಯಪ್ರಾಚ್ಯದಲ್ಲಿ ಯುದ್ಧದ ಜ್ವಾಲೆ ಈಗ ಅತ್ಯಂತ ಅಪಾಯಕಾರಿ ಹಂತಕ್ಕೆ ತಲುಪಿದ್ದು, ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್‌ನ ಪರಮಾಣು ಕೇಂದ್ರಗಳ ಮೇಲೆ ದಾಳಿ ನಡೆಸಿವೆ. ವಿಶೇಷವಾಗಿ ಇರಾನ್‌ನ ಪ್ರಮುಖ ಪರಮಾಣು ಕೇಂದ್ರವಾದ ನಟಾಂಜ್ ಅನ್ನು ಗುರಿಯಾಗಿಸಿಕೊಂಡು ಈ ಕಾರ್ಯಾಚರಣೆ ನಡೆಸಿವೆ ಎಂಬ ಸ್ಫೋಟಕ ಮಾಹಿತಿಯನ್ನು ಅಂತರ ರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯಲ್ಲಿರುವ ಇರಾನ್ ರಾಯಭಾರಿ ರೇಜಾ ನಜಾಫಿ ಬಹಿರಂಗಪಡಿಸಿದ್ದಾರೆ.

ರಣರಂಗವಾದ ದುಬೈ: ಕನಸಿನ ನಗರಿ ದುಬೈ ಈಗ ಅಕ್ಷರಶಃ ರಣರಂಗವಾಗಿ ಬದಲಾಗಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗೆ ಪ್ರತೀಕಾರವಾಗಿ ಇರಾನ್ ಈಗ ಗಲ್ಫ್ ರಾಷ್ಟ್ರಗಳ ಮೇಲೆ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಸುರಿಮಳೆಗೈಯುತ್ತಿರುವುದರಿಂದ ದುಬೈ, ದೋಹಾ, ಬಹ್ರೇನ್ ಮತ್ತು ಕುವೈತ್‌ನ ಪ್ರಮುಖ ಪ್ರದೇಶಗಳಲ್ಲಿ ಅಪಾಯಕಾರಿ ಸ್ಥಿತಿ ನಿರ್ಮಾಣವಾಗಿದೆ. ದುಬೈನ ಬುರ್ಜ್ ಅಲ್ ಅರಬ್ ಮತ್ತು ಫೇರ್‌ಮಾಂಟ್‌ನಂತಹ ವಿಶ್ವದ ಅತ್ಯಂತ ಐಷಾರಾಮಿ ಹೋಟೆಲ್‌ಗಳಿಗೆ ಬಂದಿದ್ದ ಪ್ರವಾಸಿಗರು, ಪ್ರಾಣ ಭಯದಿಂದ ನೆಲಮಾಳಿಗೆ ಮತ್ತು ಪಾರ್ಕಿಂಗ್ ಗ್ಯಾರೇಜ್‌ಗಳಲ್ಲಿ ಹಾಸಿಗೆ ಹಾಕಿಕೊಂಡು ಮಲಗುತ್ತಿದ್ದಾರೆ.

ಖಮೇನಿ ಪತ್ನಿ ಮನ್ಸೌರೆ ಸಾವು

ಅವರು ಇರಾನ್‌ನ ಸರ್ಕಾರಿ ಪ್ರಸಾರ ಸಂಸ್ಥೆಯಾದ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಬ್ರಾಡ್‌ಕಾಸ್ಟಿಂಗ್‌ನ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಖಮೇನಿ ಅವರ ಪುತ್ರಿಯರಾದ ಬುಶ್ರಾ ಮತ್ತು ಹೋದಾ ಅವರು ವಿವಾಹಿತರಾಗಿದ್ದಾರೆ. ಖಮೇನಿ ಅವರಿಗೆ ಹಲವಾರು ಮೊಮ್ಮಕ್ಕಳಿದ್ದರೂ, ಅವರ ಗುರುತನ್ನು ಎಂದಿಗೂ ಬಹಿರಂಗಪಡಿಸಲಾಗಿಲ್ಲ. ಸಾರ್ವಜನಿಕವಾಗಿ ಅತ್ಯಂತ ಶಕ್ತಿಶಾಲಿ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಿದ್ದ ಖಮೇನಿ, ತಮ್ಮ ಕೌಟುಂಬಿಕ ಜೀವನವನ್ನು ಮಾತ್ರ ಯಾವುದೇ ಬಾಹ್ಯ ತನಿಖೆ ಅಥವಾ ಪ್ರಚಾರಕ್ಕೆ ಸಿಗದಂತೆ ಬಹಳ ಜಾಗರೂಕತೆಯಿಂದ ರಹಸ್ಯವಾಗಿಟ್ಟಿದ್ದರು.

ಖಮೇನಿ ಸಾವು ಘೋಷಿಸಿದ್ದ ಅಮೆರಿಕ–ಇಸ್ರೇಲ್: ಇರಾನ್‌ನ ಟಾರ್ಗೆಟ್‌ಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಗಳ ನಂತರ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಕೊಲ್ಲಲ್ಪಟ್ಟಿದ್ದಾರೆ ಎಂದು ರಾಜ್ಯ ಮಾಧ್ಯಮಗಳು ತಿಳಿಸಿದ್ದವು. ಟೆಹ್ರಾನ್ ಮೇಲೆ ನಡೆದ ಜಂಟಿ ದಾಳಿಯಲ್ಲಿ ಅವರು ಸಾವನ್ನಪ್ಪಿದ್ದಾರೆ ಎಂದು ವಾಷಿಂಗ್ಟನ್ ಮತ್ತು ಟೆಲ್ ಅವೀವ್ ಹೇಳಿದ ನಂತರ ಈ ದೃಢೀಕರಣ ಬಂದಿದೆ. ಇರಾನ್‌ನ ಸರ್ವೋಚ್ಚ ನಾಯಕ ಹುತಾತ್ಮರಾಗಿದ್ದಾರೆ ಎಂದು ರಾಜ್ಯ ಪ್ರಸಾರಕ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಬ್ರಾಡ್‌ಕಾಸ್ಟಿಂಗ್ ಮಾರ್ಚ್ 1 ರಂದು ವರದಿ ಮಾಡಿತ್ತು.

ಅರಾಫಿ ಹತ್ಯೆ?

ಶನಿವಾರ ಮುಂಜಾನೆ ತೆಹ್ರಾನ್‌ನಲ್ಲಿ ನಡೆದ ಯುಎಸ್–ಇಸ್ರೇಲಿ ಜಂಟಿ ವೈಮಾನಿಕ ದಾಳಿಯಲ್ಲಿ ದೀರ್ಘಕಾಲದ ನಾಯಕ ಅಲಿ ಖಮೇನಿಯವರ ಮರಣದ ನಂತರ ಇರಾನ್ ತನ್ನ ಮಧ್ಯಂತರ ಸುಪ್ರೀಂ ನಾಯಕನಾಗಿ ಅಲಿರೆಜಾ ಅರಾಫಿಯನ್ನು ನೇಮಿಸಿತ್ತು.

ಇರಾನ್‌ನ ಧಾರ್ಮಿಕ ಮತ್ತು ರಾಜಕೀಯ ಸ್ಥಾಪನೆಯೊಳಗೆ ದೀರ್ಘಕಾಲದಿಂದ ಒಳಗಿನವರಾಗಿದ್ದ ಅರಾಫಿ, ಸರ್ವೋಚ್ಛ ನಾಯಕನ ಅಧಿಕಾರವನ್ನು ವಹಿಸಿಕೊಂಡು, ಪ್ರತೀಕಾರದ ಶಪಥ ಮಾಡಿದ್ದರು. ಖಮೇನಿಯವರ ಹತ್ಯೆಯ ದಿನದಂದು ಅಯತೊಲ್ಲಾ ಅರಾಫಿಯನ್ನು ಸರ್ವೋಚ್ಛ ನಾಯಕನಾಗಿ ಆಯ್ಕೆ ಮಾಡಲಾಯಿತು. ಆದಾಗ್ಯೂ, ಮಾ.2, 2026 ರ ಹೊತ್ತಿಗೆ, ಇತ್ತೀಚಿನ ವೈಮಾನಿಕ ದಾಳಿಗಳಲ್ಲಿ ಅವರು ಸಾವನ್ನಪ್ಪಿದ್ದಾರೆ ಎಂದು ವರದಿಗಳು ಹೇಳುತ್ತಿವೆ.

ಸಿಬ್ಬಂದಿ ಸಾವು!

ಸಾವನ್ನಪ್ಪಿದ್ದಾರೆ. ಈ ಮೂಲಕ ಇರಾನ್–ಇಸ್ರೇಲ್ ನಡುವಿನ ಯುದ್ಧದಲ್ಲಿ ಮೊದಲ ಭಾರತೀಯನ ಸಾವಾಗಿದೆ. ಈ ದಾಳಿಯಿಂದಾಗಿ ಬೆಂಕಿ ಕಾಣಿಸಿಕೊಂಡು ಹಡಗಿನಲ್ಲಿದ್ದ ಎಲ್ಲಾ ಸಿಬ್ಬಂದಿಯನ್ನು ಸ್ಥಳಾಂತರಿಸಬೇಕಾಯಿತು. ಆದರೆ, ಈ ದುರಂತದಲ್ಲಿ ಓರ್ವ ಭಾರತೀಯ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಸೋಮವಾರ ಓಮನ್ ಕೊಲ್ಲಿಯಲ್ಲಿ ಮಾರ್ಷಲ್ ದ್ವೀಪಗಳ ಧ್ವಜ ಹೊತ್ತ ತೈಲ ಟ್ಯಾಂಕರ್‌ಗೆ ಬಾಂಬ್ ತುಂಬಿದ ಡ್ರೋನ್ ಡಿಕ್ಕಿ ಹೊಡೆದು ಭಾರತೀಯ ನಾವಿಕನೊಬ್ಬ ಸಾವನ್ನಪ್ಪಿದ್ದಾನೆ ಎಂದು ಓಮನ್ ಅಧಿಕಾರಿಗಳನ್ನು ಉಲ್ಲೇಖಿಸಿ ಮಾಧ್ಯಮ ವರದಿಗಳು ತಿಳಿಸಿವೆ. ಮಸ್ಕತ್ ಬಳಿ ಈ ದಾಳಿ ನಡೆದಿದ್ದು, ಮೃತ ಸಿಬ್ಬಂದಿ ಭಾರತೀಯ ಪ್ರಜೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

ಏನು ಮಾಡುತ್ತೀರಾ...

ನೀವು ಕಂಪನಿಗಳ ಪರವಾಗಿ ಇದ್ದೀರಾ. ನೀವು ರೈತರು ಹಾಗೂ ಕಂಪನಿಗಳ ಮಧ್ಯವರ್ತಿಯಾಗಿ ಕೆಲಸ ಮಾಡಬೇಕು. ಅದು ಬಿಟ್ಟು ಒಬ್ಬರ ಪರವಾಗಿ ನಿಲ್ಲಬಾ ರದು. ಅದೂ ರೈತರನ್ನು ಬಿಟ್ಟು ಕಂಪನಿಗಳ ಪರವಾಗಿ ಮಾತನಾಡ ಬಾರದು ಎಂದು ಮಂಡಳಿ ಅಧಿಕಾರಿಗಳಿಗೆ ಮಂಜು ತಾಕೀತು ಮಾಡಿದರು. ಈ ವೇಳೆ ಮಾತನಾಡಿದ ಶಾಸಕ ಡಿ.ರವಿಶಂಕರ್ ಅವರು, ತಂಬಾಕು ಮಂಡಳಿ ಅಧಿಕಾರಿಗಳಿಗೆ ರೈತರ ಕಷ್ಟ ತಿಳಿಯುವುದಿಲ್ಲ. ಎಸಿ ರೂಂನಲ್ಲಿ ಕುಳಿತು ಕೆಲಸ ಮಾಡುವವರಿಗೆ ಹೊಲದಲ್ಲಿ ಶ್ರಮ ವಹಿಸುವ ರೈತರ ಬೆಲೆ ಏನು ಗೊತ್ತಿದೆ ಎಂದು ಖಾರವಾಗಿ ಪ್ರಶ್ನಿಸಿದರು. ಇದಕ್ಕೆ ಆಕ್ಷೇಪಿಸಿದ ಮಂಡಳಿಯ ಕಾರ್ಯನಿರ್ವಾಹಕ ಕಾರ್ಯದರ್ಶಿ ವಿಶ್ವಶ್ರೀ, ನಾವು ಎಸಿ ರೂಂನಲ್ಲಿ ಕುಳಿತು ಕೆಲಸ ಮಾಡುತ್ತಿದ್ದೇವೆ, ರೈತರ ಕಷ್ಟ ಗೊತ್ತಿಲ್ಲ ಎಂದೆಲ್ಲಾ ಮಾತನಾಡಬೇಡಿ. ಜನಪ್ರತಿನಿಧಿಗಳ ಬಗ್ಗೆ ನಮಗೆ ಗೌರವ ಇದೆ, ಅಧಿಕಾರಿಗಳ ಬಗ್ಗೆ ಹೀಗೆಲ್ಲಾ ಹಗುರವಾಗಿ ಮಾತನಾಡಬೇಡಿ ಎಂದು ಸಲಹೆ ನೀಡಿದರು.

ಕೆಎಸ್ಐಸಿ ಕಾರ್ಖಾನೆ ಮುಚ್ಚುವುದು ಬರೀ ವದಂತಿ

- ಕಾಂಗ್ರೆಸ್ ಮುಖಂಡ ಕೆ.ವಿ.ಮಲ್ಲೇಶ್ ಸ್ಪಷ್ಟನೆ
- ಪ್ರತಿಭಟನೆ ಹಿಂಪಡೆಯಲು ಮನವಿ



ಕೆ.ವಿ.ಮಲ್ಲೇಶ್

ಮೈಸೂರು, ಮಾ. 2– ತಿ.ನರಸೀಪುರ ಪಟ್ಟಣದ ರೇಷ್ಮೆ ನೂಲು ಉತ್ಪಾದನಾ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದರಿಂದ ಕಾರ್ಖಾನೆ ಮುಚ್ಚಲಾಗುತ್ತದೆ ಎಂಬುದು ಬರೀ ವದಂತಿಯಾಗಿದೆ ಎಂದು ಮಾಜಿ ನಗರ ಪಾಲಿಕೆ ಸದಸ್ಯ ಹಾಗೂ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್ ಹೇಳಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಟ್ಟಣದಲ್ಲಿ ತಾಲೂಕು ಕ್ರೀಡಾಂಗಣ ಇಲ್ಲ. ಇದನ್ನು ಮನಗಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಕ್ರೀಡಾಂಗಣ ನಿರ್ಮಾಣಕ್ಕೆ 6 ಕೋಟಿ ರೂ. ಅನುದಾನ ಮಂಜೂರು ಮಾಡಿಸಿದ್ದಾರೆ. ಈ ನಡುವೆ ಪಟ್ಟಣದಲ್ಲಿ ಸ್ಥಳಾವಕಾಶದ ಕೊರತೆ ಇರುವುದರಿಂದ ಕೆಎಸ್ಐಸಿ ಸುಪರ್ದಿಯಲ್ಲಿರುವ 12 ಎಕರೆ ಪ್ರದೇಶದಲ್ಲಿ 5 ಎಕರೆಯನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಈ ಬಗ್ಗೆ ಮೊದಲೇ ಕೆಎಸ್ಐಸಿ ಅಧಿಕಾರಿಗಳಿಗೆ ತಿಳಿಸಲಾಗಿದೆ. ಈ ವೇಳೆ ಕೆಎಸ್ಐಸಿ ಅಧಿಕಾರಿಗಳು ಕ್ರೀಡಾಂಗಣ ನಿರ್ಮಾಣಕ್ಕೆ ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ. ಇಷ್ಟಾದರೂ ಪ್ರತಿಪಕ್ಷಗಳ ಕುಮ್ಮಕ್ಕಿನಿಂದ ಅವರು ಹೇಳುತ್ತಿರುವ ಸುಳ್ಳನ್ನೇ ನಿಜವೆಂದು ನಂಬಿ ಅಲ್ಲಿನ ಸಿಬ್ಬಂದಿ ಪ್ರತಿಭಟನೆ ನಡೆಸುತ್ತಿರುವುದು ಅನಗತ್ಯವಾಗಿದೆ.

ಕೆಎಸ್ಐಸಿ ಉತ್ಪಾದನಾ ಘಟಕ ಮುಚ್ಚುವಂತಿದ್ದರೆ ಅದಕ್ಕೆ ಕ್ರೀಡಾಂಗಣ ನಿರ್ಮಾಣದ ಅಗತ್ಯವೇನು? ಇದನ್ನು ಮನಗಂಡು ಸಿಬ್ಬಂದಿ ಪ್ರತಿಭಟನೆ ವಾಪಸ್ ಪಡೆದು ಕಾರ್ಖಾನೆಯ ಬೆಳವಣಿಗೆಗೆ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಕಾರ್ಖಾನೆಯೂ ಅಭಿವೃದ್ಧಿಯಾಗಲಿ : ಕ್ರೀಡಾಂಗಣದ ಅಭಿವೃದ್ಧಿ ಜತೆಗೆ ಸರ್ಕಾರ ಪಾರಂಪರಿಕ ಕಾರ್ಖಾನೆಯ ಅಭಿವೃದ್ಧಿಗೂ ಗಮನಹರಿಸಬೇಕಿದೆ. ರಾಜಪ್ರಭುತ್ವದ ಅಡಿಯಲ್ಲಿ ಪ್ರಾರಂಭಗೊಂಡು ಪ್ರಜಾಪ್ರಭುತ್ವದಲ್ಲಿಯೂ ತನ್ನ ಅಸ್ತಿತ್ವ ಉಳಿಸಿಕೊಂಡಿರುವ ಕಾರ್ಖಾನೆಗೆ ಸರ್ಕಾರ ಅಗತ್ಯ ಭೂಮಿ, ಹೆಚ್ಚುವರಿ ಸ್ಥಳಾವಕಾಶ ನೀಡಬೇಕು. ಅಲ್ಲದೆ, ಕಾರ್ಖಾನೆಯನ್ನು ಪಟ್ಟಣದ ಹೊರಹೊಲಯಕ್ಕೆ ಸ್ಥಳಾಂತರಿಸಿ ಸುಸಜ್ಜಿತ ಕಟ್ಟಡ, ಸಿಬ್ಬಂದಿಗೆ ವಸತಿ ನಿಲಯ, ಹೊಸ ಯಂತ್ರೋಪಕರಣಗಳೊಂದಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು. ಆ ಮೂಲಕ ಪಾರಂಪರಿಕ ಕೊಂಡಿಯೊಂದನ್ನು ಕಾಪಾಡಬೇಕು ಎಂದರು.

ವಿಶೇಷ ಪೂಜೆ...



ಮೈಸೂರಿನ ಅಗ್ರಹಾರದಲ್ಲಿರುವ ಶ್ರೀ ರೇಣುಕಾಚಾರ್ಯ ದೇವಸ್ಥಾನದಲ್ಲಿ ಶ್ರೀ ರೇಣುಕಾಚಾರ್ಯರ ಜಯಂತಿ ಅಂಗವಾಗಿ ಅಭಿಷೇಕ, ವಿಶೇಷ ಪೂಜೆ ನೆರವೇರಿತು. ಮೈಸೂರು ಜಪದಕಟ್ಟೆಯ ಮುಮ್ಮಡಿ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅಭಿಷೇಕ ನೆರವೇರಿಸಿದರು. ಗೌರವ ಅಧ್ಯಕ್ಷ ಅಶೋಕ್, ರೇಣುಕಾಚಾರ್ಯ ಜಯಂತಿ ಅಧ್ಯಕ್ಷ ಶ್ರೀಶೈಲ, ಪಾಲಿಕೆ ಮಾಜಿ ಸದಸ್ಯ ಜಗದೀಶ್, ಉಪಾಧ್ಯಕ್ಷ ಜ್ಞಾನಜ್ಯೋತಿ ದಯಾನಂದ್, ಜ್ಞಾನಶಂಕರ್, ಖಜಾಂಚಿ ನಿಂಗಣ್ಣ, ವಿರೂಪಾಕ್ಷಪ್ಪ, ಗಿರೀಶ್, ಶಿವಾರ್ಚಕರಾದ ದಿನೇಶ್, ಚಂದ್ರಶೇಖರ್, ಶಿವಪ್ರಕಾಶ್, ಮೋಹನ್, ಅರ್ಚಕರಾದ ವೇದಮೂರ್ತಿ, ರವಿ, ಮಾಲಿನಿ ಪಾಲಾಕ್ಷ, ಭಾನುಮೋಹನ್ ಮತ್ತಿತರರಿದ್ದರು.

ಏಂಜಲ್ಸ್ ಮಾಂಟೆಸ್ಸರಿ ಶಾಲೆ ವಾರ್ಷಿಕೋತ್ಸವ...



ಮೈಸೂರಿನ ಬನ್ನಿಮಂಟಪದ 'ಎ' ಲೇಔಟ್‌ನಲ್ಲಿರುವ ಲಿಟಲ್ ಏಂಜಲ್ಸ್ ಮಾಂಟೆಸ್ಸರಿ ಶಾಲೆಯ ವಾರ್ಷಿಕೋತ್ಸವ ಮತ್ತು ಪದವಿ ಪ್ರದಾನ ಸಮಾರಂಭ 'ಸೃಷ್ಟಿ 2026' ಅದ್ದೂರಿಯಾಗಿ ನಡೆಯಿತು. ಮಕ್ಕಳ ಸೃಜನಶೀಲತೆ, ಆತ್ಮವಿಶ್ವಾಸ ಮತ್ತು ಕಲಿಕೆಯ ಮೈಲಿಗಲ್ಲುಗಳನ್ನು ಬಿಂಬಿಸಿದ ಸಂಜೆಯ ಕಾರ್ಯಕ್ರಮ ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಅವಿಸ್ಮರಣೀಯವಾಗಿತ್ತು. ಮುಖ್ಯ ಅತಿಥಿಯಾಗಿ ಭಾರತದ ಖ್ಯಾತ ಮರಳು ಶಿಲ್ಪ ಕಲಾವಿದೆ ಎಂ.ಎನ್.ಗೌರಿ ಭಾಗವಹಿಸಿದ್ದರು. ಸಂಸ್ಥೆಯ ಪ್ರಾಂಶುಪಾಲರಾದ ಡಾ.ಸುಲ್ತಾನಾ ಜಬೀನ್, ಸೆಂಟರ್ ಮ್ಯಾನೇಜರ್ ಅಸ್ಮಾ ತಹೂರ ಮತ್ತಿತರರಿದ್ದರು.

ನಾಳೆ ಅನುಷ್ಠಾನ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ

ಮೈಸೂರು,ಮಾ.2–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲಾ–ತಾಲೂಕು ಮಟ್ಟದ ಹಾಗೂ ಮೈಸೂರು ಪಾಲಿಕೆ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಮಾ.4ರಂದು ಬೆಳಗ್ಗೆ 10:30ಕ್ಕೆ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದೆ. ಜಿಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಪಂ ಸಿಇಓ ಯುಕೇಶ್‌ಕುಮಾರ್, ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಭಾಗವಹಿಸಲಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಯೋಜನಾ ನಿರ್ದೇಶಕ ಕೆ.ಆರ್ ಶಂಕರ್ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ.

ನಂದೀಶ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಸಹಪ್ರಾಧ್ಯಾಪಕ ಡಾ.ಪ್ರಸನ್ನ ಬಿ.ಟಿ. ಅವರ ಮಾರ್ಗದರ್ಶನದಲ್ಲಿ ನಂದೀಶ ಹೆಚ್.ಡಿ. ಅವರು ನಡೆಸಿದ ಸಂಶೋಧನೆಯ ಮಹಾಪ್ರಬಂಧವನ್ನು ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಅಂಗೀಕರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಗತ್ಯವಿರುವ ರಸ್ತೆಗಳ ಅಗಲೀಕರಣಕ್ಕೆ ಸಚಿವರ ಸೂಚನೆ

ನೆನೆಗುದಿಗೆ ಬಿದ್ದಿದ್ದ ರಾಜ್‌ಕುಮಾರ್ ರಸ್ತೆಯ ಅಭಿವೃದ್ಧಿ ಕಾಮಗಾರಿ ಇಂದಿನಿಂದ ಆರಂಭ



ಮೈಸೂರು ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ರಸ್ತೆ ಅಗಲೀಕರಣ ಕಾಮಗಾರಿಗಳನ್ನು ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಸಭೆ ನಡೆಸಿದರು.

ಮೈಸೂರು,ಮಾ.2(ಎಂಕೆ)– ಮೈಸೂರು ನಗರ ವೇಗವಾಗಿ ಬೆಳೆಯುತ್ತಿದ್ದು, ಸಂಚಾರಿ ವ್ಯವಸ್ಥೆಯನ್ನು ಸುಗಮಗೊಳಿಸಲು ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಸೇರಿದಂತೆ ಅಗತ್ಯವಿರುವ ರಸ್ತೆಗಳ ಅಗಲೀಕರಣ ಕಾಮಗಾರಿ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸೂಚಿಸಿದರು.

ಮೈಸೂರು ಜಿಪಂ ಮಿನಿ ಸಭಾಂಗಣದಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ನಗರಪಾಲಿಕೆ ವಲಯ ಕಚೇರಿ 7 ಮತ್ತು 9ರ ವ್ಯಾಪ್ತಿಯ ಪ್ರಮುಖ ರಸ್ತೆಗಳ ಅಗಲೀಕರಣ ಕಾಮಗಾರಿಗಳ ಕುರಿತು ಸಭೆ ನಡೆಸಿದ ಅವರು, ರಸ್ತೆ ಅಗಲೀಕರಣಕ್ಕೆ ಅಗತ್ಯ ಇರುವ ಜಾಗ ಕುರಿತಂತೆ ಸಂಬಂಧಿಸಿದ ಇಲಾಖೆಗೆ ಪತ್ರ ಬರೆದು ಎನ್‌ಒಸಿ ಪಡೆದು ರಸ್ತೆ ಕಾಮಗಾರಿ ಪ್ರಾರಂಭಿಸಿ. ಖಾಸಗಿ ಪ್ರದೇಶದಲ್ಲಿ ನಿಯಮಾನುಸಾರ ಟಿಡಿಆರ್ ನೀಡಿ ಜಾಗವನ್ನು ಪಡೆದುಕೊಳ್ಳಿ ಎಂದು ಸಚಿವರು ತಿಳಿಸಿದರು.

ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಅಬ್ಬಾ ರಸ್ತೆ (ಸರ್ಕಾರಿ ಅತಿಥಿ ಗೃಹದಿಂದ ಕಾಳಿಕಾಂಬ ದೇವಸ್ಥಾನದವರೆಗೆ), ಬೆಂಗಳೂರು–ನೀಲಗಿರಿ ರಸ್ತೆ (ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಪೌಂಟೇನ್ ವೃತ್ತದವರೆಗೆ ಹಾಗೂ ಫೈವ್ ಲೈಟ್ ವೃತ್ತದಿಂದ ಸಬ್ ಅರ್ಬನ್ ಕಡೆಯ ರಸ್ತೆ), ಮಲೆ ಮಹದೇಶ್ವರ ರಸ್ತೆ (ಗೋಪಾಲಗೌಡ ಆಸ್ಪತ್ರೆ ವೃತ್ತದಿಂದ ಬುದ್ಧ ವೃತ್ತದವರೆಗೆ), ಚಾಮುಂಡಿ ವಿಹಾರ ಸ್ಟೇಡಿಯಂ ರಸ್ತೆ (ಎಸ್.ಪಿ ವೃತ್ತದಿಂದ ಗೋಪಾಲಗೌಡ ಆಸ್ಪತ್ರೆ ವೃತ್ತದವರೆಗೆ), ಪುಲಿಕೇಶಿ ರಸ್ತೆ (ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಅಶೋಕ ರಸ್ತೆಯವರೆಗೆ), ಹೈದರ್ ಅಲಿ ರಸ್ತೆ (ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಅಜೀಜ್ ಸೇಠ್ ಜೋಡಿ ರಸ್ತೆಯವರೆಗೆ) ಹಾಗೂ ಡಾ.ರಾಜ್‌ಕುಮಾರ್ ರಸ್ತೆ ಅಗಲೀಕರಣ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ನಾಳೆಯಿಂದ ಕಾಮಗಾರಿ ಆರಂಭ: ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ಬಾಕಿ ಉಳಿದಿರುವ 200 ಮೀಟರ್ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ನಾಳೆಯಿಂದಲೇ ಪ್ರಾರಂಭಿಸಲಾಗುವುದು. ಫಲಾನುಭವಿಗಳು ಭೂ ಪರಿಹಾರಕ್ಕೆ ಕೋರ್ಟ್ ಮೊರೆ ಹೋಗಿದ್ದರೆ ಹೊರತು ರಸ್ತೆ ಅಗಲೀಕರಣದ ವಿರುದ್ಧವಲ್ಲ. ಹಾಗಾಗಿ ಸಮಸ್ಯೆ ಬಗೆಹರಿಸಿದ್ದು, ನಾಳೆಯಿಂದಲೇ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದರು.

ಸದ್ಯದಲ್ಲೇ ಉಳಿಕೆ ಕಾಮಗಾರಿ ಆರಂಭ: ಪಾಲಿಕೆ ಎಸ್‌ಇ ಮಂಜುನಾಥ್ ಮಾತನಾಡಿ, ಅಜೀಜ್ ಸೇಠ್ ಮುಖ್ಯರಸ್ತೆಯಲ್ಲಿ ಗಾಂಧಿನಗರದ ಬಳಿ ಬಾಕಿ ಉಳಿದಿರುವ ರಸ್ತೆ ಅಗಲೀಕರಣ ಕಾಮಗಾರಿಯನ್ನು ಸದ್ಯದಲ್ಲಿಯೇ ಪೂರ್ಣಗೊಳಿಸಲಾಗುವುದು. ರಸ್ತೆ ಅಗಲೀಕರಣದಲ್ಲಿದ್ದ ಗೊಂದಲಗಳನ್ನು ಬಗೆಹರಿಸಲಾಗಿದೆ ಎಂದರು. ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಕೆಪಿಎ ನಿರ್ದೇಶಕ ವಿಷ್ಣು ವರ್ಧನ್ ಮತ್ತಿತರರು ಉಪಸ್ಥಿತರಿದ್ದರು.

ಕೋರ್ಟ್‌ನಲ್ಲೇ ಇತ್ಯರ್ಥವಾಗಬೇಕು...

ಮೈಸೂರಿನ ಹೃದಯ ಭಾಗದಲ್ಲಿರುವ ಐತಿಹಾಸಿಕ ಇರ್ವಿನ್ ರಸ್ತೆಯಲ್ಲಿ ವಿವಾದದಲ್ಲಿರುವ ಕಟ್ಟಡವೊಂದರ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಡಾ.ಹೆಚ್.ಸಿ.ಮಹದೇವಪ್ಪ, ಕಟ್ಟಡದವರು ಕೋರ್ಟ್‌ನಲ್ಲಿ ಕೇಸ್ ನಡೆಸುತ್ತಿದ್ದು, ಕಟ್ಟಡ ತೆರವು ಮಾಡದಂತೆ ತಡೆ ತಂದಿದ್ದಾರೆ. ಆದ್ದರಿಂದ ಕೋರ್ಟ್‌ನಲ್ಲಿ ಇತ್ಯರ್ಥವಾದ ಬಳಿಕವೇ ಇರ್ವಿನ್ ರಸ್ತೆ ಸಮಸ್ಯೆ ಬಗೆಹರಿಯಲಿದೆ ಎಂದರು.

ಬುಲೆಟ್ ಡಿಕ್ಕಿ ಹೊಡೆದು ಸೈಕಲ್ ಸವಾರ ಸಾವು

ಮೈಸೂರು,ಮಾ.2(ಎಂಕೆ)– ಬುಲೆಟ್ ಡಿಕ್ಕಿ ಹೊಡೆದು ಸೈಕಲ್ ಸವಾರರೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮೈಸೂರಿನ ಮಾನಂದವಾಡಿ ರಸ್ತೆ ಶ್ರೀನಿವಾಸ ಸರ್ಕಲ್ ಬಳಿ ನಡೆದಿದೆ.

ಅಶೋಕಪುರಂ ನಿವಾಸಿ ಗಂಗಾಧರ್(76) ಮೃತ ದುರ್ದೈವಿ. ಸೋಮವಾರ ಬೆಳಗ್ಗೆ 6.45ರ ಸುಮಾರಿಗೆ ಗಂಗಾಧರ್, ಅಶೋಕಪುರಂ ಕಡೆಯಿಂದ ಶ್ರೀನಿವಾಸ ಸರ್ಕಲ್ ಕಡೆಗೆ ಸೈಕಲ್‌ನಲ್ಲಿ ಹೋಗುತ್ತಿದ್ದ ವೇಳೆ ಹೆಚ್.ಡಿ.ಕೋಟೆಯಿಂದ ಮಾನಂದವಾಡಿ ರಸ್ತೆ ಮೂಲಕ ಬುಲೆಟ್ (ಕೆ.ಎ.09 ಜೆಕೆ.5737)ನಲ್ಲಿ ಬರುತ್ತಿದ್ದ ವಾಸೀಂ ಅಹಮದ್ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ತೀವ್ರ ಗಾಯಗೊಂಡ ಗಂಗಾಧರ್ ಸ್ಥಳದಲ್ಲೇ ಮೃತಪಟ್ಟಿದ್ದು, ವಾಸೀಂ ಅಹಮದ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಸಂಬಂಧ ಕೆ.ಆರ್.ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳಾ ನಾಯಕತ್ವ ಕುರಿತ ರಾಜ್ಯಮಟ್ಟದ ಕಾರ್ಯಾಗಾರಕ್ಕೆ ಚಾಲನೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ 'ಮಹಿಳಾ ನಾಯಕತ್ವ' ಕುರಿತ ರಾಜ್ಯಮಟ್ಟದ ಕಾರ್ಯಾಗಾರ ಹಾಗೂ ಮಹಿಳಾ ವಿಭಾಗದ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಕಾರ್ಯಕ್ರಮ ನಡೆಯಿತು.

ಮೈಸೂರು,ಮಾ.2(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಡಿಸಿಸಿ ಮಹಿಳಾ ಸಹಕಾರ ವಿಭಾಗದ ವತಿಯಿಂದ 'ಮಹಿಳಾ ನಾಯಕತ್ವ' ಕುರಿತ ರಾಜ್ಯಮಟ್ಟದ ಕಾರ್ಯಾಗಾರ ಹಾಗೂ ಮಹಿಳಾ ವಿಭಾಗದ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ದೇಶದಲ್ಲಿ ಮಹಿಳಾ ನಾಯಕತ್ವಕ್ಕೆ ಅಡಿಗಲ್ಲು ಹಾಕಿದವರು ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್. ಈ ಇಬ್ಬರೂ ಮಹನೀಯರು ಕಂಡ ಕನಸು ಇಂದು ನನಸಾಗುವ ಸಂದರ್ಭ ಸೃಷ್ಟಿಯಾಗುತ್ತಿದೆ. ಹೆಣ್ಣು ಕುಟುಂಬದ ಕಣ್ಣು ಎಂಬ ಮಾತಿನಂತೆ ಹೆಣ್ಣಿನ ಕೈ ಬಲಪಡಿಸುವ ಕಾರ್ಯವನ್ನು ರಾಜ್ಯ ಸರ್ಕಾರ ಮಾಡಿದೆ ಎಂದರು.

ಸಂವಿಧಾನದ ಆಶಯಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ಜಾರಿಗೊಳಿಸಿದ ಪಂಚ ಗ್ಯಾರಂಟಿ ಯೋಜನೆಗಳು ಮಹಿಳೆಯರ ಸಬಲೀಕರಣಕ್ಕೆ ಬಲ ತುಂಬಿವೆ. ಮಹಿಳೆಯರ ಮೂಲ ಅಗತ್ಯತೆಗಳನ್ನು ಪೂರೈಸಿವೆ. ಈ ನಿಟ್ಟಿನಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಿ, ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ತಾತ್ವಿಕವಾಗಿ ಬೆಳೆಯಬೇಕು ಎಂದು ಸಲಹೆ ನೀಡಿದರು.

ಎಐಸಿಸಿ ವಕ್ತಾರೆ ಭವ್ಯ ನರಸಿಂಹಮೂರ್ತಿ ಮಾತನಾಡಿ, ದೇಶದ ದೀರ್ಘಾವಧಿ ಪ್ರಧಾನಮಂತ್ರಿಯಾಗಿ ಪುರುಷರಷ್ಟೇ ಮಹಿಳೆಯರು ಸಮಾನರೆಂದು ಸಾರಿದ ಇಂದಿರಾಗಾಂಧಿ, ಮಹಿಳೆಯರ ಆತ್ಮಸ್ಥೈರ್ಯ ಹೆಚ್ಚಿಸಿದ್ದಾರೆ. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಸ್ವಾವಲಂಬಿಗಳಾಗಿ ಬದುಕು ನಡೆಸಬೇಕಾದರೆ ಸಮಾನ ಅವಕಾಶಗಳು ದೊರೆಯಬೇಕು. ಸರ್ಕಾರಗಳು ಕೂಡ ಶೇ.50ರಷ್ಟು ಮೀಸಲಾತಿ ಕಲ್ಪಿಸಿಕೊಡುವ ಚಿಂತನೆಯಲ್ಲಿದ್ದು, ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮಹಿಳೆಯರು ಸ್ಪರ್ಧಿಸಬೇಕು ಎಂದು ತಿಳಿಸಿದರು.

ಇದೇ ವೇಳೆ 16 ಬ್ಲಾಕ್‌ನ ಮಹಿಳಾ ವಿಭಾಗದ ಅಧ್ಯಕ್ಷರು, ಜಿಲ್ಲಾ ಮಹಿಳಾ ಸಹಕಾರ ವಿಭಾಗದ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದರು. ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕೆಪಿಸಿಸಿ ಸಹಕಾರ ವಿಭಾಗದ ರಾಜ್ಯ ಅಧ್ಯಕ್ಷ ಧನರಾಜ್ ತಾಳಂಪಳ್ಳಿ, ಜಿಲ್ಲಾಧ್ಯಕ್ಷ ಎನ್.ಸಿದ್ದಯ್ಯ, ಮಹಿಳಾ ವಿಭಾಗದ ಅಧ್ಯಕ್ಷರಾದ ತಾರಾಕುಮಾರ್‌ಗೌಡ, ಕಾರ್ಯಾಧ್ಯಕ್ಷ ಸಂತೋಷ್‌ಕುಮಾರ್ ಗೌಡ, ಡಿಸಿಸಿ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಶಿವಪ್ರಸಾದ್ ಮತ್ತಿತರರಿದ್ದರು.

ಒಳಮೀಸಲಾತಿ ವಿಚಾರ: ಎಡಗೈ–ಬಲಗೈ ನಡುವೆ ಸಂಘರ್ಷಕ್ಕೆ ಕೋಮುವಾದಿ ಶಕ್ತಿಗಳ ಸಂಚು ಆರೋಪ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಭುಗತಗಳ್ಳಿ ಕೆ.ಮಣಿಯಯ್ಯ ಮಾತನಾಡಿದರು.

ಮೈಸೂರು,ಮಾ.2(ಎಂಟಿವೈ)– ಒಳ ಮೀಸಲಾತಿ ವಿಚಾರದಲ್ಲಿ ಕೋಮುವಾದಿ ಶಕ್ತಿಗಳು ರಾಜಕೀಯ ಲಾಭ ಮಾಡಿಕೊಳ್ಳುವ ಸಂಚಿನೊಂದಿಗೆ ಎಡಗೈ–ಬಲಗೈ ಸಮುದಾಯದ ನಡುವೆ ಸಂಘರ್ಷ ಸೃಷ್ಟಿಸಿ ಒಡೆದು ಆಳುವ ನೀತಿ ಅನುಸರಿಸುತ್ತಿವೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಭುಗತಗಳ್ಳಿ ಕೆ.ಮಣಿಯಯ್ಯ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವಿಚಾರವನ್ನು ಮುಂದಿಟ್ಟುಕೊಂಡು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಎಡಗೈ ಹಾಗೂ ಬಲಗೈ ಸಮುದಾಯದ ನಡುವೆ ಸಂಘರ್ಷ ಏರ್ಪಡುವಂತೆ ಮಾಡುತ್ತಿವೆ. ಎಡ ಮತ್ತು ಬಲಗೈ ಇವರಡರಲ್ಲೂ ಯಾವುದೇ ಕೈಗೆ ಹಾನಿಯಾದರೂ ದೇಹ ಅಂಗವೈಕಲ್ಯತೆ ಅನುಭವಿಸುತ್ತದೆ. ಇದನ್ನು ಎರಡೂ ಸಮುದಾಯದ ಮುಖಂಡರು ಹಾಗೂ ಯುವ ಜನತೆ ಅರಿತುಕೊಳ್ಳಬೇಕು. ಈಗಾಗಲೇ ಕೋಮುವಾದಿಗಳು ಎರಡೂ ಪಂಗಡಗಳ ನಡುವೆ ಸಾಕಷ್ಟು ದ್ವೇಷ ಕಾರುವ ಮನೋಭಾವವನ್ನು ಹುಟ್ಟು ಹಾಕಿದ್ದಾರೆ. ಇನ್ನು ಮುಂದುವರೆಸಿಕೊಂಡು ಹೋದರೆ ದೊಡ್ಡ ಮಟ್ಟದ ಹಾನಿಯಾಗುತ್ತದೆ ಎಂದು ಕಿಡಿಕಾರಿದರು.

ಒಳಮೀಸಲಾತಿ ವಿಚಾರದಲ್ಲಿ ಮಾಜಿ ಸಚಿವ ಎನ್.ಮಹೇಶ್ ಹಾಗೂ ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಬೇಕಂತಲೇ ಗೊಂದಲ ಸೃಷ್ಟಿಸುತ್ತಿದ್ದಾರೆ. ಕೋಮುವಾದಿ ಸಿದ್ಧಾಂತಕ್ಕೆ ಈ ಇಬ್ಬರೂ ಒಳಗಾಗಿ ಡಾ.ಅಂಬೇಡ್ಕರ್ ಅವರ ತತ್ವ ಸಿದ್ಧಾಂತವನ್ನು ಗಾಳಿಗೆ ತೂರುತ್ತಾ ಸಮುದಾಯದಲ್ಲಿ ಒಡಕು ಸೃಷ್ಟಿಸುತ್ತಿದ್ದಾರೆ. ದಲಿತ ಚಳುವಳಿಯಲ್ಲಿದ್ದ ಎನ್.ಮಹೇಶ್ ಅವರು ತಮ್ಮ ಸ್ವಾರ್ಥಕ್ಕಾಗಿ ಸಾವಿರಾರು ವಿದ್ಯಾರ್ಥಿಗಳ ಜೀವನವನ್ನು ಬಲಿ ಕೊಟ್ಟು, ಈಗ ಕೋಮುವಾದಿ ಪಕ್ಷಕ್ಕೆ ಸೇರಿದ್ದಾರೆ. ಛಲವಾದಿ ನಾರಾಯಣಸ್ವಾಮಿ ಈ ಹಿಂದೆ ಎಲ್ಲಿದ್ದರು ಎಂದು ಅತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಕಿಡಿಕಾರಿದರು.

ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಮಂತ್ರಿ ಡಾ.ಹೆಚ್.ಸಿ.ಮಹದೇವಪ್ಪ ಒಳಮೀಸಲಾತಿಯಲ್ಲಿನ ಗೊಂದಲವನ್ನು ಬಗೆಹರಿಸಿ, ಶೋಷಿತ ಸಮುದಾಯಗಳಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ಒಳ ಮೀಸಲಾತಿ ವಿವಾದ ಹೈಕೋರ್ಟ್‌ನಲ್ಲಿದೆ. ರಾಜ್ಯ ಸರ್ಕಾರ 56 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಹಳೇ ಮೀಸಲಾತಿ ಅನುಸರಿಸಲು ತೀರ್ಮಾನಿಸಿರುವುದನ್ನು ಸ್ವಾಗತಿಸುತ್ತೇವೆ. ರಾಜ್ಯಾದ್ಯಂತ ಒಳ ಮೀಸಲಾತಿ ವಿಚಾರದಲ್ಲಿ ಪರ–ವಿರೋಧ ವ್ಯಕ್ತವಾಗುತ್ತಿದೆ. ಅಲ್ಲದೆ, ರೋಸ್ಟರ್ ಬಿಂದು ಜಾರಿಯಾದರೆ ಬಲಗೈ ಸಮುದಾಯಕ್ಕೆ ಅನ್ಯಾಯ ಆಗಲಿದೆ ಎಂಬ ಕೂಗು ಕೇಳಿಬಂದಿದೆ. ಹೀಗಾಗಿ ಸರ್ಕಾರ ನೇಮಕಾತಿ ವೇಳೆ ಹಳೇ ಮೀಸಲಾತಿ ಪದ್ಧತಿ ಜಾರಿಗೆ ನಿರ್ಧರಿಸಿರುವುದು ಸ್ವಾಗತಾರ್ಹ. ಆದರೆ ಹೈಕೋರ್ಟ್ ತೀರ್ಪು ಬಂದ ನಂತರ ಸರ್ಕಾರ 101 ಜಾತಿಗಳಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳಾದ ಆಲಗೂಡು ಶಿವಣ್ಣ, ಈಶ್ವರ್ ಬೊಮ್ಮನಹಳ್ಳಿ, ಬೊಕ್ಕಳ್ಳಿ ಲಿಂಗಯ್ಯ, ವಿ.ಎಸ್.ಮೋಹನ್‌ಕುಮಾರ್, ಎಸ್.ಬಿ. ಸಣ್ಣಸ್ವಾಮಿ, ಶಾಂತಕುಮಾರ್ ಚೌಹಳ್ಳಿ, ಕಿರಣ್‌ಕುಮಾರ್, ರಾಜಶೇಖರ್, ಕಾಂತರಾಜ್ ಸಿ.ಭುಗತಗಳ್ಳಿ ಇದ್ದರು.

ಮಹರ್ಷಿ ವಾಲ್ಮೀಕಿ ಯೋಗರತ್ನ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ

ಮೈಸೂರು: ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಮೊದಲ ಬಾರಿಗೆ 2026ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಯೋಗರತ್ನ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ ಆಯೋಜಿಸಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳ ಯೋಗಾಸನ ಪಟುಗಳಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆ ಒದಗಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಮೇ ತಿಂಗಳ ಮೊದಲ ವಾರದಲ್ಲಿ ಮೈಸೂರಿನಲ್ಲಿ ನಡೆಸಲಾಗುತ್ತದೆ. ರಾಜ್ಯದ ವಿವಿಧ ಭಾಗಗಳಿಂದ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಪೂರ್ವ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ.

ವಿವಿಧ ವಯೋಮಾನದ ಹಾಗೂ ವಿಶೇಷ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿದ್ದು, ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.8197959495 ಹಾಗೂ 9448980010 ಸಂಪರ್ಕಿಸಬಹುದು.

ದೇಶ – ವಿದೇಶ

ಸಾಲ ಮಾಡಿಯಾದ್ರೂ ಜೀವನಾಂಶ ಕೊಡುವಂತೆ ಕೋರ್ಟ್ ಕಟು ನುಡಿ



ನವದೆಹಲಿ: ಕೌಟುಂಬಿಕ ಕಲಹ ಹಾಗೂ ವಿಚ್ಛೇದನ ಪ್ರಕರಣಗಳಲ್ಲಿ ಪತ್ನಿಗೆ ಜೀವನಾಂಶ ನೀಡುವ ವಿಚಾರಕ್ಕೆ ಸುಪ್ರೀಂಕೋರ್ಟ್ ಅತ್ಯಂತ ಮಹತ್ವದ ನಿಲುವೊಂದನ್ನು ವ್ಯಕ್ತಪಡಿಸಿದೆ.

ನನ್ನ ಆದಾಯ ತೀರಾ ಕಡಿಮೆ ಇರುವುದರಿಂದ ಪತ್ನಿಗೆ ತಿಂಗಳಿಗೆ 12 ಸಾವಿರ ರೂ. ಜೀವನಾಂಶ ನೀಡಲು ಸಾಧ್ಯವಿಲ್ಲ ಎಂದು ವಾದಿಸಿದ ಪತಿಗೆ ಕೋರ್ಟ್ ತರಾಟೆಗೆ ತೆಗೆದುಕೊಂಡು, ಹಣವಿಲ್ಲದಿದ್ದರೆ ಸಾಲ ಮಾಡಿಯಾದರೂ ಪತ್ನಿಗೆ ಜೀವನಾಂಶ ಕೊಡುವುದು ನಿನ್ನ ಜವಾಬ್ದಾರಿ. ಆಗದಿದ್ದರೆ ನಿಮ್ಮ ಪತ್ನಿಯನ್ನು ನಿಮ್ಮೊಂದಿಗೇ ಇರಿಸಿಕೊಳ್ಳಿ ಎಂದು ಕಟುವಾಗಿ ನುಡಿದಿದೆ. ನಾನು ದಿನಕ್ಕೆ ಕೇವಲ 325 ರೂ. ಮಾತ್ರ ಸಂಪಾದಿಸುವುದರಿಂದ ನಾನು ಪತ್ನಿಗೆ ತಿಂಗಳಿಗೆ 12 ಸಾವಿರ ರೂ. ಹೇಗೆ ತಾನೇ ನೀಡಲು ಸಾಧ್ಯ ಎಂದು ತನ್ನ ಅಸಹಾಯಕತೆ ತೋಡಿಕೊಂಡಿದ್ದಾರೆ. ಆದರೆ ಪತಿಯ ಈ ವಾದವನ್ನು ಕೇಳಿ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ದ್ವಿಸದಸ್ಯ ಪೀಠವು, ನಿನ್ನ ಹೇಳಿಕೆಯನ್ನು ನಂಬಲು ಸಾಧ್ಯವೇ ಇಲ್ಲ. ಕನಿಷ್ಠ ದಿನಗೂಲಿಗಿಂತ ಕಡಿಮೆ ವೇತನ ನೀಡುವ ಕಂಪನಿ ಯಾವುದೆಂದು ನಾವು ನೋಡಬೇಕು. ಪತ್ನಿ ನಿರ್ವಹಣೆಗೆ ಹಣ ಹೊಂದಿಸುವುದು ನಿನ್ನ ಕರ್ತವ್ಯ ಎಂದು ಖಡಕ್ ಆಗಿ ತಿಳಿಸಿದ್ದಾರೆ.

ಪಾಕಿಸ್ತಾನದ ಮೇಲೆ ಆಫ್ಘಾನಿಸ್ತಾನ ವಾಯುದಾಳಿ



ಕಾಬೂಲ್: ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ಕ್ಷಿಪಣಿ ಕಾಳಗದ ನಡುವೆ ಆಫ್ಘಾನಿಸ್ತಾನವು ಪಾಕಿಸ್ತಾನದ ಮೇಲೆ ವಾಯುದಾಳಿ ನಡೆಸಿದೆ. ಹೆಚ್ಚಿದ ಗಡಿಯಾಚೆಗಿನ ಉದ್ವಿಗ್ನತೆ ನಡುವೆ ರಾವಲ್ಪಿಂಡಿಯ ನೂರ್ ಖಾನ್ ವಾಯುನೆಲೆ ಸೇರಿದಂತೆ ಪಾಕಿಸ್ತಾನದ ಪ್ರಮುಖ ಮಿಲಿಟರಿ ನೆಲೆಗಳ ಮೇಲೆ ವಾಯುದಾಳಿ ನಡೆಸಲಾಗಿದೆ ಎಂದು ಅಫ್ಘಾನಿಸ್ತಾನದ ಇಸ್ಲಾಮಿಕ್ ಎಮಿರೇಟ್‌ನ ರಾಷ್ಟ್ರೀಯ ರಕ್ಷಣಾ ಸಚಿವಾಲಯ ಹೇಳಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಆಫ್ಘಾನಿಸ್ತಾನ ಸಚಿವಾಲಯ, ನಮ್ಮ ವಾಯುಪಡೆಯು ಪ್ರಮುಖ ಪಾಕಿಸ್ತಾನಿ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿಕೊಂಡು ಪರಿಣಾಮಕಾರಿ ವೈಮಾನಿಕ ದಾಳಿ ನಡೆಸಿದೆ. ಈ ವೈಮಾನಿಕ ದಾಳಿಯಲ್ಲಿ ರಾವಲ್ಪಿಂಡಿಯ ನೂರ್ ಖಾನ್ ವಾಯುನೆಲೆ, ಬಲೂಚಿಸ್ತಾನದ ಕ್ವೆಟ್ಟಾದಲ್ಲಿನ 12ನೇ ಬ್ರಿಗೇಡ್ ಬೇಸ್ ಮತ್ತು ಖೈಬರ್ ಪಖ್ತುನ್‌ಖ್ವಾದಲ್ಲಿನ ಮೊಹಮಂಡ್ ಏಜೆನ್ಸಿಯ ಖೋಯ್ಬ್ಲಿ ಕ್ಯಾಂಪ್ ಮತ್ತಿತರ ಮಿಲಿಟರಿ ಕಟ್ಟಡಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಮಾಹಿತಿ ನೀಡಿದೆ. ಅಫ್ಘಾನಿಸ್ತಾನದ ಪ್ರದೇಶದ ಮೇಲೆ ಪಾಕಿಸ್ತಾನವು ನಡೆಸಿದ ವಾಯುದಾಳಿಗಳಿಗೆ ಪ್ರತಿಕ್ರಿಯೆಯಾಗಿ ಈ ಬೆಳವಣಿಗೆಯಾಗಿದೆ.

ಕೇರಳಂ ಆಯ್ತು, ಈಗ ತೆಲುಗು ನಾಡು ಘೋಷಣೆಗೆ ಆಗ್ರಹ



ಅಮರಾವತಿ: ಕೇರಳ ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಾಯಿಸಲು ಒಪ್ಪಿಗೆ ನೀಡಿದಂತೆ ಆಂಧ್ರಪ್ರದೇಶವನ್ನು 'ತೆಲುಗು ನಾಡು' ಎಂದು ಮರುನಾಮಕರಣ ಮಾಡಬೇಕು ಎಂದು ತೆಲುಗು ವಿದ್ವಾಂಸ ಗರಿಕಪಾಟಿ ನರಸಿಂಹರಾವ್ ಒತ್ತಾಯಿಸಿದ್ದಾರೆ.

ವಿಶ್ವ ತೆಲುಗು ಸಮ್ಮೇಳನದಲ್ಲಿ ಅವರು, 'ತಮಿಳು ನಾಡು, ಕೇರಳಂ ಮುಂತಾದ ಹೆಸರುಗಳಲ್ಲಿ ಗುರುತು ಮತ್ತು ಸಾಂಸ್ಕೃತಿಕ ಹೆಮ್ಮೆ ಪ್ರತಿಫಲಿಸುತ್ತದೆ. ಹಾಗಾಗಿ ಆಂಧ್ರಪ್ರದೇಶವನ್ನು 'ತೆಲುಗು ನಾಡು' ಎಂದು ಮರುನಾಮಕರಣ ಮಾಡಬೇಕು. ಈ ಮೂಲಕ ತೆಲುಗು ಭಾಷೆಯ ಶ್ರೀಮಂತ ಪರಂಪರೆಯನ್ನು ಎತ್ತಿ ಹಿಡಿಯಬೇಕು ಎಂದು ಆಗ್ರಹಿಸಿದ್ದಾರೆ. ಆಂಧ್ರಪ್ರದೇಶ ಎಂಬುದು ತೆಲುಗು ಹೆಸರಲ್ಲ. ಇದು ಹಿಂದಿ ಬೆಂಬಲಿತ ಮಧ್ಯಪ್ರದೇಶ ಮತ್ತು ಅರುಣಾಚಲ ಪ್ರದೇಶದಂತಹ ಉತ್ತರ ಭಾರತದ ರಾಜ್ಯಗಳಿಗೆ ಹೋಲುವಂತಿದೆ. ನಮ್ಮ ರಾಜ್ಯ ಮತ್ತಷ್ಟು ಸಾಂಸ್ಕೃತಿಕ ಮಹತ್ವ ಹೊಂದಬೇಕಾದರೆ ತಮಿಳುನಾಡಿನಂತೆಯೇ 'ತೆಲುಗು ನಾಡು' ಎಂದು ಮರುನಾಮಕರಣ ಮಾಡುವುದು ಅತ್ಯಗತ್ಯ. ತಮಿಳುನಾಡು ಮತ್ತು ಕೇರಳದ ಜನರಷ್ಟು ನಮ್ಮ ರಾಜ್ಯದ ಜನ, ಭಾಷೆ ಬಗ್ಗೆ ಪ್ರೀತಿ ಹೊಂದಿಲ್ಲ. ಭಾಷೆಯ ವಿಷಯವಾಗಿ ಜನರ ಮನಃಸ್ಥಿತಿ ಬದಲಾಗಬೇಕು ಎಂದು ಮನವಿ ಮಾಡಿದ್ದಾರೆ.

ಚೀನಾ ವಾಯು ರಕ್ಷಣಾ ವ್ಯವಸ್ಥೆಯ ವೈಫಲ್ಯ ಮತ್ತೆ ಅನಾವರಣ



ಟೆಹರಾನ್: ಇಸ್ರೇಲ್–ಇರಾನ್ ಸಂಘರ್ಷದ ನಡುವೆ ಚೀನಾದ ವಾಯು ರಕ್ಷಣಾ ವ್ಯವಸ್ಥೆಯ ದೌರ್ಬಲ್ಯ ಮತ್ತೆ ಮುನ್ನೆಲೆಗೆ ಬಂದಿದೆ. ದೇಶದ ವಾಯು ರಕ್ಷಣಾ ವ್ಯವಸ್ಥೆಗೆ ಇರಾನ್ ಖರೀದಿಸಿದ್ದ ಚೀನಾದ ಕ್ಷಿಪಣಿ, ಡ್ರೋನ್ ನಿಗ್ರಹ ಎಚ್‌ಕ್ಯೂ–9ಬಿ ವಾಯು ರಕ್ಷಣಾ ವ್ಯವಸ್ಥೆಯ ದೌರ್ಬಲ್ಯ ಮತ್ತೊಮ್ಮೆ ಜಗಜ್ಜಾಹೀರಾಗಿದೆ. 200ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡ ಇಸ್ರೇಲ್–ಅಮೆರಿಕ ದಾಳಿಯಿಂದ ಇರಾನ್ ರಕ್ಷಿಸುವಲ್ಲಿ ವಿಫಲವಾಗಿರುವ ಚೀನಾ ರಕ್ಷಣಾ ಉಪಕರಣಗಳ ಬಗ್ಗೆ ಸಂಶಯ ಹುಟ್ಟು ಹಾಕಿದೆ.

ಭಾರತದ 'ಆಪರೇಷನ್ ಸಿಂದೂರ' ಕಾರ್ಯಾಚರಣೆ ವೇಳೆ ಪಾಕಿಸ್ತಾನ ಅಳವಡಿಸಿಕೊಂಡಿದ್ದ ಇದೇ ಎಚ್‌ಕ್ಯೂ–9ಬಿ ವಾಯು ರಕ್ಷಣಾ ವ್ಯವಸ್ಥೆ ಸಂಪೂರ್ಣ ಛಿದ್ರವಾಗಿತ್ತು. ಪರಮಾಣು ಕಾರ್ಯಕ್ರಮ ಮುಂದುವರಿಸಿದರೆ ಸೇನಾ ಕಾರ್ಯಾಚರಣೆ ನಡೆಸುವುದಾಗಿ ಅಮೆರಿಕ ಬೆದರಿಕೆ ಬಳಿಕ ಚೀನಾದ ಎಚ್‌ಕ್ಯೂ– 9ಬಿ ವಾಯು ರಕ್ಷಣಾ ವ್ಯವಸ್ಥೆಯನ್ನು ಇತ್ತೀಚೆಗೆ ಇರಾನ್ ಖರೀದಿಸಿತ್ತು. ಇದೀಗ ಮತ್ತೆ ಚೀನಾದ ರಕ್ಷಣಾ ವ್ಯವಸ್ಥೆಯ ನಿಜ ಬಂಡವಾಳ ಬಯಲಾಗಿದೆ.

ಮುಖ್ಯ ಪೈಲಟ್ ಸೀಟ್‌ನಲ್ಲಿ ವಿಎಸ್‌ಆರ್ ವೆಂಚರ್ಸ್ ಮಾಲೀಕ ಗಾಢ ನಿದ್ರೆ!



ಪುಣೆ: ವಿಎಸ್‌ಆರ್ ವೆಂಚರ್ಸ್ ಮಾಲೀಕ ರೋಹಿತ್ ಸಿಂಗ್, ವಿಮಾನವೊಂದರ ಹಾರಾಟದ ವೇಳೆ ಮುಖ್ಯ ಪೈಲಟ್ ಸೀಟಿನಲ್ಲಿ ಮಲಗಿರುವ ವೀಡಿಯೊವನ್ನು ಮಹಾರಾಷ್ಟ್ರದ ದಿವಂಗತ ಉಪಮುಖ್ಯಮಂತ್ರಿ ಅಜಿತ್ ಪವಾರ್ ಪುತ್ರ ಜಯ್‌ಪವಾರ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು, ಕೂಡಲೇ ಅವರನ್ನು ಬಂಧಿಸುವಂತೆ ಒತ್ತಾಯಿಸಿದ್ದಾರೆ. ನಾವು ನಮ್ಮ ತಂದೆಯನ್ನು ವಿಮಾನ ಅಪಘಾತದಲ್ಲಿ ಕಳೆದುಕೊಂಡಿದ್ದೇವೆ. ಈ ನೋವು ನಮ್ಮೊಂದಿಗೆ ಶಾಶ್ವತವಾಗಿ ಇರುತ್ತದೆ. ಈ ವೀಡಿಯೊದಲ್ಲಿ ವಿಎಸ್‌ಆರ್ ಮಾಲೀಕ ರೋಹಿತ್ ಸಿಂಗ್ ವಿಮಾನ ಹಾರಾಟದ ವೇಳೆ ಮುಖ್ಯ ಪೈಲಟ್ ಸೀಟಿನಲ್ಲಿ ಮಲಗಿರುವುದು ಕಂಡುಬಂದಿದೆ. ವಿಮಾನ ಹಾರಾಟದ ವೇಳೆ ಇಂತಹ ನಿರ್ಲಕ್ಷ್ಯ ಸರಿಯಲ್ಲ. ಇದು ಗಂಭೀರ ಮತ್ತು ಆಘಾತಕಾರಿ. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ ಕೂಡಲೇ ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು. ತನ್ನ ತಂದೆಯ ವಿಮಾನ ಅಪಘಾತದ ವಿಚಾರಣೆ ಪೂರ್ಣಗೊಳ್ಳುವವರೆಗೆ ವಿಎಸ್‌ಆರ್ ವೆಂಚರ್ಸ್‌ನ ಎಲ್ಲಾ ವಿಮಾನಗಳ ಹಾರಾಟವನ್ನು ಸ್ಥಗಿತ ಗೊಳಿಸಬೇಕು. ಇದು ನನ್ನ ತಂದೆ ಮತ್ತು ಪ್ರತಿಯೊಬ್ಬ ಪ್ರಯಾಣಿಕರ ಸುರಕ್ಷತೆಗಾಗಿ ನೋವಿನ ಮನವಿಯಾಗಿದೆ ಎಂದು ಆಗ್ರಹಿಸಿದ್ದಾರೆ.

ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ



ನಾಪೋಕ್ಲು, ಮಾ.2(ದುಗ್ಗಳ)– ಹಿಂದೂ ಸಂಗಮ ಕಾರ್ಯಕ್ರಮದ ಸಂದರ್ಭದಲ್ಲಿ ಅಹಿತ ಕರ ಘಟನೆ ನಡೆ ದಿದ್ದು ಕಿಡಿಗೇಡಿಗಳಿಗೆ ತಕ್ಷಣ ಶಿಕ್ಷೆ ಆಗುವಂತೆ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಸದ ಯದುವೀರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಭಾನುವಾರ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಈ ಭಾಗದಲ್ಲಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರಿಗೆ ಬದುಕಲು ಕಷ್ಟ ಆಗುತ್ತಿದೆ ಎಂಬುದು ಗಂಭೀರವಾದ ವಿಚಾರ. ಸರ್ಕಾರ ಸೂಕ್ತ ಕ್ರಮ ಕೈಗೊಂಡು ಕಾನೂನು ವ್ಯವಸ್ಥೆ ಕಾಪಾಡಬೇಕು ಎಂದರು. ಎಲ್ಲರಿಗೂ ಒಂದೇ ಕಾನೂನು ಪಾಲನೆ ಮಾಡುವಂತಾಗಬೇಕು. ತಕ್ಷಣ ಕೋಮುವಾದಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಇದು ಗಂಭೀರವಾದ ವಿಚಾರ ಎಲ್ಲರನ್ನೂ ಸಮಾನವಾಗಿ ಪರಿಗಣಿಸಿ ಎಂದು ಸೂಚಿಸಿದರು.

ತವರಲ್ಲೇ ಕಾವೇರಿ ಕಲುಷಿತ

ಮೌನ ತಾಳಿರುವ ಜಿಲ್ಲಾಡಳಿತ



ಕಲುಷಿತ ನೀರು ಕಾವೇರಿ ನದಿ ಸೇರುತ್ತಿರುವುದು.



ನೆಲ್ಯಹುದಿಕೇರಿ ಕಾವೇರಿ ನದಿ ಹಳೆ ಸೇತುವೆ ದಡದ ಪಕ್ಕದಲ್ಲೇ ತ್ಯಾಜ್ಯಗಳ ರಾಶಿ.

ಸಿದ್ದಾಪುರ, ಮಾ.2–ಕೋಟ್ಯಾಂತರ ಜನರ ಜೀವನಾಡಿಯಾಗಿರುವ ಕಾವೇರಿ ನದಿ ನೀರು ತವರಿನಲ್ಲೇ ಕಲುಷಿತಗೊಳ್ಳುತ್ತಿದ್ದರೂ ಜಿಲ್ಲಾಡಳಿತದ ಯಾವುದೇ ಕ್ರಮಕ್ಕೆ ಮುಂದಾಗದೆ ಮೌನ ವಹಿಸಿದೆ ಎಂದು ಕಾರ್ಮಿಕ ಮುಖಂಡ ಪಿ.ಆರ್. ಭರತ್ ಆರೋಪಿಸಿದ್ದಾರೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನದಿ ನೀರನ್ನು ಪರಿಶೀಲಿಸಿದಾಗ ಈ ನೀರು ಜಾನುವಾರುಗಳು ಕುಡಿಯಲು ಸಹ ಯೋಗ್ಯವಾಗಿಲ್ಲ ಎಂದು ಘೋಷಣೆ ಮಾಡಿದ್ದರೂ ಮುಂಜಾಗ್ರತ ಕ್ರಮಕೈಗೊಳ್ಳದ ಪಂಚಾಯಿತಿ ಹಾಗೂ ಜಿಲ್ಲಾಡಳಿತ ನಿರ್ಲಕ್ಷ್ಯದಿಂದಲೇ ನದಿ ಕಲುಷಿತಗೊಳ್ಳುತ್ತಿದೆ. ಸಿದ್ದಾಪುರ–ನೆಲ್ಯಹುದಿಕೇರಿ ಗ್ರಾ. ಪಂ. ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದಲೂ ತ್ಯಾಜ್ಯ ಸುರಿಯಲು ಸೂಕ್ತ ಜಾಗದ ವ್ಯವಸ್ಥೆ ಇಲ್ಲದೇ ಕಾವೇರಿ ನದಿ ದಡ ಸೇರಿದಂತೆ ಗ್ರಾಮ ವ್ಯಾಪ್ತಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಸ್ವಚ್ಛತೆ, ಪರಿಸರ ಜಾಗೃತಿ ಮೂಡಿಸಬೇಕಾದ ಪಂಚಾಯಿತಿ ಎಲ್ಲೆಂದರಲ್ಲಿ ತ್ಯಾಜ್ಯ ವಿಲೇವಾರಿಗೆ ಮುಂದಾಗಿರುವುದರಿಂದ ಎರಡು ಗ್ರಾಮಗಳು ತ್ಯಾಜ್ಯದ ರಾಶಿಯೊಂದಿಗೆ ಸಾರ್ವಜನಿಕರು, ಶಾಲಾ ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ನಡೆದಾಡ ಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕಾವೇರಿ ನದಿ ದಡದಲ್ಲಿ ತ್ಯಾಜ್ಯದ ರಾಶಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿದ್ದು ಗ್ರಾಮದ ಚರಂಡಿಗಳ ಮೂಲಕ ಕಲುಷಿತ ನೀರು ನೇರವಾಗಿ ನದಿ ಸೇರುತ್ತಿದೆ. ಇದರೊಂದಿಗೆ ಕಾಫಿ ಪಲ್ಪಿಂಗ್ ನೀರು ರಾತ್ರಿ ವೇಳೆಯಲ್ಲಿ ಹರಿಯ ಬಿಡಲಾಗುತ್ತಿದೆ. ಇದರಿಂದ ಜಲಚರಗಳು ನಾಶವಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆ ಬೆದರಿಕೆ: ಜಿಲ್ಲೆ ಸೇರಿದಂತೆ ವಿವಿಧ ರಾಜ್ಯಗಳು ಹಾಗೂ ಬೆಂಗಳೂರಿಗೆ ಕಾವೇರಿ ನದಿ ನೀರು ಪೂರೈಕೆ ಆಗುತ್ತಿದ್ದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಸರ್ಕಾರ ನದಿ ಸಂರಕ್ಷಣೆಯೊಂದಿಗೆ ಶುಚಿತ್ವಕ್ಕೆ ಆದ್ಯತೆ ನೀಡುವುದರ ಮೂಲಕ ಪಂಚಾಯಿತಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಡಾಮಿನೋಸ್ ಯುವಕ ಸಂಘದ ಅಧ್ಯಕ್ಷ ಸೌಕತ್ ಮಾತನಾಡಿ, ಹಲವು ವರ್ಷಗಳಿಂದ ಸಂಘದ ಮೂಲಕ ಪರಿಸರ ಶುಚಿತ್ವಕ್ಕೆ ಆದ್ಯತೆ ನೀಡಿ ಸ್ವಚ್ಛಗೊಳಿಸುವ ಕಾರ್ಯ ಕ್ರಮವನ್ನು ಹಮ್ಮಿಕೊಂಡು ಬರಲಾಗುತ್ತಿದೆ. ಈ ಹಿಂದೆ ನದಿ ಪ್ರದೇಶವನ್ನು ತ್ಯಾಜ್ಯ ಮುಕ್ತವನ್ನಾಗಿ ಮಾಡಿ ಹೂವಿನ ಗಿಡಗಳನ್ನು ನೆಡಲಾಗಿತ್ತು. ಆದರೆ ಗ್ರಾಪಂ ನಿರ್ಲಕ್ಷ್ಯದಿಂದ ಎಲ್ಲವೂ ತ್ಯಾಜ್ಯಮಯವಾಗಿದೆ. ತ್ಯಾಜ್ಯ ತುಂಬಿ ತುಳುಕುತ್ತಿದ್ದರು ಶುಚಿತ್ವಕ್ಕೂ ಮುಂದಾಗದೆ ನಿರ್ಲಕ್ಷ ತೋರುತ್ತಿರುವ ಪರಿಣಾಮ ತ್ಯಾಜ್ಯ ನದಿಯೊಂದಿಗೆ ಸೇರಿ ನೀರು ಮಲಿನವಾಗುತ್ತಿದೆ. ಈ ಬಗ್ಗೆ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸಾಮಾಜಿಕ ಕಾರ್ಯಕರ್ತ ಅಜೀಜ್ ಮಾತನಾಡಿ, ನೆಲ್ಯಹುದಿಕೇರಿ ಸಿದ್ದಾಪುರ ಪಂಚಾಯಿತಿ ಆಡಳಿತದ ನಿರ್ಲಕ್ಷ್ಯದಿಂದ ಪವಿತ್ರ ಕಾವೇರಿ ನದಿ ಕಲುಷಿತಗೊಳ್ಳುತ್ತಿದೆ. ತ್ಯಾಜ್ಯ ವಿಲೇವಾರಿಗೆ ಸೂಕ್ತ ಜಾಗ ಕಂಡುಕೊಳ್ಳಲಾಗದ ಗ್ರಾ. ಪಂ. ಆಡಳಿತ ಮಂಡಳಿ ಪರೋಕ್ಷವಾಗಿ ತ್ಯಾಜ್ಯ ವನ್ನು ಎಲ್ಲೆಂದರಲ್ಲಿ ಸುರಿಯಲು ಮುಂದಾಗಿದೆ. ಗ್ರಾಪಂ ಆಡಳಿತದ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ನ್ಯಾಷನಲ್ ರ್‍ಯಾಲಿ ಚಾಂಪಿಯನ್‌ನಲ್ಲಿ ಕೊಡಗಿನ ಯುವಕ ಹ್ಯಾಟ್ರಿಕ್



ಮಡಿಕೇರಿ: ಕೊಡಗು ಮೂಲದ ಯುವ ಮೋಟರ್ ರ್‍ಯಾಲಿಪಟು ಅಭಿನ್ ರೈ ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದು, ಹ್ಯಾಟ್ರಿಕ್ ಚಾಂಪಿಯನ್ ಆದ ಹೆಗ್ಗಳಿಕೆಗೆ ಕಾರಣರಾಗಿದ್ದಾರೆ.

ಮಹಾರಾಷ್ಟ್ರದ ನಾಸಿಕ್‌ನಲ್ಲಿ ಫೆ.27ರಿಂದ ಮಾ.1ರವರೆಗೆ ನಡೆದ ನ್ಯಾಷನಲ್ ಮೋಟರ್ ರ್‍ಯಾಲಿ ಸ್ಪರ್ಧೆ ಯಲ್ಲಿ ಅಭಿನ್ ರೈ 371 ಕಿ.ಮೀ. ಅಂತರದ ರ್‍ಯಾಲಿಯಲ್ಲಿ ಗಣನೀಯ ಸಾಧನೆ ತೋರಿದ್ದಾರೆ.

ದೇಶದ ವಿವಿಧೆಡೆಯಿಂದ 32 ಸ್ಪರ್ಧಿಗಳು ಪಾಲ್ಗೊಂಡಿದ್ದ ಈ ಸ್ಪರ್ಧೆಯ ಸರ್ವ ವಿಭಾಗಗಳಲ್ಲಿ ಅಭಿನ್ 10ನೇ ಸ್ಥಾನ ಗಳಿಸಿದ್ದು, ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್ ವಿಭಾಗದಲ್ಲಿ 2ನೇ ಮತ್ತು ಅನ್ ಡಿಫೈನ್ಡ್ ಜೂನಿಯರ್ ಇಂಡಿಯನ್ ನ್ಯಾಷನಲ್ ರ್‍ಯಾಲಿ ವಿಭಾಗದಲ್ಲಿ ಮೊದಲ ಸ್ಥಾನ ಗಳಿಸಿದ್ದಾರೆ. 3ನೇ ಬಾರಿಗೆ ಅಭಿನ್ ರೈ, ಇಂಡಿಯನ್ ನ್ಯಾಷನಲ್ ರ್‍ಯಾಲಿಯಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ. ಅಭಿನ್ ರೈ ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಮೇಕೇರಿ ಮೂಲದ ರತ್ನಾಕರ್ ರೈ ಮತ್ತು ನಮಿತಾ ರೈ ಪುತ್ರರಾಗಿದ್ದಾರೆ. ಚಿಕ್ಕಮಗಳೂರಿನ ಮಹಮ್ಮದ್ ಜಶೀರ್ ಕೋ ಡ್ರೈವರ್ ಆಗಿ ಕಾರ್ಯನಿರ್ವಹಿಸಿದ್ದರು.

ಚಂದ್ರ ಗ್ರಹಣ: ದೇವರ ದರ್ಶನ, ವಿವಿಧ ಸೇವೆಗಳಲ್ಲಿ ವ್ಯತ್ಯಯ

ಮಡಿಕೇರಿ, ಮಾ.2–ಮಾ.3ರಂದು ಮಂಗಳವಾರ ಖಗ್ರಾಸ ಚಂದ್ರ ಗ್ರಹಣದ ಪ್ರಯುಕ್ತ ಶ್ರೀ ಓಂಕಾರೇಶ್ವರ ದೇವಾಲಯ, ಶ್ರೀ ಆಂಜನೇಯ ದೇವಾಲಯ ಹಾಗೂ ಶ್ರೀ ಕೋಟೆ ಗಣಪತಿ ದೇವಾಲಯದಲ್ಲಿ ದೇವರ ದರ್ಶನ ಹಾಗೂ ವಿವಿಧ ಸೇವೆಗಳಲ್ಲಿ ವ್ಯತ್ಯಯವಾಗಲಿದೆ. ಬೆಳಗ್ಗೆ 7.30 ರಿಂದ ಬೆಳಗ್ಗೆ 9 ಗಂಟೆಯ ವರೆಗೆ ಮಾತ್ರ ದೇವಾಲಯ ಭಕ್ತರ ದರ್ಶನಕ್ಕೆ ತೆರೆದಿರಲಿದೆ. ಬೆಳಗ್ಗೆ 9 ಗಂಟೆಗೆ ಮಹಾ ಪೂಜೆ ನಡೆಯಲಿದ್ದು, ನಂತರ ದೇವಾಲ ಯವನ್ನು ಗ್ರಹಣ ಪ್ರಯುಕ್ತ ತೆರೆದಿರು ವುದಿಲ್ಲ. ಸಂಜೆ 6.48ರ ಗ್ರಹಣ ಮೋಕ್ಷ ಕಳೆದ ನಂತರ ದೇವಾಲಯವನ್ನು ತೆರೆಯಲಾಗುವುದು. ಆದರೆ ಭಕ್ತರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ರಾತ್ರಿ 8 ಗಂಟೆಗೆ ನಡೆಯುವ ಮಹಾ ಪೂಜೆಗೆ ಭಕ್ತಾದಿಗಳಿಗೆ ಅವಕಾಶವಿದೆ.

ಪುತ್ರ ಹಲ್ಲೆ ಮಾಡಿದ್ದಾನೆ ಎಂದು ಪ್ರಮಾಣ ಮಾಡಿದರೆ ನಾನೇ ಶಿಕ್ಷೆ ಕೊಡಿಸುತ್ತೇನೆ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಸ್ಮಾಯಿಲ್ ಸವಾಲು



ಅಧ್ಯಕ್ಷ ಇಸ್ಮಾಯಿಲ್ ಸುದ್ಧಿಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ, ಮಾ.2– ನಾಪೋಕ್ಲುವಿನಲ್ಲಿ ಇತ್ತೀಚೆಗೆ ನಡೆದ ಹಲ್ಲೆ ಪ್ರಕರಣದಲ್ಲಿ ನನ್ನ ಪುತ್ರ ಭಾಗಿಯಾಗಿಲ್ಲ, ಆದರೆ, ನನ್ನ ಪುತ್ರ ಗೌತಮ್‌ಗೆ ಹಲ್ಲೆ ಮಾಡಿದ್ದಾನೆ ಎಂದು ದೇವಸ್ಥಾನದಲ್ಲಿ ಪ್ರಮಾಣ ಮಾಡಿದರೆ ನಾನೇ ಶಿಕ್ಷೆಯನ್ನು ಕೊಡಿಸುತ್ತೇನೆ ಎಂದು ನಾಪೋಕ್ಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎ.ಇಸ್ಮಾಯಿಲ್ ಸವಾಲೆಸೆದಿದ್ದಾರೆ.

ನನ್ನ ಪುತ್ರ ಹಿಂದು ಕಾರ್ಯಕರ್ತನ ಮೇಲೆ ಹಲ್ಲೆ ಮಾಡಿದ್ದಾನೆ ಎಂದು ಕೆಲವು ವ್ಯಕ್ತಿಗಳು ಆರೋಪ ಮಾಡಿರುವುದು ಸತ್ಯಕ್ಕೆ ದೂರವಾಗಿದೆ ಅದನ್ನು ಸಾಬೀತುಪಡಿಸಿದರೆ ಆತನಿಗೆ ನಾನೇ ಮುಂದಾಗಿ ನಿಂತು ಶಿಕ್ಷೆ ಕೊಡಿಸುತ್ತೇನೆ ಎಂದು ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ನಾಪೋಕ್ಲು ಜಮಾಅತ್‌ನ ಅಧ್ಯಕ್ಷ ಅಬ್ದುಲ್ ರೆಹಮಾನ್ ಮಾತನಾಡಿ, ಮಕ್ಕಳ ನಡುವಿನ ಜಗಳವನ್ನು ಧರ್ಮ-ಧರ್ಮಗಳ ನಡುವೆ ತಂದು ಹಾಕಿ ಕೆಲವು ವ್ಯಕ್ತಿಗಳು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ವಾಹನ ನಿಲುಗಡೆ ವಿಚಾರದಲ್ಲಿ ಕಲಹ ಏರ್ಪಟ್ಟು ಬರಿಗೈಯಲ್ಲಿ ಹೊಡೆದಾಡಿಕೊಂಡಿದ್ದಾರೆ. ಆದರೆ, ಉದ್ದೇಶ ಪೂರ್ವಕವಾಗಿ ಹಿಂದೂಗಳ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಕೆಲವು ವ್ಯಕ್ತಿಗಳು ಪ್ರತಿಬಿಂಬಿಸಿ ಪ್ರತಿಭಟನೆ ನಡೆಸಿದ್ದಾರೆ. ನಾಪೋಕ್ಲು ವ್ಯಾಪ್ತಿಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತರೆಲ್ಲರು ಸಾಮರಸ್ಯದಿಂದ ಜೀವನ ಸಾಗಿಸುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಧರ್ಮ-ಧರ್ಮಗಳ ನಡುವೆ ಶಾಂತಿ ಕದಡುವ ಯತ್ನ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ನಾಪೋಕ್ಲು ಜಮಾಅತ್‌ನ ಮಾಜಿ ಅಧ್ಯಕ್ಷ ಅಜೀಜ್, ಉಪಾಧ್ಯಕ್ಷ ಜಿ.ಎಂ.ಬದ್ರುದ್ದೀನ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜನಮನ ರಂಜಿಸಿದ ತಾರೆಯರ ಕಾರ್ಯಕ್ರಮ



ಕುಶಾಲನಗರ, ಮಾ.2–ಇಲ್ಲಿನ ಬೈಚನಹಳ್ಳಿ ಎಸ್‌ಎಲ್‌ಎನ್ ಸಭಾಂಗಣದಲ್ಲಿ ಕುಶಾಲನಗರ ರೋಟರಿ ಸಂಸ್ಥೆಯ ಸುವರ್ಣ ಸಂಭ್ರಮ ಸಮಾರಂಭದಲ್ಲಿ ಆಯೋಜಿಸಿದ್ದ ವೈವಿಧ್ಯಮಯ ವರ್ಣರಂಜಿತ ಕಾರ್ಯಕ್ರಮ ಪ್ರೇಕ್ಷಕರ ಮನ ಸೂರೆಗೊಳಿಸಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಖ್ಯಾತ ಚಿತ್ರನಟ ರಮೇಶ್ ಅರವಿಂದ್, ಹಾಗೂ ಖ್ಯಾತ ನಿರೂಪಕ ನಿರಂಜನ್ ದೇಶಪಾಂಡೆ ನಿರೂಪಿಸಿದ ಸಾಂಸ್ಕೃತಿಕ ಕಾರ್ಯಕ್ರಮ ಕಿಕ್ಕಿರಿದು ಸೇರಿದ್ದ ಜನರನ್ನು ಆಕರ್ಷಿಸಿತ್ತು. ಮಿಮಿಕ್ರಿ ಕಲಾವಿದ ಗೋಪಿಯವರ ಮಿಮಿಕ್ರಿ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಪ್ರವೀಣ್ ಮತ್ತು ದೀಪಿಕಾ ಅವರ ಹಾಸ್ಯ, ವೈವಿಧ್ಯಮಯ ನೃತ್ಯ ಕಾರ್ಯಕ್ರಮಗಳು, ವರ್ಣ ಚೌಹಾನ್ ಮತ್ತು ಖಾಸಿಂ ಅಲಿ ಅವರ ಗಾಯನ ಕಾರ್ಯಕ್ರಮಗಳು ರೋಟರಿ ಸುವರ್ಣ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿದ್ದವು. ಕೊಡವ ನೃತ್ಯಕ್ಕೆ ಚಂದನ್ ಶೆಟ್ಟಿ ಕೂಡ ಹೆಜ್ಜೆ ಹಾಕಿ ಗಮನ ಸೆಳೆದರು.

ಸುವರ್ಣ ಸಂಭ್ರಮ ಸಮಾರಂಭದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಡಾ.ಮಂತರ್ ಗೌಡ, ರಾಜ್ಯದಲ್ಲಿ ಯಾವುದೇ ರಾಜಕೀಯ ವಿದ್ಯಮಾನಗಳು ನಡೆದರೂ ನಾನು ಕ್ಷೇತ್ರದ ಜನರ ಪರವಾಗಿ ಇರುತ್ತೇನೆ. ಜನಸೇವೆಯೆ ಜನಾರ್ಧನ ಸೇವೆ ಎಂಬ ಧ್ಯೇಯದೊಂದಿಗೆ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ಖ್ಯಾತ ಚಿತ್ರನಟ ರಮೇಶ್ ಅರವಿಂದ್ ಮಾತನಾಡಿ, ಪ್ರತಿಯೊಬ್ಬರಲ್ಲಿಯೂ ಇರುವ ಶ್ರೇಷ್ಠವಾದ ವ್ಯಕ್ತಿತ್ವವನ್ನು ಹೊರತರುವ ಮೂಲಕ ಸಮಾಜದಲ್ಲಿ ಉತ್ತಮ ಸೇವಾಕಾರ್ಯಗಳಿಗೆ ಮುಂದಾಗಿ ಎಂದರು.

ರೋಟರಿ ಸುವರ್ಣ ಸಂಭ್ರಮಕ್ಕೆ ರೋಟರಿ ಜಿಲ್ಲೆ 3181ನ ಗವರ್ನರ್ ಪಿ.ಕೆ.ರಾಮಕೃಷ್ಣ, ಚಾಲನೆ ನೀಡಿದರು. ಎಸ್‌ಎಲ್‌ಎನ್ ಸಂಸ್ಥೆಯ ಪ್ರಮುಖ ಸಾತಪ್ಪನ್, ರೋಟರಿ ಸಂಸ್ಥೆಯ ಯುವ ಅಧ್ಯಕ್ಷ ಮಾಳೆಯಂಡ ಮನುಪೆಮ್ಮಯ್ಯ, ಸುವರ್ಣ ಸಂಭ್ರಮ ಆಚರಣಾ ಸಮಿತಿ ಅಧ್ಯಕ್ಷ ಎಸ್.ಕೆ. ಸತೀಶ್ ಮಾತನಾಡಿದರು.

ಎಸ್‌ಎಲ್‌ಎನ್ ಸಂಸ್ಥೆಯ ಪ್ರಮುಖರಾದ ವಿಶ್ವನಾಥನ್, ದಾನಿಗಳಾದ ಸಿ.ಜೆ.ಅನಿಲ್ ಕುಮಾರ್, ಶರಣ್ ಪೂಣಚ್ಚ, ಕುಶಾಲನಗರ ರೋಟರಿ ಕ್ಲಬ್‌ನ ಕಾರ್ಯದರ್ಶಿ ಹೆಚ್.ಪಿ. ಮಂಜುನಾಥ್, ಖಜಾಂಚಿ ಕೆ.ಎಂ. ಜೇಕಬ್, ಸುವರ್ಣ ಸಂಭ್ರಮ ಸಮಿತಿ ಉಪಾಧ್ಯಕ್ಷ ಮಹೇಶ್ ಕುಮಾರ್ ನಲ್ವಾಡೆ, ಡಾ.ಹರಿ ಎ. ಶೆಟ್ಟಿ, ಸಂಚಾಲಕ ಕ್ರಿಜ್ವೆಲ್ ಕೋಟ್ಸ್, ಸಹಾಯಕ ಗವರ್ನರ್ ಉಲ್ಲಾಸ್‌ಕೃಷ್ಣ, ಸಮಿತಿ ಕಾರ್ಯದರ್ಶಿ ಎಂ.ಡಿ. ರಂಗಸ್ವಾಮಿ, ಖಜಾಂಚಿ ಪಿ.ಆರ್.ನವೀನ್, ಸಹ ಕಾರ್ಯದರ್ಶಿ ರಿಚರ್ಡ್ ಡಿಸೋಜ, ಹಣಕಾಸು ಸಮಿತಿ ಅಧ್ಯಕ್ಷ ಸಿ.ಎ. ರುದ್ರೇಶ್ ಪಟೇಲ್, ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಎಸ್. ರಾಜಶೇಖರ್ ಸೇರಿದಂತೆ ರೋಟರಿ ಪ್ರಮುಖರು ಹಾಜರಿದ್ದರು. ಕಾರ್ಯಕ್ರಮದಲ್ಲಿ ಎಸ್‌ಎಲ್‌ಎನ್ ಸಂಸ್ಥೆಯ ಸಾತಪ್ಪನ್ ಮತ್ತು ವಿಶ್ವನಾಥನ್ ಅವರಿಗೆ ರೋಟರಿ ಗೋಲ್ಡನ್ ಪರ್ಸನಾಲಿಟಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸೀಮೆಎಣ್ಣೆ ಸುರಿದು ಪತ್ನಿಗೆ ಬೆಂಕಿ ಹಚ್ಚಿ ಕೊಂದ ಪತಿ

ಮೂಡಲ ಅಗ್ರಹಾರ ಗ್ರಾಮದಲ್ಲಿ ಘಟನೆ, ಪತಿ ಬಂಧನ

ಚಾಮರಾಜನಗರ: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿಯೊಬ್ಬ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ ಪರಿಣಾಮ ತೀವ್ರ ಸುಟ್ಟ ಗಾಯಗಳಾಗಿದ್ದ ಪತ್ನಿ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಗ್ರಹಾರ ಮೂಡಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸುಮತಿ(30) ಮೃತ ಮಹಿಳೆ. ಈಕೆಯ ಪತಿ ಮಹದೇವನನ್ನು ಕುದೇರು ಠಾಣೆಯ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಘಟನೆ ವಿವರ: ಮಹದೇವ ಹಾಗೂ ಸುಮತಿ ಕಳೆದ ಎಂಟು ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಪುತ್ರಿಯರಿದ್ದಾರೆ. ಎರಡು ವರ್ಷ ಗಳಿಂದ ದಂಪತಿ ನಡುವೆ ಆಗಾಗ್ಗೆ ಜಗಳ ನಡೆಯುತ್ತಿತ್ತು ಎನ್ನಲಾಗಿದೆ.

ಫೆ.24ರಂದು ರಾತ್ರಿ ದಂಪತಿಗಳ ನಡುವೆ ಜಗಳ ಶುರುವಾಗಿ ವಿಕೋಪಕ್ಕೆ ತಿರುಗಿದ್ದು, ಈ ವೇಳೆ ಮಹದೇವ ಪತ್ನಿ ಸುಮತಿ ಮೈ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ್ದಾನೆ ಎನ್ನಲಾಗಿದೆ.

ಈ ವೇಳೆ ಅಕ್ಕ ಪಕ್ಕದ ಮನೆಯವರು ತೆರಳಿ ಬೆಂಕಿಯನ್ನು ನಂದಿಸಿ ಸುಮತಿಯನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ 5 ದಿನಗಳಿಂದ ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದ ಸುಮತಿ ಚಿಕಿತ್ಸೆ ಫಲಕಾರಿಯಾಗದೇ ಭಾನುವಾರ ರಾತ್ರಿ ಮೃತಪಟ್ಟಿದ್ದಾಳೆ.

ವಿಷಯ ತಿಳಿದು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಡಿವೈಎಸ್ಪಿ ಸ್ನೇಹಾರಾಜ್ ಸೇರಿದಂತೆ ಕುದೇರು ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ಆರೋಪಿ ಪತಿ ಮಹದೇವನನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಸಿ.ಪುಟ್ಟರಂಗಶೆಟ್ಟಿ ಅವರಿಂದ ಸರ್ಕಾರದ ಅನುದಾನ ದುರ್ಬಳಕೆ

ಚಾಮರಾಜನಗರದ ಅಭಿವೃದ್ಧಿಗೆ ಧ್ರುವನಾರಾಯಣ್, ಎಚ್.ಎಸ್.ಮಹದೇವಪ್ರಸಾದ್ ಕೊಡುಗೆ ಅಪಾರ, ಪುಟ್ಟರಂಗಶೆಟ್ಟಿ ಕೊಡುಗೆ ಶೂನ್ಯ, ವೀರನಪುರದಲ್ಲಿ 5 ಎಕರೆ ಸರ್ಕಾರಿ ಜಮೀನು ಕಬಳಿಸುವ ಹುನ್ನಾರ: ನಿಜಗುಣರಾಜು ಆರೋಪ



ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡ ನಿಜಗುಣರಾಜು ಮಾತನಾಡಿದರು

ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಸರ್ಕಾರದ ಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಬಿಜೆಪಿ ಮುಖಂಡರು, ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸಿ.ಪುಟ್ಟರಂಗಶೆಟ್ಟಿ ಅವರು ಕಳೆದ 20 ವರ್ಷದಿಂದಲೂ ಶಾಸಕರಾಗಿ ಆಯ್ಕೆಯಾಗುತ್ತಾ ಬಂದಿದ್ದಾರೆ. ಕಳೆದ 3 ತಿಂಗಳ ಹಿಂದೆ ಸರ್ಕಾರ ಸುಮಾರು ಶಾಸಕರಿಗೆ ತಲಾ 50 ಕೋಟಿ ರೂ. ಅನುದಾನವನ್ನು ಆಯಾಯ ಕ್ಷೇತ್ರದ ಅಭಿವೃದ್ಧಿಗಾಗಿ ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳುತ್ತಾರೆ ಗುತ್ತಿಗೆಯಲ್ಲಿ ನಾವು ಎಸ್‌ಸಿ, ಎಸ್‌ಟಿ, ಓಬಿಸಿಗಳಿಗೆ ಮೀಸಲಾತಿ ಮಾಡಿದ್ದೇವೆ. ಅವರು ಆರ್ಥಿಕವಾಗಿ ಮೇಲೆ ಬರಬೇಕು ಎಂದು ಹೇಳಿ ದ್ದಾರೆ. ಅದು ಬಹಳ ಸಂತಸ ವಿಚಾರವಾಗಿದೆ. ಆದರೆ 50 ಕೋಟಿಗಳಲ್ಲಿ ಕೇವಲ 3, 4 ಕೋಟಿ ಜಿಪಂಗೆ 5, 6 ಕೋಟಿಯನ್ನು ಪಿಡಬ್ಲೂಡಿ ಇಲಾಖೆಗೆ ನೀಡಿ ಇನ್ನೂ ಉಳಿದ 40 ಕೋಟಿ ಅನುದಾನವನ್ನು ಕೆಬಿಆರ್ ಡಿಎಲ್‌ಗೆ ಕೊಟ್ಟು ಹೊರಗಡೆ ಏಜೆನ್ಸಿಗಳಿಗೆ ಬೆಂಗಳೂರು, ಯಳಂದೂರು, ನರಸೀಪುರದವರೆಗೆ ಕೆಲಸ ಕೊಟ್ಟು ಎಲ್ಲೆಂಲ್ಲಿಂದ ಬಂದವರು ಕೆಲಸ ಮಾಡುತ್ತಿದ್ದಾರೆ. ಶಾಸಕರು ಕಮಿಷನ್‌ಗಾಗಿ ಕಾಮಗಾರಿ ಮಾಡಿಸುತಿದ್ದಾರೆ ಎಂದರು.

ಶಾಸಕ ಪುಟ್ಟರಂಗಶೆಟ್ಟಿ ವಿರುದ್ಧ ಕಾಂಗ್ರೆಸ್ಸಿನಲ್ಲಿ ಅಸಾಮಾಧಾನ: ತಾಲೂಕಿನ ವೀರನಪುರ ಕ್ರಾಸ್ ಸಮೀಪದಲ್ಲಿ 23 ಎಕರೆ ಜಮೀನು ಖರೀದಿ ಮಾಡಿದ್ದಾರೆ. ಅದರೊಳಗೆ 5 ಎಕರೆ ಸರ್ಕಾರಿ ಜಾಗವಿದ್ದು ಅದನ್ನು ಕಬಳಿಸುವ ಹುನ್ನಾರ ಮಾಡಿದ್ದಾರೆ. ಅಲ್ಲಿಗೆ 2 ಕೋಟಿ ರೂ. ರಸ್ತೆಗೆ ಹಾಕಿದ್ದಾರೆ. 2 ಕೋಟಿ ರೂ. ಟೆಂಡರ್ ಆಗಿಲ್ಲ. ಪುಟ್ಟರಂಗಶೆಟ್ಟರು ಬೇನಾಮಿ ಗುತ್ತಿಗೆದಾರರಂತೆ ಕೆಲಸ ಮಾಡುತ್ತಿದ್ದಾರೆ. ಇದನ್ನು ಚಾಮರಾಜನಗರ ಕ್ಷೇತ್ರದ ಜನರು ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹೇಳುತ್ತಿದ್ದಾರೆ ಆದರಿಂದ ನಮಗೂ ತಿಳಿಯಿತು. ಅವರ ವಿರುದ್ಧ ಕಾಂಗ್ರೆಸ್‌ನಲ್ಲಿ ಅಸಮಾಧಾನವಿದೆ ಎಂದರು.

ನಾವು ಸತ್ಯವನ್ನು ಹೇಳಿದರೆ ನಾಳೆ ಒಂದು ಬ್ಯಾಂಡ್ ಸೆಟ್‌ನಂತೆ ಬಂದು ಕೌಂಟರ್ ಕೊಡುತ್ತದೆ. ಇದು ಸಾರ್ವಜನಿಕರ ತೆರಿಗೆ ಹಣವಾಗಿದ್ದು, ನೀವು ಕೂಡ ಇದನ್ನು ಖಂಡಿಸಬೇಕು ಎಂದು ಮನವಿ ಮಾಡಿದರು.

ಚಾಮರಾಜನಗರ ಪಟ್ಟಣ ಪ್ರದೇಶ, ಗ್ರಾಮಾಂತರ ಪ್ರದೇಶದದಲ್ಲಿ ಶುಚಿತ್ವ ಇಲ್ಲದೆ ಕೊಳೆತು ಗಬ್ಬುನಾರುತಿದೆ. ಚಾಮರಾಜನಗರ ಕ್ಷೇತ್ರದ ಜನತೆ ವೋಟ್ ಕೊಟ್ಟು ಗೆಲ್ಲಿಸಿರೋದು ಅಭಿವೃದ್ಧಿ ಮಾಡಲಿ ಅಂಥಾ ಅದನ್ನು ಬಿಟ್ಟು ಆಲೂರು, ಗುಂಬಳ್ಳಿ, ಯರಗಂಬಳ್ಳಿ, ಮೈಸೂರು, ಬೆಂಗಳೂರು ಇತರ ಕಡೆಗಳಲ್ಲಿ ಆಸ್ತಿ ಮಾಡಲಿ ಅಂತಲ್ಲ, ಸರ್ಕಾರ ಇತ್ತೀಚಿಗೆ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ 50 ಕೋಟಿ ರೂ. ಬಗ್ಗೆ ಸರ್ಕಾರ ತನಿಖೆಗೆ ಮಾಡಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಎಸ್ ಸಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವಣ್ಣ, ಮುಖಂಡರಾದ ಎಂ.ಎಸ್. ಚಂದ್ರಶೇಖರ್, ನಟರಾಜು ಇನ್ನಿತರರು ಇದ್ದರು.

ಬೆಂಡರವಾಡಿಯಲ್ಲಿ ಜಾತ್ರಾ ಮಹೋತ್ಸವ



ಚಾಮರಾಜನಗರ: ತಾಲ್ಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಸಂಭ್ರಮಾಚರಣೆಯಿಂದ ಜಾತ್ರಾ ಮಹೋತ್ಸವ ಮತ್ತು ಕೊಂಡೋತ್ಸವವು ಸುತ್ತ ಮುತ್ತಲ ಹತ್ತಾರು ಊರುಗಳ ಸಾವಿರಾರು ಭಕ್ತಾಧಿಗಳ ಪಾಲ್ಗೊಳ್ಳುವಿಕೆಯಲ್ಲಿ ಯಶಸ್ವಿಯಾಗಿ ನಡೆಯಿತು.

ಜಾತ್ರೆಯ ಪ್ರಮುಖ ಘಟ್ಟಗಳಾದ ಕೊಂಡೋತ್ಸವ ಸೋಮವಾರ ನಸುಕಿನ 5 ಗಂಟೆಯಲ್ಲಿ ನಡೆದು ನೂರಾರು ಭಕ್ತಾಧಿಗಳು ದೇವರ ಕೊಂಡ ಹಾಯ್ದು ಪುನೀತರಾದರು. ತದ ನಂತರ ಊರಿನ ರಥಬೀದಿಯಲ್ಲಿ ರಥೋತ್ಸವ ಜರುಗಿತು.

ಬೆಂಡರವಾಡಿ ಮಲ್ಲಯ್ಯನಪುರ ಮೇಗಲಹುಂಡಿ ಈ ಮೂರು ಊರುಗಳ ಜನರು ತಲಾಂತರಗಳಿಂದಲೂ ಒಗ್ಗಟ್ಟಾಗಿ ಆಚರಿಸಿಕೊಂಡು ಬರುತ್ತಿರುವ ಚಾಮರಾಜನಗರ ತಾಲೂಕಿನ ಈ ಪ್ರಮುಖ ಜಾತ್ರೆ ರಥೋತ್ಸವ ಊರಿನ ರಥದ ಬೀದಿಯಲ್ಲಿ ಸಂಚರಿಸಿ ತನ್ನ ಸ್ವಸ್ಥಾನಕ್ಕೆ ಸೇರುತ್ತಿದಂತೆ ಜಾತ್ರೆಗೆ ಈ ವರ್ಷ ತೆರೆ ಬಿದ್ದಿದೆ.

ಕೆ.ಶಿವರಾಂ ಅವರು ಸಮುದಾಯಕ್ಕಾಗಿ ಶ್ರಮಿಸಿದರು

ಕೆ.ಶಿವರಾಂ ಅವರ 2ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ



ನಿವೃತ್ತ ಐಎಎಸ್ ಅಧಿಕಾರಿಯಾದ ಕೆ.ಶಿವರಾಂ ಅವರ 2ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ: ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರು ರಾಜ್ಯದಲ್ಲಿ ಛಲವಾದಿ ಮಹಾಸಭಾ ಕಟ್ಟಿಕೊಂಡು ಸಮುದಾಯದ ಏಳಿಗೆಗಾಗಿ ಶ್ರಮಿಸಿದ್ದಾರೆ ಎಂದು ಛಲವಾದಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಛಲವಾದಿ ಮಹಾಸಭಾದ ಚಾಮರಾಜನಗರ ಜಿಲ್ಲಾ ಸಮಿತಿ ವತಿಯಿಂದ ನಡೆದ ಛಲವಾದಿ ಮಹಾಸಭಾದ ಸಂಸ್ಥಾಪಕರ, ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರ 2ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ನಾನೊಬ್ಬ ಛಲವಾದಿ ಅಧಿಕಾರಿ ಎಂದು ಹೇಳಿಕೊಂಡಂತಹ ಅಧಿಕಾರಿ ಕೆ.ಶಿವರಾಂ ಅವರು ಒಬ್ಬರೆ ಎಂದರೆ ತಪ್ಪಾಗಲಾರದು. ಅವರು ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಐಎಎಸ್ ತೇರ್ಗಡೆ ಹೊಂದಿ ಜಿಲ್ಲಾಧಿಕಾರಿಯಾಗಿ ಅನೇಕ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿದರು. ಸ್ವಯಂ ನಿವೃತ್ತಿ ಹೊಂದಿ ಛಲವಾದಿ ಮಹಾಸಭಾ ಕಟ್ಟಿಕೊಂಡು ಪ್ರತಿಜಿಲ್ಲಾ ಕೇಂದ್ರಗಳಲ್ಲಿ ಛಲವಾದಿ ಭವನಗಳನ್ನು ನಿರ್ಮಾಣ ಮಾಡುವ ಚಿಂತನೆ ಹೊಂದಿದ್ದರು. ಅಂಬೇಡ್ಕರ್ ಅವರ ಮೀಸಲಾತಿ ಪ್ರಕಾರ ಅಧಿಕಾರ ಸೇರಿದಂತೆ ಎಲ್ಲವೂ ಸಿಗಬೇಕು ಎಂದು ಹೇಳಿಕೊಟ್ಟರು ಅದೇ ರೀತಿಯಲ್ಲಿ ಮಾಡಿದ ವರು ನಾವು ಅವರ ಹಾದಿಯಲ್ಲಿ ಸಾಗಿ ಮಹಾಸಭಾವನ್ನು ಸಂಘಟನೆ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಎನ್.ಕುಮಾರ್, ಗೌರವಾಧ್ಯಕ್ಷ ಶಿವನಂಜಯ್ಯ ರಾಮಮುದ್ರ, ಮಾಜಿ ಅಧ್ಯಕ್ಷ ಕೆ.ಆರ್.ನಾರಾಯಣ್, ಮುಖಂಡರಾದ ಎಲ್.ಮಹದೇ ವಯ್ಯ, ಶಿವಪ್ರಸಾದ್, ರಮೇಶ್, ಪರಮೇಶ್, ಸಿದ್ದರಾಜು, ಮಹಣಾಪುರ ನಾಗರಾಜು, ಕಿರಣ್, ಚಿದಾನಂದಮೂರ್ತಿ ಹಾಜರಿದ್ದರು.

ಶ್ರೀ ದೊಡ್ಡಮ್ಮತಾಯಿ, ಚಾಮುಂಡೇಶ್ವರಿ, ಚಿಕ್ಕಮ್ಮತಾಯಿ ವಿಜೃಂಭಣೆಯ ಕೊಂಡೋತ್ಸವ



ವೈ.ಕೆ.ಮೋಳೆ ಉಪ್ಪಾರ ಗ್ರಾಮದಲ್ಲಿ ಕೋಂಡೋತ್ಸವ ವಿಜೃಂಭಣೆಯಿಂದ ಜರುಗಿತು

ಯಳಂದೂರು, ಮಾ.2– ತಾಲೂಕಿನ ವೈ.ಕೆ.ಮೋಳೆ ಉಪ್ಪಾರ ಗ್ರಾಮದಲ್ಲಿ ಶ್ರೀ ದೊಡ್ಡಮ್ಮತಾಯಿ ಮತ್ತು ಶ್ರೀ ಚಿಕ್ಕಮ್ಮತಾಯಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೊಂಡೋತ್ಸವ ವಿಜೃಂಭಣೆಯಿಂದ ಉಪ್ಪಾರ ಬಡಾವಣೆಯಲ್ಲಿ ನಡೆಯಿತು

ಭಾನುವಾರ ಮಧ್ಯರಾತ್ರಿಯಲ್ಲೆ ಕೊಂಡೋತ್ಸವಕ್ಕೆ ವಿವಿಧ ಪೂಜೆ ಹವನ ಹೋಮಗಳನ್ನು ನಡೆಸಿದ ಅರ್ಚಕರು ಮಧ್ಯರಾತ್ರಿ ಹೊತ್ತಿಗೆ ಕೊಂಡೋತ್ಸವಕ್ಕೆ ಅಗ್ನಿ ಸ್ಪರ್ಶ ಮಾಡಿದರು.

ಸೋಮವಾರ ಬೆಳಗ್ಗೆಯಿಂದಲ್ಲೆ ದೇವಾಲಯದಲ್ಲಿರುವ ಚಾಮುಂಡೇಶ್ವರಿ ಮತ್ತು ದೊಡ್ಡಮ್ಮ ತಾಯಿ ಅಮ್ಮನವರಿಗೆ ಪುಷ್ಪಾಲಂಕಾರ ಮಾಡಿದ ಬಳಿಕ ದೇವಾಲಯಕ್ಕೆ ಹಸಿರು ತೋರಣಗಳಿಂದ ಶೃಂಗಾರಿಸಲಾಗಿತ್ತು ನಂತರ ಮಹಾ ಮಂಗಳಾರತಿ ಮಾಡಿದ ಬಳಿಕ ಭಕ್ತರಿಗೆ ದರುಶನಕ್ಕೆ ಅವಕಾಶ ಮಾಡಲಾಯಿತು. ಸಂಜೆ ಹೊತ್ತಿಗೆ ಉತ್ಸವ ಮೂರ್ತಿ ಹೊತ್ತ ಸತ್ತಿಗೆ, ಸೂರಿಪಾನಿ, ಕೊಂಬು ಕಹಳೆ ನಾದಸ್ವರಗಳೊಂದಿಗೆ ಅಂಬಳೆ ಕೆರೆಯಲ್ಲಿ ಪೂಜೆ ಪುರಸ್ಕಾರ ನಡೆಸಿದ ಬಳಿಕ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬಂದ ಬಳಿಕ ಶ್ರೀದೊಡ್ಡಮ್ಮ ತಾಯಿ ದೇವಾಲಯದ ಅವರಣದಲ್ಲಿ ಹಾಕಲಾಗಿದ್ದ ಕೊಂಡೋತ್ಸವನ್ನು ಸೂರ್ಯಾಸ್ತ ಮುಂಚಿತವಾಗಿ ಅರ್ಚಕರು ಕೊಂಡೋತ್ಸವ ಹಾಯುವ ಮೂಲಕ ಹರಕೆ ತೀರಿಸಿದರು.

ಸೋಲಿಗರಿಗೂ ಹಬ್ಬ: ವೈಕೆ.ಮೋಳೆ ಗ್ರಾಮದಲ್ಲಿ ನಡೆಯುವ ಶ್ರೀದೊಡ್ಡಮ್ಮ ತಾಯಿ ಕೊಂಡೋತ್ಸವಕ್ಕೆ ಬಿಳಿಗಿರಿರಂಗನ ಬೆಟ್ಟದ ಗಿರಿಜನರು (ಸೋಲಿಗರು) ಹಬ್ಬದ ಒಂದು ದಿನ ಮುಂಚಿತವಾಗಿ ಊರಿಗೆ ಬಂದು ದೊಡ್ಡಮ್ಮತಾಯಿ ಅಮ್ಮನವರಿಗೆ ಪೂಜೆ ಸಲ್ಲಿಸುವುದು ವಿಶೇಷವಾಗಿದೆ.

ಮೂಡ್ನಾಕೂಡು ಡೇರಿ ಬಿಜೆಪಿ ತೆಕ್ಕೆಗೆ



ಚಾಮರಾಜನಗರ: ತಾಲೂಕಿನ ಮೂಡ್ನಾಕೂಡು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಬಿಜೆಪಿ ಬೆಂಬಲಿತ ನೂತನ ಅಧ್ಯಕ್ಷರಾಗಿ ಎಂ.ಎನ್.ನಟರಾಜು, ಉಪಾಧ್ಯಕ್ಷರಾಗಿ ಸುರೇಶ್ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಹಿಂದಿನ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಉಪಾಧ್ಯಕ್ಷ ಚಿನ್ನಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ –ಉಪಾಧ್ಯಕ್ಷರ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಎಂ.ಎನ್.ನಟರಾಜು ಅಧ್ಯಕ್ಷ ಸ್ಥಾನಕ್ಕೆ, ಸುರೇಶ್ (ಜಗ್ಗು) ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ಈ ಎರಡು ಸ್ಥಾನಗಳಿಗೆ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ನಾಗೇಶ್ ನೂತನ ಅಧ್ಯಕ್ಷ ಉಪಾಧ್ಯಕ್ಷರು ಆಯ್ಕೆಯನ್ನು ಘೋಷಿಸಿದರು.

ಸಭೆಯಲ್ಲಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ,ಎಸ್ ಬಸವಣ್ಣ ಭಾಗವಹಿಸಿದ್ದರು.

ಸನ್ಮಾನ: ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸಂಘದ ನಿರ್ದೇಶಕರು, ಬಿಜೆಪಿ ಮುಖಂಡರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಎಂ.ಬಿ ಶಿವಮಲ್ಲಪ್ಪ, ನಾಗೇಂದ್ರ ಪ್ರಸಾದ್, ಗೌಡಿಕೆ ರೇವಣ್ಣ, ಶಿವನಂಜಪ್ಪ ಸಿದ್ದಪ್ಪ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಎಂ.ಸಿ.ಮಲ್ಲಣ್ಣ, ಪ್ರಕಾಶ್, ಕುಮಾರ್, ನಾಗಭೂಷಣ್, ಬಸವಣ್ಣ ಹಾಜರಿದ್ದರು.

ಮೈಸೂರು ಮಿತ್ರ

ಮೈಸೂರು ವಲಯದಿಂದಲೂ ಏಪ್ರಿಲ್‌ನಿಂದ ಕ್ರಿಕೆಟ್ ಬೇಸಿಗೆ ತರಬೇತಿ ಶಿಬಿರ

● ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಉಪಾಧ್ಯಕ್ಷ ಸುಜಿತ್ ಸೋಮಸುಂದರ್ ಮಾಹಿತಿ ● ಆಯ್ಕೆಯಲ್ಲಿ ಕುಲಗೋತ್ರಗಳಿಲ್ಲ ; ಪ್ರತಿಭೆಯೊಂದೇ ಮಾನದಂಡ



ಮೈಸೂರಿನ ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಉಪಾಧ್ಯಕ್ಷ ಸುಜಿತ್ ಸೋಮಸುಂದರ್ (ಎಡದಿಂದ 2ನೇಯವರು) ಮಾತನಾಡಿದರು. (ಎಡದಿಂದ) ಕೆಎಸ್‌ಸಿಎ ಮೈಸೂರು ವಲಯ ಸಂಚಾಲಕ ಪಿ.ಶ್ರೀನಿವಾಸ ಪ್ರಸಾದ್, ಕೆಎಸ್‌ಸಿಎ ಎಂಸಿ ಸದಸ್ಯೆ ಜಿ.ಎ.ಚಂದ್ರಿಕಾ, ಮೈಸೂರು ವಲಯ ಅಧ್ಯಕ್ಷ ಟಿ.ರವೀಂದ್ರ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.2(ಪಿಎಂ)– ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮೈಸೂರು ವಲಯದ ವತಿಯಿಂದ ಏಪ್ರಿಲ್‌ನಿಂದ ಬೇಸಿಗೆ ತರಬೇತಿ ಶಿಬಿರ ಆಯೋಜಿಸಲಾಗುತ್ತಿದೆ ಎಂದು ಭಾರತದ ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟಿಗರೂ ಆದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಉಪಾಧ್ಯಕ್ಷ ಸುಜಿತ್ ಸೋಮಸುಂದರ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣದಲ್ಲಿ ಕೆಎಸ್‌ಸಿಎ ಮೈಸೂರು ವಲಯದ ವತಿಯಿಂದ ಕ್ರಿಕೆಟ್ ವೃತ್ತಿ ಜೀವನ, ಅವಕಾಶ ಹಾಗೂ ಕೆಎಸ್‌ಸಿಎಯಿಂದ ದೊರೆಯುವ ಉತ್ತೇಜನ–ಸೌಲಭ್ಯಗಳ ಕುರಿತು ಕ್ರಿಕೆಟ್ ಆಟಗಾರರು, ಅವರ ಪೋಷಕರು ಹಾಗೂ ತರಬೇತುದಾರರಿಗೆ ಸೋಮವಾರ ಹಮ್ಮಿಕೊಂಡಿದ್ದ ಮಾರ್ಗದರ್ಶಿ ಕಾರ್ಯಕ್ರಮದಲ್ಲಿ ಅವರು ಮಾಹಿತಿ ನೀಡಿದರು.

ಕೆಎಸ್‌ಸಿಎ ಎಲ್ಲಾ ವಲಯಗಳಂತೆ ಮೈಸೂರು ವಲಯ ವ್ಯಾಪ್ತಿಯಲ್ಲಿ ಬೇಸಿಗೆ ತರಬೇತಿ ಶಿಬಿರ ಏಪ್ರಿಲ್‌ನಿಂದ ಆರಂಭವಾಗಲಿದೆ. ಪುರುಷರಿಗೆ ಅಂಡರ್ 14, ಅಂಡರ್ 16 ಮತ್ತು ಅಂಡರ್ 19 ವಿಭಾಗಗಳಲ್ಲಿ ಹಾಗೂ ಮಹಿಳೆಯರಿಗೆ ಅಂಡರ್ 15, ಅಂಡರ್ 19 ಮತ್ತು ಅಂಡರ್ 23 ವಿಭಾಗಗಳಲ್ಲಿ ಶಿಬಿರ ಆಯೋಜನೆಗೊಳ್ಳಲಿದೆ. ಈ ಅಭಿವೃದ್ಧಿ ಕಾರ್ಯಕ್ರಮದಡಿ ಪ್ರತಿ ವಯಸ್ಸಿನ ವಿಭಾಗದಲ್ಲಿ 25ರಿಂದ 30 ಆಟಗಾರರಿಗೆ ಅವಕಾಶ ಮಾಡಿಕೊಡಬಹುದು ಎಂದು ತಿಳಿಸಿದರು.

ಮೈಸೂರು ಭಾಗದ ಎಲ್ಲಾ ಆಟಗಾರರಿಗೆ ಅವಕಾಶ ಲಭ್ಯವಾಗದೇ ಹೋಗಬಹುದು. ಅದಕ್ಕಾಗಿ ಬೇಸರ ಮಾಡಿಕೊಳ್ಳುವ ಅಗತ್ಯವಿಲ್ಲ. ಪ್ರತಿಭೆ ಇದ್ದರೆ ಅವಕಾಶ ತಪ್ಪಿಸಲು ಸಾಧ್ಯವಿಲ್ಲ. ಸತತ ಪ್ರಯತ್ನ ಮುಖ್ಯ. ಶಿಬಿರ ಶುರು ಮಾಡುತ್ತೇವೆ. ಅದಕ್ಕೆ ಆಯ್ಕೆ ಪ್ರಕ್ರಿಯೆ ಇರುತ್ತದೆ. ಇಂಟರ್ ಕ್ಲಬ್ ಹಾಗೂ ಇಂಟರ್ ಸ್ಕೂಲ್ ಪಂದ್ಯಗಳು ಇರುತ್ತವೆ ಎಂದರು.

ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಪಕ್ಷಪಾತಕ್ಕೆ ಅವಕಾಶ ನೀಡದೇ ಸೂಕ್ತ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಲಾಗುತ್ತದೆ. ಆ ಮೂಲಕ ಬೇಸಿಗೆಯಲ್ಲಿ ಅಭ್ಯರ್ಥಿಗಳಿಗೆ ತರಬೇತಿ ನೀಡಲಿದ್ದೇವೆ. ಶಿಬಿರದ ಕೊನೆಯಲ್ಲಿ ಪಂದ್ಯಾವಳಿ ಸಹ ಆಯೋಜನೆ ಮಾಡಲಾಗುತ್ತದೆ. ಶಿಬಿರದಲ್ಲಿ ಪಂದ್ಯಗಳ ಮಾದರಿಯಲ್ಲೇ ವಾತಾವರಣ ಸೃಷ್ಟಿಸಿ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು. ಏಕೆಂದರೆ ಮಾನಸಿಕ ಸದೃಢತೆಗೆ ಪಂದ್ಯದಲ್ಲಿ ಇರುವಂತಹ ಒತ್ತಡ ಇರಬೇಕು. ಹಾಗಾಗಿ ಆಟಗಾರರು ಅಭ್ಯಾಸ ಮಾಡುವಾಗಲೇ ಅದೊಂದು ಪಂದ್ಯವೆಂಬ ಭಾವನೆ ಹೊಂದಬೇಕು ಎಂದು ಸಲಹೆ ನೀಡಿದರು.

ವೈಜ್ಞಾನಿಕ ಹಾಗೂ ಕೌಶಲ್ಯಾಧಾರಿತ ಅಭ್ಯಾಸ ಮುಖ್ಯ. ಬೇಸಿಗೆ ಶಿಬಿರದಿಂದ ಪ್ರಾರಂಭವಾಗಿ, ಅಂತರ ಜಿಲ್ಲೆ, ಅಂತರ ವಲಯ ಮೂಲಕ ರಾಜ್ಯ ಮಟ್ಟದವರೆಗೆ ಅವಕಾಶ ಪಡೆಯಬಹುದು. ಆಟದೊಂದಿಗೆ ಶಿಕ್ಷಣವೂ ಅಷ್ಟೇ ಮುಖ್ಯ. ಆಟದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಸೂಕ್ತ ನಿರ್ಧಾರಕ್ಕೆ ಬರಲು ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ಅವಕಾಶಗಳನ್ನು ಸೃಷ್ಟಿ ಮಾಡಬೇಕೆಂಬುದು ನಮ್ಮ ಪ್ರಣಾಳಿಕೆಯಲ್ಲಿ ಇದ್ದು, ಅವಕಾಶ ಕೇವಲ ಆಟಗಾರರಿಗೆ ಮಾತ್ರವಲ್ಲ, ತರಬೇತುದಾರರು, ಅಂಪೈರ್‌ಗಳಿಗೆ ಅವಕಾಶ ದೊರೆಯುವಂತಾಗಬೇಕು. ಅಂತೆಯೇ ಮೈಸೂರಿನಿಂದ ಉತ್ತಮ ಆಟಗಾರರು, ತರಬೇತುದಾರರು, ತೀರ್ಪುಗಾರರು(ಅಂಪೈರ್) ಹೊರಹೊಮ್ಮಬೇಕು. ಮೈಸೂರು ಮೂಲದ ಜಾವಗಲ್ ಶ್ರೀನಾಥ್ ಅವರು ಭಾರತ ತಂಡದಲ್ಲಿ ವೇಗಿ ಬೌಲರ್ ಆಗಿದ್ದವರು. ಅವರು ಅಂಡರ್ 19ನಿಂದ ಆಡಿದವರಲ್ಲ. ಮೊದಲ ಬಾರಿಗೆ ಅಂಡರ್ 23 ಹಂತದಲ್ಲಿ ಆಡಿದವರು. ಹಾಗಾಗಿ ಪೋಷಕರು ಅಂಡರ್ 16ನಲ್ಲಿ ಆಯ್ಕೆಯಾಗಿಲ್ಲವೆಂದು ಬೇಸರ ಮಾಡಿಕೊಳ್ಳುವ ಅಗತ್ಯವಿಲ್ಲ ಎಂದರು.

ಕೆಎಸ್‌ಸಿಎಯಿಂದ ಕ್ರಿಕೆಟ್ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀವು ನಿರೀಕ್ಷೆ ಮಾಡಬಹುದು. ಮಾ.15ರ ಬಳಿಕ ತರಬೇತುದಾರರಿಗೆ ಅಭಿವೃದ್ಧಿ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ. ಆಟಗಾರರ ಆಯ್ಕೆಯಲ್ಲಿ ಕುಲಗೋತ್ರ ನಡೆಯುವುದಿಲ್ಲ. ಇಲ್ಲಿ ಪ್ರತಿಭೆಯೇ ಮುಖ್ಯ. ಒಳ್ಳೆಯ ನಡವಳಿಕೆ ಕೂಡ ಅಷ್ಟೇ ಮುಖ್ಯ. ಮಹಿಳಾ ಹಾಗೂ ಪುರುಷ ಆಟಗಾರರಿಬ್ಬರಿಗೂ ಸಮಾನ ಅವಕಾಶ ಕಲ್ಪಿಸಿಕೊಡಬೇಕೆಂಬುದು ಕೆಎಸ್‌ಸಿಎನ ಮುಖ್ಯ ಉದ್ದೇಶವಾಗಿದೆ. ಆಯ್ಕೆ ವಿಚಾರದಲ್ಲಿ ನಕಾರಾತ್ಮಕ ಚಿಂತನೆಗಳನ್ನು ಪೋಷಕರು ಮಾಡಬಾರದು. ಆಟಗಾರರು ಬೇರೆಯವರಿಗೆ ಹೋಲಿಕೆ ಮಾಡಿಕೊಳ್ಳದೇ ಪ್ರತಿಭೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಭಿಕರಿಗೆ ಪ್ರತಿಕ್ರಿಯೆ: ಜಿಲ್ಲಾ ಕೇಂದ್ರದಲ್ಲಿ ಇರದ ಆಟಗಾರರು ಮೈಸೂರು ವಲಯ ಕೇಂದ್ರದಲ್ಲಿ ವಾರ್ಷಿಕವಾಗಿ ಆಯೋಜನೆಗೊಳ್ಳುವ ವಾರಾಂತ್ಯ ಶಿಬಿರವನ್ನು ಸದ್ಬಳಕೆ ಮಾಡಿಕೊಳ್ಳಬಹುದು. ವಲಯ ಕೇಂದ್ರಗಳಲ್ಲಿ ಉತ್ತಮ ತರಬೇತುದಾರರು, ಪೌಷ್ಠಿಕಾಂಶ ಮಾರ್ಗದರ್ಶಕರು ಇದ್ದಾರೆ. ಹೆಚ್ಚುವರಿ ಮೈದಾನಗಳನ್ನು ಕ್ರಿಕೆಟ್‌ಗಾಗಿ ಕಲ್ಪಿಸಿಕೊಡುವ ಸಂಬಂಧ ಪ್ರಯತ್ನಗಳು ಕೆಎಸ್‌ಸಿಎಯಿಂದ ನಡೆಯುತ್ತಿವೆ ಎಂದು ಸಭಿಕರೊಬ್ಬರ ಪ್ರಶ್ನೆಗೆ ಸುಜಿತ್ ಸೋಮಸುಂದರ್ ಪ್ರತಿಕ್ರಿಯಿಸಿದರು.

ಅಂಡರ್ 12ರ ನಂತರ ಚಿಕ್ಕ ವಯಸ್ಸಿನ ಮಕ್ಕಳಿಗೆ ಕೇವಲ ಕ್ರಿಕೆಟ್‌ಗೆ ಮಾತ್ರವೇ ಸೀಮಿತಗೊಳಿಸುವುದು ಸರಿಯಾದ ಕ್ರಮವಲ್ಲ. ಈ ವಯಸ್ಸಿನ ಮಕ್ಕಳು ಎಲ್ಲಾ ಆಟಗಳಲ್ಲಿ ಅನುಭವ ಹೊಂದಬೇಕು. ಆ ಮೂಲಕ ಆಟಗಳಲ್ಲಿ ಸಮಗ್ರ ಅಭಿವೃದ್ಧಿ ಹೊಂದಬೇಕು. ಪ್ರೌಢಶಾಲಾ ಮಕ್ಕಳಿಗೆ ಪಂದ್ಯಾವಳಿ ಆಯೋಜಿಸುವ ಉದ್ದೇಶ ಹೊಂದಲಾಗಿದೆ. ಟರ್ಫ್ ಗ್ರೌಂಡ್‌ಗಳ ಹೆಚ್ಚಳಕ್ಕೂ ಕ್ರಮ ವಹಿಸಲಾಗುತ್ತಿದೆ. ಅಂಡರ್ 19ನಲ್ಲಿ ಹೆಚ್ಚು ಪ್ರತಿಭಾವಂತರಾಗಿ ಪ್ರದರ್ಶನ ತೋರಿದವರು ಮುಂದಿನ ಹಂತಗಳು ಸೇರಿದಂತೆ ಭಾರತದ ಸೀನಿಯರ್ ಹಂತಕ್ಕೆ ಬರುವುದು ವಿರಳವಾಗುತ್ತಿದೆ. ಶೇ.20ರಷ್ಟು ಮಾತ್ರ ಸೀನಿಯರ್ ಹಂತಕ್ಕೆ ಬರುತ್ತಿದ್ದು, ಇದನ್ನು ನಿವಾರಿಸಿ ಅಂತಹ ಆಟಗಾರರು ಸೀನಿಯರ್ ಹಂತಕ್ಕೂ ಬರುವಂತೆ ಉತ್ತೇಜಿಸಲು ಏನೂ ಮಾಡಬೇಕೆಂಬ ಬಗ್ಗೆ ಚಿಂತನೆಗಳು ನಡೆಯುತ್ತಿವೆ ಎಂದು ಸಭಿಕರ ಪ್ರಶ್ನೆಗಳಿಗೆ ಸುಜಿತ್ ಸೋಮಸುಂದರ್ ಉತ್ತರಿಸಿದರು. ಕೆಎಸ್‌ಸಿಎ ಎಂಸಿ ಸದಸ್ಯೆ ಜಿ.ಎ.ಚಂದ್ರಿಕಾ, ಮೈಸೂರು ವಲಯ ಅಧ್ಯಕ್ಷ ಟಿ.ರವೀಂದ್ರ, ವಲಯ ಸಂಚಾಲಕ ಪಿ.ಶ್ರೀನಿವಾಸ ಪ್ರಸಾದ್ ವೇದಿಕೆಯಲ್ಲಿದ್ದರು.

ಯುದ್ಧ ಪೀಡಿತ ದೇಶಗಳಿಂದ ಕನ್ನಡಿಗರ ತಕ್ಷಣ ಕರೆ ತರಲು ಸಾಧ್ಯವಿಲ್ಲ

● ರಾಜ್ಯ ಸರ್ಕಾರ ಸ್ಪಷ್ಟನೆ ● ಸದ್ಯ ಇರುವಲ್ಲೇ ಸುರಕ್ಷಿತವಾಗಿರಿ ● ಯುದ್ಧ ನಂತರ ಕರೆಸಿಕೊಳ್ಳುತ್ತೇವೆ: ಸಚಿವ ಕೃಷ್ಣ ಬೈರೇಗೌಡ

ಬೆಂಗಳೂರು, ಮಾ. 2(ಕೆಎಂಶಿ)– ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಸಿಲುಕಿರುವ ಪ್ರವಾಸಿ ಕನ್ನಡಿಗರನ್ನು ತಕ್ಷಣಕ್ಕೆ ಕರೆತರುವ ಪರಿಸ್ಥಿತಿ ಇಲ್ಲ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇರಾನ್ ಮೇಲಿನ ಅಮೆರಿಕ–ಇಸ್ರೇಲ್ ದಾಳಿ ನಂತರ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿ ನಂತರ ಅಲ್ಲಿನ ದೇಶಗಳು ವಿಮಾನ ಹಾರಾಟವನ್ನು ಸ್ಥಗಿತಗೊಳಿಸಿವೆ.

ಸೌದಿ ಅರೇಬಿಯಾ, ದುಬೈ, ಬಹರೈನ್, ಯುಎಇ, ಇರಾಕ್ ಸೇರಿದಂತೆ ಅರಬ್ ದೇಶಗಳ ವಾಯುಪ್ರದೇಶಗಳಲ್ಲಿ ನಾಗರಿಕ ವಿಮಾನಯಾನ ಸಂಚಾರ ಪುನರಾರಂಭ ನಂತರ ಕೇಂದ್ರ ಸರ್ಕಾರ ಪ್ರವಾಸಿಗರನ್ನು ಕರೆಸಿಕೊಳ್ಳಲಿದೆ. ಪರಿಸ್ಥಿತಿಯಿಂದ ಸ್ಥೈರ್ಯ ಕಳೆದುಕೊಳ್ಳಬೇಡಿ. ನೀವು ಎಲ್ಲಿದ್ದೀರೋ ಅಲ್ಲಿಯೇ ಸುರಕ್ಷಿತ ತಾಣಗಳಲ್ಲಿ ಇರಿ. ರಾಜ್ಯ ಸರ್ಕಾರ, ಕೇಂದ್ರದ ಜೊತೆ ನಿರಂತರ ಸಂಪರ್ಕದಲ್ಲಿದ್ದು ನಿಮ್ಮ ರಕ್ಷಣೆಗೆ ಎಲ್ಲಾ ಕ್ರಮ ಕೈಗೊಳ್ಳುತ್ತಿದೆ.

ನಿಮಗಿರುವ ಆತಂಕ ಪರಿಹರಿಸಲು ಕ್ರಮ ವಹಿಸಿದ್ದೇವೆ. ಕೆಲವರು ನಮ್ಮನ್ನು ಸಂಪರ್ಕಿಸಿ, ವಿಶೇಷ ವಿಮಾನ ವ್ಯವಸ್ಥೆ ಮಾಡಿ ಕರೆಸಿಕೊಳ್ಳುವಂತೆ ಮನವಿ ಮಾಡಿದ್ದಾರೆ. ಅದು ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ನಾಗರಿಕ ವಿಮಾನ ಹಾರಾಟ ಆರಂಭವಾಗುವವರೆಗೆ ಏನೂ ಮಾಡಲಾಗದು. ಕೆಲವರು ವಿಮಾನ ನಿಲ್ದಾಣದಲ್ಲಿ ತಂಗಿರುವ ಮಾಹಿತಿ ಇದೆ. ಅಂತಹವರ ವೀಸಾಗಳು ರದ್ದಾಗಿವೆ. ಅವರುಗಳು ತಂಗಿರುವ ನಗರದ ಹೋಟೆಲ್‌ಗಳಿಗೆ ತಲುಪಲು ತಾತ್ಕಾಲಿಕ ವೀಸಾ ವ್ಯವಸ್ಥೆ ಮಾಡುವಂತೆ ಕೇಂದ್ರ ಸರ್ಕಾರ ಹಾಗೂ ಸಂಬಂಧಪಟ್ಟ ರಾಯಭಾರ ಕಚೇರಿಗಳಿಗೆ ಮಾಹಿತಿ ಕಳುಹಿಸಲಾಗಿದೆ.

ಮಧ್ಯಪ್ರಾಚ್ಯ ದೇಶಗಳಲ್ಲಿ ಸಿಲುಕಿರುವ ಪ್ರವಾಸಿಗಳು ರಾಯಭಾರ ಕಚೇರಿಗಳು ನೀಡುವ ಮಾರ್ಗಸೂಚಿಗಳನ್ನು ಪಾಲಿಸಿ, ಶಾಂತವಾಗಿರಿ. ಕದನ ವಿರಾಮ ಏರ್ಪಡುತ್ತಿದ್ದಂತೆ ತಮ್ಮನ್ನು ಕರೆತರಲು ಎಲ್ಲಾ ಕ್ರಮ ಜರುಗಿಸಲಾಗುವುದು.

ಘಟನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಸಂಪುಟ ಉಪಸಮಿತಿ ಭಾನುವಾರ ಸಭೆ ಸೇರಿ ಕೆಲವು ತೀರ್ಮಾನಗಳನ್ನು ಕೈಗೊಂಡಿದೆ. ಅದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿ ಇಲ್ಲ ಎಂದಿದ್ದಾರೆ.

ಯುದ್ಧ ಭೂಮಿಯಿಂದ ಬೆಂಗಳೂರಿಗೆ ಬಂದ ಶಾಸಕ ಎ.ಸಿ. ಶ್ರೀನಿವಾಸ್

ದೇವನಹಳ್ಳಿ, ಮಾ. 2: ಕಳೆದ ಮೂರು ದಿನಗಳಿಂದ ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕಾ ಜಂಟಿ ದಾಳಿ ಮಾಡುತ್ತಿರುವ ಕಾರಣ ವಿಮಾನ ಹಾರಾಟ ರದ್ದಾಗಿದ್ದು ಪ್ರಯಾಣಿಕರು ಪರದಾಡುತ್ತಿದ್ದಾರೆ. ತವರಿಗೆ ವಾಪಸ್ ಆಗಲು ಪರದಾಡುತ್ತಿರುವ ಬೆನ್ನಲ್ಲೆ ಓರ್ವ ಶಾಸಕ ಮಾತ್ರ ಯುದ್ಧ ಭೂಮಿಯಿಂದ ಗ್ರೇಟ್ ಎಸ್ಕೇಪ್ ಆಗಿ ಬಂದಿದ್ದಾರೆ. ಆ ಮೂಲಕ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ.




ದುಬೈ ಏರ್‌ಪೋರ್ಟ್‌ನಲ್ಲೆ ಮೂರು ದಿನಗಳಿಂದ ಕನ್ನಡಿಗರು ವಿಮಾನಗಳಿಲ್ಲದೆ ತವರಿಗೆ ಬರಲಾಗದೆ ಪರದಾಡುತ್ತಿದ್ದಾರೆ. ಕೆಂಪೇಗೌಡ ಏರ್‌ಪೋರ್ಟ್‌ನಿಂದಲೂ ತವರಿಗೆ ಹೋಗಲು ಟಿಕೆಟ್ ಬುಕ್ ಮಾಡಿಕೊಂಡಿದ್ದ ಪ್ರಯಾಣಿಕರು ವಿಮಾನಗಳ ಹಾರಾಟವಿಲ್ಲದೆ ಕಂಗಾಲಾಗಿದ್ದಾರೆ.

ಯುದ್ಧ ಭೂಮಿಯಿಂದ ಗ್ರೇಟ್ ಎಸ್ಕೇಪ್: ಜೆಡಿಎಸ್ ಪರಿಷತ್ ಸದಸ್ಯ ಭೋಜೇಗೌಡ, ಡ್ರೋನ್ ಪ್ರತಾಪ್ ಸೇರಿದಂತೆ ನೂರಾರು ಕನ್ನಡಿಗರು ತವರಿಗೆ ಬರಲಾಗದೆ ದುಬೈನಲ್ಲಿ ಸಿಲುಕಿ ಪರದಾಡುತ್ತಿರುವ ಬೆನ್ನಲ್ಲೆ ಆರು ದಿನಗಳ ಹಿಂದೆ ದುಬೈಗೆ ತೆರಳಿದ್ದ ಪುಲಕೇಶಿ ನಗರ ಶಾಸಕ ಎಸಿ ಶ್ರೀನಿವಾಸ್, ಮಸ್ಕಟ್ ಮೂಲಕ ಬೆಂಗಳೂರಿಗೆ ವಾಪಸ್ ಆಗಿದ್ದಾರೆ. ಮೊದಲೇ ಗೋಲ್ಡನ್ ವೀಸಾ ಪಡೆದುಕೊಂಡು ದುಬೈಗೆ ತೆರಳಿದ್ದ ಕಾರಣ ಯುದ್ಧ ಭೂಮಿಯಿಂದ ಹರಸಾಹಸಪಟ್ಟು 6 ಗಂಟೆಗಳ ಕಾಲ ರಸ್ತೆ ಪ್ರಯಾಣ ಮಾಡಿ ಮಸ್ಕಟ್ ಸೇರಿದ್ದಾರೆ. ಜೊತೆಗೆ ಮಸ್ಕಟ್‌ನಿಂದ ವಿಮಾನದಲ್ಲಿ ಇಂದು ಬೆಳಗ್ಗೆ 9 ಗಂಟೆಗೆ ಬೆಂಗಳೂರು ತಲುಪುವ ಮೂಲಕ ನಿಟ್ಟುಸಿರುವ ಬಿಟ್ಟಿದ್ದು, ಸುರಕ್ಷಿತವಾಗಿ ಮನೆ ಸೇರಿದ್ದಾರೆ.

24 ವಿಮಾನಗಳು ರದ್ದು: ಕೆಐಎಬಿಯಿಂದ ದುಬೈ ಸೇರಿದಂತೆ ಹೊರದೇಶಗಳಿಗೆ ತೆರಳಲು ಆಗಮಿಸಿರುವ ಪ್ರಯಾಣಿಕರು ಸದ್ಯ ಪರದಾಡುತ್ತಿದ್ದಾರೆ. ಯುದ್ಧ ಹಿನ್ನೆಲೆ ಇಂದು ಸಹ ಇರಾನ್‌ನಲ್ಲಿ ವಾಯುನೆಲೆ ಓಪನ್ ಆಗಿಲ್ಲ. ಹೀಗಾಗಿ ಕೆಂಪೇಗೌಡ ಏರ್‌ಪೋರ್ಟ್‌ನಿಂದ ದುಬೈ, ದೋಹಾ, ಅಬುಧಾಬಿ, ಜಿದ್ದಾ, ಬಹ್ರೇನ್ ಸೇರಿದಂತೆ ಹಲವೆಡೆ ತೆರಳಬೇಕಿದ್ದ 24 ವಿಮಾನಗಳು ರದ್ದಾಗಿವೆ.

ಹೆಚ್.ಎಸ್.ರಾಮಣ್ಣ ನಿಧನ



ಮೈಸೂರು, ಮಾ.2– ಮೈಸೂರಿನ ನಿವಾಸಿ, ನಿವೃತ್ತ ರೈಲ್ವೆ ಸೂಪರಿಂಟೆಂಡೆಂಟ್ ಹೆಚ್.ಎಸ್.ರಾಮಣ್ಣ(94) ಅವರು ಸೋಮವಾರ ಸಂಜೆ ನಿಧನರಾದರು. ಇವರು ಪುತ್ರ ವಿದ್ಯಾ ವಿಕಾಸ್ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕ ಹೆಚ್.ಆರ್.ಸುಂದರೇಶನ್, ಸೊಸೆ ಲೇಖಕಿ ಗಾಯತ್ರಿ ಸುಂದರೇಶ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ(ಮಾ.3) ಬೆಳಗ್ಗೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎಸ್. ನಾಗರತ್ನ



ಮೈಸೂರು, ಮಾ. 2– ಮೈಸೂರಿನ ಲಕ್ಷ್ಮೀಪುರಂ ನಿವಾಸಿ ಲೇಟ್ ಎಂ.ಪಿ. ಸದಾಶಿವಯ್ಯ ಅವರ ಪತ್ನಿ ಎಂ.ಎಸ್. ನಾಗರತ್ನ(80) ಅವರು ಸೋಮವಾರ ಸರಿರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 2 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೂರ್ಗಳ್ಳಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಎರಡು ಕೊಠಡಿ ಕಟ್ಟಡ; ಶಾಲಾ ದ್ವಾರಕ್ಕೆ ಗುದ್ದಲಿ ಪೂಜೆ



ಕೂರ್ಗಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಎರಡು ಶಾಲಾ ಕೊಠಡಿಗಳ ಕಟ್ಟಡ ನಿರ್ಮಾಣ ಹಾಗೂ ಶಾಲಾ ದ್ವಾರದ ಗುದ್ದಲಿ ಪೂಜೆ ಕಾರ್ಯಕ್ರಮ ನೆರವೇರಿತು.

ಮೈಸೂರು, ಮಾ. 2– ಮೈಸೂರು ತಾಲೂಕಿನ ಕೂರ್ಗಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಎರಡು ಶಾಲಾ ಕೊಠಡಿಗಳ ಕಟ್ಟಡ ನಿರ್ಮಾಣ ಹಾಗೂ ಶಾಲಾ ದ್ವಾರದ ಗುದ್ದಲಿ ಪೂಜೆ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ. ದೇವೇಗೌಡರು ಪೂಜೆಯಲ್ಲಿ ಪಾಲ್ಗೊಂಡರು.

ಕಾರ್ಯಕ್ರಮಕ್ಕೆ ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ವ್ಯವಸ್ಥಾಪಕರಾದ ಶ್ರೀನಿವಾಸ್ ಆಶೀರ್ವದಿಸಿದರು.

ಮೈಸೂರು ಜಿಲ್ಲೆಯ ಉಪನಿರ್ದೇಶಕರಾದ ಉದಯ್ ಕುಮಾರ್, ಗ್ರಾಮದ ಮುಖಂಡರುಗಳಾದ ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮಹದೇವು, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ನಂಜುಂಡೇಗೌಡ, ಚೆನ್ನಪ್ಪ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಕೂರ್ಗಳ್ಳಿ ರೇವಣ್ಣ, ಉದ್ಯಮಿ ಗುರುರಾಜ್, ಬಿಆರ್‌ಸಿ ಗೀತಾ, ಇಸಿಓ ಸುಬ್ಬಾಶೆಟ್ಟಿ, ಸಿಆರ್‌ಪಿ ಧನಂಜಯ್, ಮುಖ್ಯ ಶಿಕ್ಷಕರಾದ ನಾಗರಾಜು, ನಿವೃತ್ತ ಮುಖ್ಯ ಶಿಕ್ಷಕರಾದ ನರಸಿಂಹಮೂರ್ತಿ, ಸತೀಶ್, ಮಾಜಿ ಪಂಚಾಯಿತಿ ಸದಸ್ಯ ಜಿಮ್ ರಾಮು, ಮಾದೇಶ್, ರಕ್ತದಾನಿ ಮಂಜು, ಸಹನಾ, ಮಾಜಿ ಪಂಚಾಯಿತಿ ಅಧ್ಯಕ್ಷ ನಾಗರತ್ನ, ಭೈರಪ್ಪ, ಧನಂಜಯ, ಜಿಮ್ ಪ್ರಕಾಶ್ ಸೇರಿದಂತೆ ಗ್ರಾಮದ ಹಿರಿಯರಾದ ಮುದ್ದಪ್ಪ, ರಾಮಪ್ಪ, ಕೃಷ್ಣಪ್ಪ, ಕೃಷ್ಣ, ನಿಂಗೇಗೌಡ, ಮೀಸೆ ನಾಗಣ್ಣ, ದೇವೇಗೌಡ, ಶಿವಣ್ಣ, ರವಿ, ನಾಗೇಂದ್ರ, ಮಹೇಶ್, ನಾಗೇಶ್, ದೀಪು ಹಾಗೂ ಶಿಕ್ಷಕರಾದ ವಿಮಲಾ, ಇಂದಿರಾ, ಗೀತಾ, ಚೂಡಾಮಣಿ, ಪುಷ್ಪಲತಾ, ಭಾಸ್ಕರ್, ಎಸ್‌ಡಿಎಂಸಿ ಉಪಾಧ್ಯಕ್ಷರಾದ ಅನಿತಾ, ಸದಸ್ಯರಾದ ಯತೀಶ್, ಪ್ರವೀಣ್, ಮಹೇಶ್, ಗಗನ, ಮಂಜುಳಾ, ಛಾಯ, ವೃಕ್ಷಾನ, ಬಾನು ಮತ್ತು ಕೂರ್ಗಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಾಸಕರಾದ ಜಿ.ಟಿ. ದೇವೇಗೌಡರು ಮಾತನಾಡಿ, ಈ ಶಾಲೆಯ ಕೊಠಡಿಗಳು ಹಾಗೂ ಶಾಲಾ ದ್ವಾರದ ನಿರ್ಮಾಣಕ್ಕೆ ಸರ್ಕಾರದ ಅಥವಾ ಸಿಎಸ್‌ಆರ್ ನಿಧಿಯಿಂದ ಯಾವುದೇ ಅನುದಾನ ಲಭ್ಯವಾಗದ ಹಿನ್ನೆಲೆ, ಕೂರ್ಗಳ್ಳಿ ಗ್ರಾಮದ ಎಲ್ಲಾ ಮುಖಂಡರು ಹಾಗೂ ದಾನಿಗಳು ಸೇರಿ ನಿರ್ಮಿಸಬೇಕೆಂದು ಕರೆ ನೀಡಿದರು. ತಾವು ಕೂಡ ಈ ಕಾರ್ಯಕ್ಕೆ ಕೈಜೋಡಿಸುವುದಾಗಿ ಭರವಸೆ ನೀಡಿದರು.

ಬೀಳ್ಕೊಡುಗೆ



ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆ ಸೇರಿದಂತೆ ನಗರದ ವಿವಿಧ ಠಾಣೆಗಳಲ್ಲಿ 32 ವರ್ಷಗಳ ಕಾಲ ಸೇವೆ ಸಲ್ಲಿಸಿ ಫೆ.28ರಂದು ನಿವೃತ್ತರಾದ ಎಎಸ್‌ಐ ಎನ್.ಪಿ.ನಂಜುಂಡಸ್ವಾಮಿ ಅವರನ್ನು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅಭಿನಂದಿಸಿ, ಬೀಳ್ಕೊಟ್ಟರು. ಈ ವೇಳೆ ನಂಜುಂಡಸ್ವಾಮಿ ಪತ್ನಿ ನಾಗರತ್ನ, ಪುತ್ರ ಯಶವಂತ್, ಡಿಸಿಪಿ ಸುಂದರ್‌ರಾಜ್, ವಿಜಯನಗರ ಎಸಿಪಿ ರವೀಂದ್ರ, ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್ ಉಪಸ್ಥಿತರಿದ್ದರು.

'ಉತ್ತರ'ದತ್ತ ಜೆಡಿಎಸ್ ಚಿತ್ತ: 'ದಳಪತಿ'ಗಳ ದಂಡಯಾತ್ರೆ!

ವಿಜಯಪುರ: ಕರ್ನಾಟಕದಲ್ಲಿ ಆಡಳಿತಾರೂಢ ಕಾಂಗ್ರೆಸ್ ಮೂರು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸುತ್ತಿದ್ದು, ವಿಧಾನಸಭಾ ಚುನಾವಣೆಗಳು ಎರಡು ವರ್ಷಗಳಷ್ಟು ಬಾಕಿ ಇರುವಾಗ, ಜನತಾದಳ (ಜಾತ್ಯತೀತ) ಉತ್ತರ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಬಲಪಡಿಸಲು ಸಿದ್ಧತೆ ನಡೆಸುತ್ತಿದೆ.

ಪಕ್ಷ ಸ್ಥಾಪನೆಯಾಗಿ 25 ವರ್ಷಗಳನ್ನು ಪೂರೈಸಿದ ಜೆಡಿಎಸ್, ಉತ್ತರ ಕರ್ನಾಟಕದ ಮೇಲೆ ಗಮನ ಕೇಂದ್ರೀಕರಿಸಿದ್ದು ರಾಜ್ಯವ್ಯಾಪಿ ಪ್ರವಾಸದ ಮೂಲಕ ತನ್ನನ್ನು ತಾನು ಪುನರುಜ್ಜೀವನಗೊಳಿಸಲು ಇದನ್ನು ಒಂದು ಅವಕಾಶವಾಗಿ ಬಳಸಿಕೊಳ್ಳುತ್ತಿದೆ.

ಪ್ರಾದೇಶಿಕ ಪಕ್ಷವು ಹಳೆಯ ಮೈಸೂರು ಪ್ರದೇಶದಲ್ಲಿ ಸಾಕಷ್ಟು ಪ್ರಾಬಲ್ಯ ಉಳಿಸಿಕೊಂಡಿದ್ದರೂ, ಉತ್ತರ ಕರ್ನಾಟಕದಲ್ಲಿ ಜೆಡಿಎಸ್ ಪ್ರಭಾವ ತೀವ್ರವಾಗಿ ಕಡಿಮೆಯಾಗಿದೆ. ಇಂದು ವಿಧಾನಸಭೆಯಲ್ಲಿರುವ ಪಕ್ಷದ 18 ಶಾಸಕರಲ್ಲಿ, ಕೇವಲ ನಾಲ್ವರು ಶಾಸಕರು ಮಾತ್ರ ಈ ಪ್ರದೇಶದವರಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಕೇವಲ 19 ಸ್ಥಾನಗಳನ್ನು ಗೆದ್ದ ನಂತರ ಪಕ್ಷದ ಪುನರುಜ್ಜೀವನದ ಹಿಂದಿನ ಅಗತ್ಯವನ್ನು ಒತ್ತಿಹೇಳುತ್ತದೆ.

ಪಕ್ಷದ ಸ್ಥಾಪಕ ಮತ್ತು ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ ಮತ್ತು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷವನ್ನು ಮತ್ತೆ ಮುಂಚೂಣಿಗೆ ತರಲು ಮುಂದಾಗಿದ್ದಾರೆ. ಬೆಳ್ಳಿ ಮಹೋತ್ಸವ ವರ್ಷದ ಭಾಗವಾಗಿ, ಜೆಡಿಎಸ್ ಫೆಬ್ರವರಿ 27 ರಂದು ವಿಜಯಪುರದಲ್ಲಿ ಬೃಹತ್ ಜನತಾ ಸಮಾವೇಶವನ್ನು ಆಯೋಜಿಸಲಾಗಿತ್ತು. ಮುಂಬರುವ ದಿನಗಳಲ್ಲಿ ಉತ್ತರ ಕರ್ನಾಟಕದ ಬೇರೆಡೆ ಇದೇ ರೀತಿಯ ಕಾರ್ಯಕ್ರಮಗಳನ್ನು ನಡೆಸಲು ಪಕ್ಷ ಯೋಜಿಸಿದೆ. ಪಕ್ಷವು ಹಳೆ ಮೈಸೂರು ಪ್ರದೇಶಕ್ಕೆ ಮಾತ್ರ ಸೀಮಿತವಾಗಿದೆ ಎಂಬ ದೀರ್ಘಕಾಲದ ಭಾವನೆಯನ್ನು ಹೋಗಲಾಡಿಸುವ ಗುರಿಯನ್ನು ಹೊಂದಿದೆ.

ಎರಡು ದಶಕಗಳ ಹಿಂದೆ, ಜೆಡಿಎಸ್ ಉತ್ತರ ಕರ್ನಾಟಕದಾದ್ಯಂತ ಗಮನಾರ್ಹ ನೆಲೆಯನ್ನು ಹೊಂದಿತ್ತು, ಹಲವಾರು ಜಿಲ್ಲೆಗಳಿಂದ ಬಹು ಶಾಸಕರನ್ನು ಆಯ್ಕೆ ಮಾಡಿತು. ಆದರೆ ಸತತ ಚುನಾವಣಾ ಹಿನ್ನಡೆಗಳಿಂದಾಗಿ ಪಕ್ಷ ಬೆಂಬಲವನ್ನು ಕಳೆದುಕೊಂಡಿತು. ಈ ಸಮ್ಮೇಳನವು ಕಾರ್ಯಕರ್ತರನ್ನು ಹುರಿದುಂಬಿಸುತ್ತದೆ ಎಂದು ಬಯಸಲಾಗಿದೆ.

ದ್ವೇಷಕಾರಿ ಧರ್ಮೋಪದೇಶ ನೀಡುವವರ ಮೇಲೆ ನಿಗಾ ಇರಿಸಿ

ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಎಚ್ಚರಿಕೆ

ನವದೆಹಲಿ: ಇರಾನ್–ಅಮೆರಿಕಾ–ಇಸ್ರೇಲ್ ದಾಳಿ–ಪ್ರತಿದಾಳಿಯಿಂದಾಗಿ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ವಾತಾವರಣ ನಿರ್ಮಾಣವಾಗಿದ್ದು, ಇದರ ಬೆನ್ನಲ್ಲೇ ಭಾರತದಲ್ಲಿ ಸಂಭಾವ್ಯ ಹಿಂಸಾಚಾರದ ಬಗ್ಗೆ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.

ಫೆ.28 ರಂದು ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ಸುತ್ತೋಲೆ ಹೊರಡಿಸಿದೆ. ಸುತ್ತೋಲೆಯಲ್ಲಿ, ದೇಶದಲ್ಲಿ ಹಿಂಸಾಚಾರ ಸಂಭವಿಸುವ ಸಾಧ್ಯತೆಯಿದೆ. ಎಲ್ಲಾ ರಾಜ್ಯ ಸರ್ಕಾರಗಳು ಮತ್ತು ಭದ್ರತಾ ಸಂಸ್ಥೆಗಳು ಜಾಗರೂಕತೆಯಿಂದ ಇರಬೇಕು. ಅಶಾಂತಿಯನ್ನ ಪ್ರಚೋದಿಸುವ ಇರಾನ್ ಪರ ಮೂಲಭೂತ ಪ್ರಚಾರಕರನ್ನ ಪತ್ತೆ ಮಾಡಬೇಕು ಎಂದು ಸೂಚಿಸಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ದೇಶದ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ. ಅದರಲ್ಲೂ ವಿಶೇಷವಾಗಿ ಧಾರ್ಮಿಕ ಕೂಟಗಳಲ್ಲಿ ಉದ್ರೇಕಿತ ಭಾಷಣಗಳ ಮೂಲಕ ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಸಾಧ್ಯತೆಗಳಿವೆ.

ಹೀಗಾಗಿ ರಾಜ್ಯ ಸರ್ಕಾರಗಳು ಮತ್ತು ಭದ್ರತಾ ಸಂಸ್ಥೆಗಳು ಎಚ್ಚರಿಕೆಯಿಂದಿರಬೇಕು. ಅಶಾಂತಿ ಮತ್ತು ಉದ್ವಿಗ್ನತೆ ಉಂಟು ಮಾಡುವ ಇರಾನ್ ಪರವಾದ ಮೂಲಭೂತ ಪ್ರಚಾರಕರನ್ನ ಗುರುತಿಸಿ ಮೇಲ್ವಿಚಾರಣೆ ಮಾಡಬೇಕು ಎಂದು ಎಚ್ಚರಿಸಿದೆ ಅಲ್ಲದೆ, ಕಾನೂನು ಮತ್ತು ಸುವ್ಯವಸ್ಥೆ ನಿಯಂತ್ರಿಸಲು ಗುಪ್ತಚರ ಸಂಸ್ಥೆಗಳು ಭದ್ರತಾ ಸಂಸ್ಥೆಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಿ ಹೇಳಿದೆ.

ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಇರಾನಿನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಮರಣದ ಬಗ್ಗೆ ಆಕ್ರೋಶ ಮತ್ತು ದುಃಖವನ್ನು ವ್ಯಕ್ತಪಡಿಸಲು ಶಿಯಾ ಮುಸ್ಲಿಮರು ಭಾನುವಾರ ವಿವಿಧ ಭಾಗಗಳಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ಬಿಎಸ್‌ವೈ ಮಂತ್ರದೊಂದಿಗೆ 2028ರ ಚುನಾವಣೆಗೆ ಬಿಜೆಪಿ ಸಿದ್ಧತೆ

ಮೇ ತಿಂಗಳಲ್ಲಿ ಬೃಹತ್ ಸಮಾವೇಶ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಾರ್ವಜನಿಕ ಜೀವನ ಪ್ರವೇಶಿಸಿ 50 ವರ್ಷ ಭರ್ತಿಯಾದ ಹಿನ್ನೆಲೆಯಲ್ಲಿ ಸಿದ್ದರಾಮೋತ್ಸವ ಮಾದರಿಯಲ್ಲಿ ಬೃಹತ್ ಸಮಾವೇಶ ನಡೆಸುವುದಕ್ಕೆ ರಾಜ್ಯ ಬಿಜೆಪಿ ಮುಂದಾಗಿದ್ದು. ಈ ಮೂಲಕ ಪಕ್ಷದ ಒಳಗೆ ಹಾಗೂ ಹೊರಗೆ ಮಹತ್ವದ ರಾಜಕೀಯ ಸಂದೇಶ ಸಾರುವ ಪ್ರಯತ್ನಗಳು ನಡೆಯುತ್ತಿವೆ ಎಂದು ತಿಳಿದುಬಂದಿದೆ.

ಕರ್ನಾಟಕ ರಾಜಕೀಯದಲ್ಲಿ ನಾಲ್ಕು ದಶಕಗಳಿಗಿಂತ ಹೆಚ್ಚು ಕಾಲ ಪ್ರಭಾವ ಬೀರಿದ ನಾಯಕನಾಗಿ ಯಡಿಯೂರಪ್ಪ ಅವರ ಹೆಸರು ಅಚ್ಚಳಿಯದೆ ಉಳಿದಿದೆ. ಈಗ ಅವರ ರಾಜಕೀಯ ಜೀವನಕ್ಕೆ 50 ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ, ಬಿಜೆಪಿ ಅವರನ್ನು ಮತ್ತೆ ಕೇಂದ್ರಬಿಂದುವಾಗಿಸಲು ಮುಂದಾಗಿದೆ.

ಇದು ಕೇವಲ ಸ್ಮರಣೋತ್ಸವವಲ್ಲ, 2028ರ ರಾಜಕೀಯ ಸಮೀಕರಣಗಳ ಪೂರ್ವಭಾವಿ ಸಿದ್ಧತೆಯಾಗಿದೆ ಎನ್ನುವುದು ರಾಜಕೀಯ ವಲಯದಲ್ಲಿ ಕೇಳಿಬರುತ್ತಿರುವ ಅಭಿಪ್ರಾಯವಾಗಿದೆ.

2021ರಲ್ಲಿ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ ನಂತರ ಬಿಜೆಪಿ 2023ರ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡಿತ್ತು.

ಆ ಬಳಿಕ ಪಕ್ಷದೊಳಗಿನ ನಾಯಕತ್ವ ಗೊಂದಲ, ಮತಬ್ಯಾಂಕ್ ಕುಸಿತ ಹಾಗೂ ಲಿಂಗಾಯತ ಸಮುದಾಯದ ಅಸಮಾಧಾನಗಳು ಸ್ಪಷ್ಟವಾಗಿ ಗೋಚರಿಸಿತು. ಈಗ ಪಕ್ಷವು ಬಿಎಸ್‌ವೈ ಮಂತ್ರವನ್ನು ಮತ್ತೆ ಪ್ರಯೋಗಿಸಲು ಸಜ್ಜಾಗಿದೆ.

ರಾಜ್ಯ ಬಿಜೆಪಿ ಅಧ್ಯಕ್ಷ ಬಿವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ಚಿತ್ರದುರ್ಗದಲ್ಲಿ ಮಹಾಸಮಾವೇಶ ನಡೆಸಲು ಯೋಜನೆ ರೂಪಿಸಲಾಗಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ರಾಷ್ಟ್ರೀಯ ನಾಯಕರು ಈ ಸಮಾವೇಶದಲ್ಲಿ ಭಾಗವಹಿಸುವ ಸಾಧ್ಯತೆ ಇದೆ.

ಇದು ಕೇವಲ ಗೌರವದ ಸಮಾರಂಭವಲ್ಲ: ಲಿಂಗಾಯತ ಮತಬ್ಯಾಂಕ್‌ನ್ನು ಪುನಃ ಒಗ್ಗೂಡಿಸುವ ರಾಜಕೀಯ ತಂತ್ರವಾಗಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಯಡಿಯೂರಪ್ಪ ಅವರು ವೀರಶೈವ–ಲಿಂಗಾಯತ ಸಮುದಾಯದ ಪ್ರಮುಖ ಮುಖಂಡರಾಗಿ ದಶಕಗಳಿಂದ ಗುರುತಿಸಿಕೊಂಡಿದ್ದಾರೆ. ಬಿಜೆಪಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲೂ ಅವರ ಪಾತ್ರ ಮಹತ್ವದ್ದು. ಅವರ ವೈಯಕ್ತಿಕ ಜನಮನ್ನಣೆ ಮತ್ತು ಸಂಘಟನೆ ಶಕ್ತಿ ಇನ್ನೂ ಪಕ್ಷಕ್ಕೆ ಬಲವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ.ಶಿವಕುಮಾರ್ ನಡುವೆ ನಡೆಯುತ್ತಿರುವ ಪೈಪೋಟಿ, ಆಡಳಿತದ ವಿರುದ್ಧ ಹೆಚ್ಚುತ್ತಿರುವ ಅಸಮಾಧಾನ, ಇವುಗಳೆಲ್ಲಾ ಬಿಜೆಪಿಗೆ ಅವಕಾಶವಾಗಿ ಮಾರ್ಪಾಡಾಗಲಿದೆ.

ಯಡಿಯೂರಪ್ಪ ಅವರು ವಿಧಾನಸಭೆ ಹೊರಗಿನಿಂದ ಪರಿಣಾಮಕಾರಿ ವಿರೋಧ ಪಕ್ಷದ ಮುಖವಾಗಿ ಹೊರಹೊಮ್ಮಿದರೆ, ಅದು 2028ರ ಚುನಾವಣೆಗೆ ಸಹಾಯಕವಾಗಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಯಡಿಯೂರಪ್ಪರ ಪುತ್ರ ವಿಜಯೇಂದ್ರ ಈಗ ರಾಜ್ಯ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಭವಿಷ್ಯದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಅವರ ಹೆಸರು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ, ಯಡಿಯೂರಪ್ಪ ಅವರ ಈ 50 ವರ್ಷದ ಸಮಾರಂಭ ಮುಂದಿನ ಪೀಳಿಗೆಯ ಬದಲಾವಣೆಯ ಸಂಕೇತವಾಗಿಯೂ ಕಾಣಬಹುದು.

ಒಟ್ಟಾರೆ ಯಡಿಯೂರಪ್ಪರ ರಾಜಕೀಯ ಜೀವನದ ಕೇವಲ 50 ವರ್ಷಗಳ ಆಚರಣೆ, ಗೌರವಪೂರ್ವ ಕಾರ್ಯಕ್ರಮವಷ್ಟೇ ಅಲ್ಲದೆ, 2028ರ ರಾಜಕೀಯ ಸಮರಕ್ಕೆ ಬಿಜೆಪಿ ಹಾಕುತ್ತಿರುವ ಮೊದಲ ದೊಡ್ಡ ಹೆಜ್ಜೆಯಾಗಿದೆ.

ಇದರಂತೆ ಮುಂದಿನ ಚುನಾವಣೆಗೆ 'ಬಿಎಸ್‌ವೈ ಮಂತ್ರ' ಮತ್ತೆ ಕಾರ್ಯಕ್ರಮವಾಗುತ್ತದೆಯೇ? ಲಿಂಗಾಯತ ಮತಗಳು ಮತ್ತೆ ಬಿಜೆಪಿ ಕಡೆ ತಿರುಗುತ್ತವೆಯೇ? ಪ್ರಶ್ನೆಗಳಿಗೆ ಮುಂದಿನ ಚುನಾವಣೆಯಲ್ಲಿ ಉತ್ತರ ಲಭಿಸಲಿದೆ.

4.50 ಕೋಟಿ ವೆಚ್ಚದ ಕಾಮಗಾರಿಗಳಿಗೆ ಭೂಮಿ ಪೂಜೆ

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಾನು, ನನ್ನ ತಂದೆ ಶ್ರಮಿಸುತ್ತೇವೆ: ಸಂಸದ ಸುನೀಲ್ ಬೋಸ್

ತಿ.ನರಸೀಪುರ, ಮಾ.2– ನಮ್ಮ ತಂದೆ ಹೆಚ್.ಸಿ. ಮಹದೇವಪ್ಪ ನನಗೆ ಆಗಾಗ ಹೇಳುತ್ತಿದ್ದರು. ರಾಜಕಾರಣವನ್ನು ನಾಮಪತ್ರ ಸಲ್ಲಿಸಿದ ನಂತರ 15 ದಿನ ಮಾತ್ರ ಮಾಡಬೇಕು. ಆನಂತರ ಮತ ಕೊಟ್ಟಿರುವ, ಕೊಡದಿರುವ ಎಲ್ಲರನ್ನೂ ಪ್ರೀತಿಯಿಂದ ಕಂಡು ಅವರ ಕೆಲಸಗಳನ್ನು ಮಾಡಿಕೊಡಬೇಕು ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ 4.50 ಕೋಟಿ ರೂ. ವೆಚ್ಚದಲ್ಲಿ ರಸ್ತೆ, ಚರಂಡಿ, ಸಮುದಾಯ ಭವನಗಳ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದ ಜನರು ನಮ್ಮ ಮೇಲೆ ವಿಶ್ವಾಸವಿಟ್ಟು ನಮ್ಮ ತಂದೆ ಮಹದೇವಪ್ಪ ಅವರಿಗೆ ಕಳೆದ 40 ವರ್ಷಗಳಿಂದಲೂ ರಾಜಕೀಯ ಅಧಿಕಾರ ನೀಡುತ್ತಾ ಬಂದಿದ್ದಾರೆ. ಈಗ ನಾನು ಸಂಸದನಾಗಲು ಕಾರಣರಾಗಿದ್ದಾರೆ. ಹೀಗಾಗಿ ನಾವು ಈ ಕ್ಷೇತ್ರದಲ್ಲಿ ಎಷ್ಟೇ ಅಭಿವೃದ್ಧಿ ಮಾಡಿದರೂ ಸಾಲದು. ಈ ನಿಟ್ಟಿನಲ್ಲಿ ನಾನು ಮತ್ತು ನಮ್ಮ ತಂದೆ ಸೇರಿ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಮೂಲಕ ಮಾದರಿ ಕ್ಷೇತ್ರ ಮಾಡಲು ಮುಂದಾಗಿದ್ದೇವೆ ಎಂದರು.

ಎಲ್ಲರೂ ಕೂಡ ನಿನ್ನ ಮತ ಕ್ಷೇತ್ರದವರೇ ಹಾಗಾಗಿ ಯಾವುದೇ ಕಾರಣಕ್ಕೂ ತಾರತಮ್ಯ ರಾಜಕಾರಣ ಮಾಡಬೇಡ ಎಂದು ಹೇಳುತ್ತಿದ್ದರು. ನಾನೀಗ ತಂದೆ ಮಾತಿನಂತೆ ಅಭಿವೃದ್ಧಿ ವಿಷಯಕ್ಕೆ ಬಂದಾಗ ಎಲ್ಲಾ ಗ್ರಾಮಕ್ಕೂ ಅನುದಾನವನ್ನು ಸಮನಾಗಿ ಹಂಚಿಕೆ ಮಾಡಿ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದೇನೆ ಎಂದರು.

ಜಿಪಂ ವತಿಯಿಂದ ಎಸ್‌ಸಿ ಕಾಲೋನಿಗೆ ಆರ್‌ಡಿಪಿಆರ್ ಯೋಜನೆಯಡಿ 55 ಲಕ್ಷ ರೂ. ಹಾಗೂ ಸಾಮಾನ್ಯ ವರ್ಗದ ಕಾಲೋನಿಗೆ 1.95 ಕೋಟಿ ರೂ., ಲೋಕೋಪಯೋಗಿ ಇಲಾಖೆಯಿಂದ ಚೌಹಳ್ಳಿ ಹಾಗೂ ಅಮ್ಮಾಚಿಕಟ್ಟೆ ಗ್ರಾಮದ ರಸ್ತೆ ಅಭಿವೃದ್ಧಿಗೆ ತಲಾ ಒಂದು ಕೋಟಿ ನೀಡಲಾಗಿದ್ದು, ಒಟ್ಟಾರೆ 4.50 ಕೋಟಿ ರೂ.ಗಳ ಕಾಮಗಾರಿಗೆ ಇಂದು ಭೂಮಿ ಪೂಜೆ ನೆರವೇರಿಸಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಇದೇ ವೇಳೆ ಸಂಸದರು ಮರಡೀಪುರದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ಬಾಬು ಜಗಜೀವನರಾಂ ಭವನ ಹಾಗೂ 10 ಲಕ್ಷ ರೂ.ಗಳ ರಸ್ತೆ ಅಭಿವೃದ್ಧಿ, ಸಿ.ಬಿ. ಹುಂಡಿ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುವ ಬಸವ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಚೌಹಳ್ಳಿ, ಹಿರಿಯೂರು, ಮಾದಾಪುರ, ದೊಡ್ಡನಹುಂಡಿ, ತೊಟ್ಟವಾಡಿ, ಮಾವಿನಹಳ್ಳಿ, ಕಲಿಯೂರು, ಬೆಟ್ಟದಹೊಸೂರು, ಮಂಗಿ ಪಚ್ಚನಹುಂಡಿ, ತಡಿ ಮಾಲಂಗಿ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಂಸದರು ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಹಿರಿಯೂರು ನಾಗಪ್ಪ, ನವೀನ್, ಹ್ಯಾಕನೂರು ಉಮೇಶ್, ಚೌಹಳ್ಳಿ ಮಹದೇವಪ್ಪ, ಸೋಮಣ್ಣ, ಮನು, ನಿಲಸೋಗೆ ಮಹದೇವ ಪ್ರಸಾದ್, ಮರಡೀಪುರ ಗೋಪಾಲ್, ರಘು, ಸಿ.ಬಿ. ಹುಂಡಿ ಸಿದ್ದು, ಸಂಸದರ ಆಪ್ತ ಸಹಾಯಕ ಬಸವರಾಜು, ಕುಕ್ಕೂರು ಪ್ರಸನ್ನ, ಲೋಕೋಪಯೋಗಿ ಎಇಇ ಚರಿತಾ, ಜಿಪಂ ಎಇಇ ಸತೀಶ್ ಚಂದ್ರ, ಸಿಡಿಪಿಓ ಗೋವಿಂದರಾಜು, ಪರಿಶಿಷ್ಟ ವರ್ಗಗಳ ಇಲಾಖೆಯ ಕೋಮಲ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶಾಂತ ಸೇರಿದಂತೆ ಮತ್ತಿತರರಿದ್ದರು.



ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

> ತಿ.ನರಸೀಪುರ ವಿಧಾನಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡಬೇಕೆಂದು ನನ್ನ ಮತ್ತು ನನ್ನ ತಂದೆ ಕನಸಾಗಿದ್ದು, ಆ ನಿಟ್ಟಿನಲ್ಲಿ ಸಮರೋಪಾದಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.–ಸುನೀಲ್ ಬೋಸ್, ಸಂಸದ.

ಹಳೇ ವೈಷಮ್ಯ: ಅಜ್ಜಿ, ಮೊಮ್ಮಗಳ ಮೇಲೆ ಹಲ್ಲೆ

ನಂಜನಗೂಡು, ಮಾ.2– ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ಅಜ್ಜಿ, ಮೊಮ್ಮಗಳ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿರುವ ಘಟನೆ ತಾಲೂಕಿನ ದೇವೀರಮ್ಮನಹಳ್ಳಿ ಪಾಳ್ಯದಲ್ಲಿ ನಡೆದಿದೆ. ಗ್ರಾಮದ ನಿವಾಸಿಗಳಾದ ಲಕ್ಷ್ಮೀ ಹಾಗೂ ಮೊಮ್ಮಗಳು, ಪಿಯುಸಿ ವಿದ್ಯಾರ್ಥಿನಿ ಪೂರ್ಣಿಮಾ ಗಾಯಗೊಂಡವರು.

ವಿವರ: ಲಕ್ಷ್ಮೀ ಅವರ ಪುತ್ರ ಯೋಗೇಶ್ ಅವರೊಂದಿಗೆ ಅದೇ ಗ್ರಾಮದ ರಾಮು, ಸೋಮಣ್ಣ ಹಾಗೂ ಇತರರೊಂದಿಗೆ ಫೆ.24ರಂದು ರಾತ್ರಿ ಜಗಳ ನಡೆದಿತ್ತು. ಇದನ್ನೇ ನೆಪವಾಗಿಟ್ಟುಕೊಂಡು ಫೆ.28ರ ಮಧ್ಯಾಹ್ನ ಲಕ್ಷ್ಮಿ ಅವರ ಮನೆಗೆ ತೆರಳಿದ ರಾಮು, ಸೋಮಣ್ಣ, ಚಂದ್ರಮ್ಮ ಹಾಗೂ ಅನಿತಾ ಅವರು ಬಾಯಿಗೆ ಬಂದಂತೆ ನಿಂದಿಸಿದರು. ಅಲ್ಲದೇ ಸೋಮಣ್ಣ ಎಂಬಾತ ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದರು. ಅಲ್ಲದೇ ಅವರ ಪತ್ನಿ ಚೈತ್ರಾ ಕೂಡ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಈ ವೇಳೆ ಮನೆಯಲ್ಲಿದ್ದ ನನ್ನ ಮೊಮ್ಮಗಳು ಪೂರ್ಣಿಮಾ ಜಗಳ ಬಿಡಿಸಲು ಬಂದಾಗ ಚಂದ್ರಮ್ಮ ಹಾಗೂ ಅನಿತಾ ಅವರು ಹಲ್ಲೆ ನಡೆಸಿ ಕೊಲೆ ಬೆದರಿಕೆಯೊಡ್ಡಿದ್ದಾರೆ. ಹೀಗಾಗಿ ಸೋಮಣ್ಣ ಸೇರಿದಂತೆ 7 ಮಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಲಕ್ಷ್ಮಿ ಅವರು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಇದೀಗ ತನ್ನ ಮೊಮ್ಮಗಳೊಂದಿಗೆ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪೂರ್ಣಿಮಾ, ಸೋಮಣ್ಣ ಸೇರಿದಂತೆ 7 ಮಂದಿ ನಮ್ಮ ಮಕ್ಕಳು ಓದಿಲ್ಲ. ಆದ್ದರಿಂದ ನೀನು ಕೂಡ ಮುಂದೆ ಓದಬಾರದು. ನೀನೇನಾದರೂ ಪರೀಕ್ಷೆ ಬರೆದಲ್ಲಿ ನಿನ್ನ ಮೇಲೆ ಲಾರಿ ಹತ್ತಿಸಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಅಲ್ಲದೇ ಘಟನೆ ನಡೆದಿರುವುದನ್ನು ವಿವರಿಸಿ ನಾನೇ ದೂರು ಬರೆದು ಕೊಡುವುದಾಗಿ ತಿಳಿಸಿದರೂ ಅದಕ್ಕೆ ಒಪ್ಪದ ಪೊಲೀಸರು ಅವರಿಗೆ ಬಂದಂತೆ ಪ್ರಕರಣ ದಾಖಲಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೇ ನನ್ನ ವಿದ್ಯಾಭ್ಯಾಸ ಸ್ಥಗಿತಗೊಳಿಸುವಂತೆ ಬೆದರಿಕೆ ಹಾಕಿ ಹಲ್ಲೆ ನಡೆಸಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮಾ.22ರಿಂದ ಅದ್ದೂರಿ ಗರಳಾಪುರಿ ಉತ್ಸವ

ನಂಜನಗೂಡು, ಮಾ.2– ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸವದ ಅಂಗವಾಗಿ ನಗರದಲ್ಲಿ ಮಾ.22ರಿಂದ 29ರವರೆಗೆ ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ನಂಜನಗೂಡಿನ ಐತಿಹಾಸಿಕ ಪರಂಪರೆ ಬಿಂಬಿಸುವ ಅದ್ದೂರಿ ಗರಳಾಪುರಿ ಉತ್ಸವ ನಡೆಸಲು ತೀರ್ಮಾನಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಗರಳಾಪುರಿ ಉತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಹಂಪಿ ಉತ್ಸವ, ಕರಗ ಉತ್ಸವ, ಕನಕಪುರದ ಕನಕೋತ್ಸವ ಮಾದರಿ ಇಲ್ಲಿ ಗರಳಾಪುರಿ ಉತ್ಸವ ನಡೆಸಲಾಗುವುದು. ಆ ಮೂಲಕ ಸ್ಥಳೀಯ ಕಲಾವಿದರ ಕಲೆ ಪ್ರೋತ್ಸಾಹಿಸಲಾಗುವುದು. ಅಲ್ಲದೇ ನಂಜನಗೂಡಿನ ಪರಂಪರೆ, ಐತಿಹಾಸಿಕ ಹಿನ್ನೆಲೆಯನ್ನು ಜನರಿಗೆ ತಿಳಿಸಿ ಅರಿವು ಮೂಡಿಸುವ ಉದ್ದೇಶದಿಂದ ಈ ಉತ್ಸವ ಏರ್ಪಡಿಸಲಾಗಿದೆ. ಅಲ್ಲದೇ ಇಂತಹ ಉತ್ಸವಗಳಿಂದ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ನಡುವೆ ಬಾಂಧವ್ಯ, ಪ್ರೀತಿ, ವಿಶ್ವಾಸ, ಬೆಳೆಸಲು ಸಹಕಾರಿಯಾಗಲಿದೆ ಎಂದರು.

ಮಾ.22ರಂದು ಬೆಳಗ್ಗೆ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಯೋಗಪಟುಗಳಿಂದ ಯೋಗ ತರಬೇತಿ ಶಿಬಿರದ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಗುವುದು. ಮಧ್ಯಾಹ್ನ ನಗರದ ಸಿಟಿಜನ್ ಶಾಲೆ ಆವರಣದಲ್ಲಿ ಚದುರಂಗ ಸ್ಪರ್ಧೆ ನಡೆಯಲಿದೆ. ಮಾ.23ರಂದು ಜಾನಪದ ಗಾಯನ ಸ್ಪರ್ಧೆ, ಮಾ.24ರಂದು ಎಲ್ಲಾ ವಯೋಮಿತಿ ಮತ್ತು ವಿದ್ಯಾರ್ಥಿಗಳಿಗಾಗಿ ವಚನ ಕಂಠಪಾಠ ಸ್ಪರ್ಧೆ, ಮಾ.25ರಂದು ಕೇಶವಿನ್ಯಾಸ ಸ್ಪರ್ಧೆ ಮತ್ತು ವಿದ್ಯಾರ್ಥಿಗಳಿಗಾಗಿ ವೇಷ ಭೂಷಣ ಸ್ಪರ್ಧೆ, ಮಾ.26ರಂದು ಉತ್ತಮ ಸಾಮಾಜಿಕ ಸಂದೇಶವುಳ್ಳ ರೀಲ್ಸ್ ಸ್ಪರ್ಧೆ, ಮಾ.27ರಂದು ಗ್ಯಾರಂಟಿ ಅನುಷ್ಠಾನ ಸಮಿತಿಯಿಂದ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಮಾ.28ರಂದು ಮೆಹಂದಿ ಸ್ಪರ್ಧೆ ನಡೆಸಲಾಗುವುದು. ಸಾರ್ವಜನಿಕರಲ್ಲಿ ಆರೋಗ್ಯ ಮತ್ತು ಸಾಮಾಜಿಕ ಜಾಗೃತಿ ಮೂಡಿಸುವ ಸಲುವಾಗಿ ಮಾ.29ರಂದು ಬೆಳಗ್ಗೆ 'ಆರೋಗ್ಯಕರ ನಾಳೆಗಾಗಿ ಒಂದಾಗಿ ನಡೆಯೋಣ' ಎಂಬ ಶೀರ್ಷಿಕೆ ಅಡಿ ವಾಕಥಾನ್ ನಡಿಗೆ, ಸಂಜೆ ನಗರದ ವಿದ್ಯಾವರ್ಧಕ ಮೈದಾನದಲ್ಲಿ ಭರತನಾಟ್ಯ, ವೀಣೆ ನುಡಿಸುವ ಕಾರ್ಯಕ್ರಮ ಸೇರಿದಂತೆ ಸಮಾರೋಪ ಸಮಾರಂಭ ನಡೆಸಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಲಾಗುವುದು ಎಂದರು.

ತಾಪಂ ಮಾಜಿ ಅಧ್ಯಕ್ಷ ಬಿ.ಎಂ. ನಾಗೇಶ್ ರಾಜ್ ಮಾತನಾಡಿದರು. ಪೂರ್ವಭಾವಿ ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ವಿಧಾನಸಭಾ ಉಸ್ತುವಾರಿ ಸೋಮೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಪ್ರಥಮ ದರ್ಜೆ ಗುತ್ತಿಗೆದಾರ ಯು.ಎನ್.ಪದ್ಮನಾಭರಾವ್, ಕೃಷ್ಣಪ್ಪ, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಮುಖಂಡರಾದ ಗೋವಿಂದರಾಜು, ಜಿ.ಬಸವರಾಜು, ಕಳಲೆ ಮಹೇಶ್, ರಾಜೇಶ್, ನಗರಸಭೆ ಮಾಜಿ ಸದಸ್ಯ ಎಸ್.ಪಿ. ಮಹೇಶ್, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ಮಹೇಶ್ ಸೇರಿದಂತೆ ಇತರರಿದ್ದರು.



ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಹೆರಿಗೆಗೆ ಹಣ ವಸೂಲಿ ಮಾಡಿದರೇ ಲೋಕಾಯುಕ್ತಕ್ಕೆ ದೂರು

ಕೆಡಿಪಿ ಸಭೆಯಲ್ಲಿ ಡಾ.ಪೂರ್ಣಿಮಾಗೆ ಶಾಸಕ ಅನಿಲ್ ಚಿಕ್ಕಮಾದು ಎಚ್ಚರಿಕೆ

ಹೆಚ್.ಡಿ.ಕೋಟೆ, ಮಾ.2– ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಲು 13 ಸಾವಿರ ರೂ. ನಿಗದಿ ಮಾಡಿರುವ ಸಂಬಂಧ ಸಾರ್ವಜನಿಕರಿಂದ ಆರೋಪಗಳು ಕೇಳಿ ಬಂದಿದ್ದು, ಈ ಸಂಬಂಧ ನಿಮ್ಮ ವಿರುದ್ಧ ನಾನೇ ಲೋಕಾಯುಕ್ತಕ್ಕೆ ದೂರು ನೀಡುತ್ತೇನೆ ಎಂದು ಆಸ್ಪತ್ರೆ ವೈದ್ಯಾಧಿಕಾರಿ ಪೂರ್ಣಿಮಾ ಅವರಿಗೆ ಶಾಸಕ ಅನಿಲ್ ಎಚ್ಚರಿಕೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದಲ್ಲಿ ಸುಸಜ್ಜಿತ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆ ಇದೆ. ಇಲ್ಲಿ ಹೆರಿಗೆ ಮಾಡಿಸಲು 13 ಸಾವಿರ ರೂ. ನಿಗದಿ ಮಾಡಿ ಹಣ ಪಡೆಯುತ್ತಿರುವ ಬಗ್ಗೆ ಹಾಗೂ ಅಲ್ಲದೇ ರಾತ್ರಿ ವೇಳೆ ವೈದ್ಯಾಧಿಕಾರಿಗಳು ಆಸ್ಪತ್ರೆಯಲ್ಲಿ ಇರುವುದಿಲ್ಲ. ಆಸ್ಪತ್ರೆಯಲ್ಲಿ ಔಷಧ ವಿತರಿಸದೇ ಮೆಡಿಕಲ್ ಸ್ಟೋರ್‌ಗಳಿಗೆ ಚೀಟಿ ಬರೆಯುತ್ತಿರುವ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಕೇಳಿ ಬರುತ್ತಿವೆ. ವ್ಯವಸ್ಥೆ ಹೀಗಾದರೇ ಆಸ್ಪತ್ರೆಗೆ ಆಗಮಿಸುವ ಬಡವರು ಏನು ಮಾಡಬೇಕು ಎಂದು ಪ್ರಶ್ನಿಸಿದ ಅವರು, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯಬಾರದು. ಮರುಕಳಿಸಿದರೇ ನಾನೇ ಖುದ್ದಾಗಿ ನಿಮ್ಮ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡುತ್ತೇನೆ ಎಂದರು.



ಹೆಚ್.ಡಿ.ಕೋಟೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿದರು.

> ತಾಲೂಕಿನಲ್ಲಿ ಬಡವರು ಮನೆ ನಿರ್ಮಿಸಿಕೊಂಡಿದ್ದು ಅವರಿಗೆ ಇನ್ನೂ ಕೂಡ ಹಕ್ಕುಪತ್ರ ವಿತರಿಸಿಲ್ಲ. ಕಾಡಂಚಿನಲ್ಲಿ ವಾಸಿಸುವ ಗಿರಿಜನರ ಮಕ್ಕಳ ಶಿಕ್ಷಣಕ್ಕೆ ಅಂಗನವಾಡಿ, ಶಾಲಾ ಕಟ್ಟಡ ನಿರ್ಮಿಸಲು ಅರಣ್ಯ ಇಲಾಖೆಯಿಂದ ಅಡ್ಡಿಯಾಗಿರುವ ಬಗ್ಗೆ ಕೋಟೆ, ಸರಗೂರು ತಹಸೀಲ್ದಾರ್‌ಗಳು ಸರ್ವೇ ಅಧಿಕಾರಿಗಳೊಡನೆ ಪರಿಶೀಲಿಸಿ ಕ್ರಮ ಕೈಗೊಳ್ಳಿ
> – ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ.

ಇದಕ್ಕೆ ಪ್ರತಿಕ್ರಿಯಿಸಿದ ಡಾ.ಪೂರ್ಣಿಮಾ, ಆಸ್ಪತ್ರೆಯಲ್ಲಿ ಇಂತಹ ಘಟನೆಗಳು ನಡೆದಿಲ್ಲ. ಈ ಬಗ್ಗೆ ಗಮನ ಹರಿಸುತ್ತೇನೆ ಎಂದರು.

ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಗಾಂಜಾ, ಡ್ರಗ್ಸ್, ಕೇರಳ ಲಾಟರಿ, ಜೂಜಾಟ ಪ್ರಕರಣಗಳು ಹೆಚ್ಚಾಗುತ್ತಿದ್ದು, ಯುವ ಸಮುದಾಯ ದಾರಿ ತಪ್ಪುತ್ತಿದ್ದಾರೆ. ಇವುಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ವಿಫಲವಾಗಿದೆ. ಈ ವಿಚಾರವಾಗಿ ಸಿಪಿಐ ಗಂಗಾಧರ್ ಮತ್ತು ಪ್ರಸನ್ನಕುಮಾರ್ ದಕ್ಷತೆಯಿಂದ ಕಾರ್ಯ ನಿರ್ವಹಿಸುವ ಮೂಲಕ ನಿಯಂತ್ರಣಕ್ಕೆ ಮುಂದಾಗಬೇಕು ಎಂದರು.

ಸಿಪಿಐ ಗಂಗಾಧರ್ ಮಾತನಾಡಿ, ಈ ಸಂಬಂಧ ಅನೇಕ ಪ್ರಕರಣಗಳನ್ನು ಭೇದಿಸಿ, ಕ್ರಮ ಕೈಗೊಳ್ಳಲಾಗಿದೆ. ಇಂತಹ ಚಟುವಟಿಕೆಗಳನ್ನು ಅವರು ಮತ್ತೆ ಮುಂದುವರೆಸಿದರೇ ಅಂತಹವರನ್ನು ಗಡಿಪಾರು ಮಾಡಿ ರೌಡಿಶೀಟರ್ ಪಟ್ಟಿಗೆ ಸೇರಿಸಲಾಗುವುದು ಎಂದರು.

ಶಾಸಕ ಅನಿಲ್ ಮಾತನಾಡಿ, ಸಿಎಂ ಸಿದ್ದರಾಮಯ್ಯನವರು ಆದಿವಾಸಿಗಳು ವಾಸಿಸುವ ಹಾಡಿಗಳಿಗೆ ಭೇಟಿ ನೀಡಿ ಬಂದ ನಂತರ ಅಲ್ಲಿ ವಿದ್ಯುತ್ ಸಮಸ್ಯೆ ಬಗೆಹರಿದಿದೆಯೇ ಎಂದು ಚೆಸ್ಕಾಂ ಹಾಗೂ ಪ.ಪಂಗಡ ವರ್ಗಗಳ ಅಧಿಕಾರಿಗಳನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು ಸಮಸ್ಯೆ ಅರ್ಧ ಪೂರ್ಣಗೊಂಡಿದೆ. ಉಳಿದ ಕಾಮಗಾರಿ ನಡೆಯುತ್ತಿದೆ ಎಂದರು.

ಜಿಪಂ ಸಿಇಓ ಯುಕೇಶ್, ಡಿಎಫ್‌ಓ ಪರಮೇಶ್, ಕೋಟೆ, ಸರಗೂರು ತಹಸೀಲ್ದಾರರಾದ ಶ್ರೀನಿವಾಸ್, ಮೋಹನ್ ಕುಮಾರಿ, ಇಓಗಳಾದ ಧರಣೇಶ್, ಪ್ರೇಮ್ ಕುಮಾರ್, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷರಾದ ಚಾಮರಾಜ, ಚೆಲುವರಾಜು, ಕೆಡಿಪಿ ಸಮಿತಿ ಸದಸ್ಯರಾದ ಗಿರೀಶ್, ಸುರೇಶ್, ಕಾಳಸ್ವಾಮಿ, ಎಸ್‌ಐ ಚಂದ್ರಹಾಸ, ಡಾ.ರವಿಕುಮಾರ್, ಅಧಿಕಾರಿಗಳಾದ ಮಲ್ಲೇಶ್, ಸುರೇಶ್, ರಾಜು, ನಟಶೇಖರ್, ಗೋವಿಂದ ನಾಯಕ, ಅಮೃತೇಶ್, ಗಣೇಶ್, ಮಹದೇವ್, ಪ್ರಸಾದ್, ವಸಂತ್ ಕುಮಾರ್, ಪೂರ್ಣಿಮಾ, ತ್ಯಾಗರಾಜು, ಶಿವರಾಜು, ಸಿದ್ದರಾಜು, ನೇತ್ರಾವತಿ, ದೀಪ, ಶಶಿಕಲಾ, ಹರ್ಷಿತ, ಹನುಮಂತರಾಜು, ರಮೇಶ್, ಲಿಂಗರಾಜು, ಮೌನಶ್ರೀ, ಚಂದು ಕುಮಾರ್ ಇತರರಿದ್ದರು.

ವಿಜೃಂಭಣೆಯ ಶ್ರೀಕೆಂಡಗಣ್ಣೇಶ್ವರ, ಮಹದೇಶ್ವರಸ್ವಾಮಿ ಜೋಡಿ ರಥೋತ್ಸವ

ಹುಣಸೂರು, ಮಾ.2– ತಾಲೂಕಿನ ಬಿಳಿಕೆರೆ ಹೋಬಳಿ ಗದ್ದಿಗೆ ಶ್ರೀಕ್ಷೇತ್ರದಲ್ಲಿ ಶ್ರೀಕೆಂಡಗಣ್ಣೇಶ್ವರ ಹಾಗೂ ಮಹದೇಶ್ವರಸ್ವಾಮಿ ಜೋಡಿ ರಥೋತ್ಸವ ಹಾಗೂ ಕೊಂಡೋತ್ಸವ ಸಾವಿರಾರು ಭಕ್ತರ ಉದ್ಘೋಷದ ನಡುವೆ ವಿಜೃಂಭಣೆಯಿಂದ ಜರುಗಿತು.

ರಥೋತ್ಸವ ಅಂಗವಾಗಿ ಶನಿವಾರ ಮುಂಜಾನೆಯಿಂದಲೇ ದೇವಾಲಯದಲ್ಲಿ ದೇವರಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು. ನಂತರ ದೊಡ್ಡ ರಥದಲ್ಲಿ ಶ್ರೀಕೆಂಡಗಣ್ಣೇಶ್ವರಸ್ವಾಮಿ, ಚಿಕ್ಕರಥದಲ್ಲಿ ಮಹದೇಶ್ವರಸ್ವಾಮಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ ಬಳಿಕ ರಥೋತ್ಸವಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ ಚಾಲನೆ ನೀಡಿದರು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಜೈಕಾರ ಹಾಕಿ ರಥಗಳನ್ನು ಎಳೆದು ಪುನೀತರಾದರು. ಅಲ್ಲದೇ ರಥೋತ್ಸವ ವೇಳೆ ನವ ದಂಪತಿಗಳು, ಭಕ್ತರು ಹಣ್ಣು–ಜವನ ಎಸೆದು ಹರಕೆ ತೀರಿಸಿದರು. ಇದೇ ವೇಳೆ ಕರಿಮುದ್ದನಹಳ್ಳಿ ಅಕ್ಷಯ ವೆಂಚರ್ಸ್‌ನ ಅಂಬಿಕಾ ಸತೀಶ್ ಕುಟುಂಬದವರು ಭಕ್ತರಿಗೆ ಊಟದ ವ್ಯವಸ್ಥೆ ಮಾಡಿದ್ದರು.

ಕೊಂಡೋತ್ಸವ: ರಥೋತ್ಸವಕ್ಕೂ ಮುನ್ನ ದೇವಸ್ಥಾನದ ಆವರಣದ ಲಕ್ಷ್ಮಣ ತೀರ್ಥ ನದಿ ದಂಡೆಯಲ್ಲಿ ನಡೆದ ಕೊಂಡೋತ್ಸವಕ್ಕೆ ಮಾದಳ್ಳಿ ಉಕ್ಕಿನಕಂತೆ ಮಠದ ಸಾಂಬ ಸದಾಶಿವಸ್ವಾಮೀಜಿ ಚಾಲನೆ ನೀಡಿದರು. ಈ ವೇಳೆ ಭಕ್ತರು ಕೆಂಡಗಣ್ಣೇಶ್ವರಸ್ವಾಮಿ ಮತ್ತು ಮಹದೇಶ್ವರಸ್ವಾಮಿಗೆ ಉಘೇ..ಉಘೇ.. ಎಂಬ ಜಯಘೋಷಗಳ ನಡುವೆ ಅರ್ಚಕ ಮಹದೇವಸ್ವಾಮಿ ಅವರ ಪುತ್ರ ಮಹೇಶ್ ಕೊಂಡ ಹಾಯ್ದರು. ನಂತರ ಭಕ್ತರು ಅರಳು, ವಿವಿಧ ಧಾನ್ಯಗಳು, ಉಪ್ಪು, ಗಂಧದಕಡ್ಡಿ, ಕರ್ಪೂರವನ್ನು ಕೊಂಡಕ್ಕೆ ಸಮರ್ಪಿಸಿದರು. ಹರಕೆ ಹೊತ್ತವರು ಜಾನುವಾರುಗಳನ್ನು ಕೊಂಡದ ಸುತ್ತ ಪ್ರದಕ್ಷಿಣೆ ಹಾಕಿಸಿ ಹರಕೆ ತೀರಿಸಿದರು. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಶಾಸಕ ಜಿ.ಡಿ.ಹರೀಶ್ ಗೌಡರ ಪತ್ನಿ ವರ್ಷ ಹರೀಶ್‌ಗೌಡ ದೇವರ ದರ್ಶನ ಪಡೆದರು. ಬಸವಾಪಟ್ಟಣದ ತೊಟ್ಟಿಮನೆ ಸಹೋದರರ ಕುಟುಂಬ ವರ್ಗ, ದೇವಸ್ಥಾನದ ಮಹದೇವಪ್ಪ, ಪುಣ್ಯಶೀಲ, ಉದ್ಯಮಿ ರಾಜು, ಜಿಲ್ಲಾ ರೈತ ಘಟಕದ ಮಾಜಿ ಅಧ್ಯಕ್ಷ ವಸಂತ್ ಕುಮಾರ್, ಗ್ರಾಪಂ ಸದಸ್ಯ ಪ್ರಕಾಶ್ ಇನ್ನಿತರರಿದ್ದರು.



ಹೊಸ ಹೆಮ್ಮಿಗೆಯಲ್ಲಿ ಎನ್‌ಎಸ್‌ಎಸ್ ವಿಶೇಷ ಶಿಬಿರ

ತಲಕಾಡು, ಮಾ.2– ಎನ್‌ಎಸ್‌ಎಸ್ ಶಿಬಿರದ ಮೂಲಕ ಗ್ರಾಮವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಎಲ್ಲರೂ ಒಗ್ಗೂಡಿ ಶ್ರಮಿಸಬೇಕು ಎಂದು ತಾಲೂಕು ಬಗರ್ ಹುಕುಂ ಸಮಿತಿ ಅಧ್ಯಕ್ಷ ಹೆಚ್.ವಿ.ಶೇಷಾದ್ರಿ ತಿಳಿಸಿದರು.

ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ತಾಲೂಕಿನ ಹೊಸ ಹೆಮ್ಮಿಗೆ ಗ್ರಾಮದಲ್ಲಿ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಲಕಾಡು ಕಾಲೇಜಿನ ವಿದ್ಯಾರ್ಥಿಗಳು ನಮ್ಮ ಗ್ರಾಮಕ್ಕೆ ಆಗಮಿಸಿ ಸ್ವಚ್ಛತಾ ಕಾರ್ಯ ಕೈಗೊಂಡಿರುವುದು ಶ್ಲಾಘನೀಯ. ಅವರಿಗೆ ನಾವು ಸಂಪೂರ್ಣವಾಗಿ ಸಹಕರಿಸಬೇಕು. ಇಂತಹ ಕಾರ್ಯಕ್ರಮಗಳಿಂದ ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎಂದರು.

ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಎಸ್. ರವಿಕುಮಾರ್ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಆಶಯಗಳನ್ನು ಅನುಷ್ಠಾನಗೊಳಿಸಿ ಗ್ರಾಮಗಳ ಉದ್ಧಾರಕ್ಕಾಗಿ ಮತ್ತು ಯುವಜನರ ವ್ಯಕ್ತಿತ್ವ ವಿಕಸನಕ್ಕಾಗಿ ಎನ್‌ಎಸ್‌ಎಸ್ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ವಸಂತರಾಜು, ಎನ್‌ಎಸ್‌ಎಸ್ ಶಿಬಿರಗಳಿಂದ ಗ್ರಾಮಗಳ ಅಭಿವೃದ್ಧಿ ಮತ್ತು ಯುವಕರ ವ್ಯಕ್ತಿತ್ವ ವಿಕಸನ ಸಾಧ್ಯ ಎಂದರು. ಈ ವೇಳೆ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ನರಸಿಂಹಮಾದನಾಯಕ, ಯಜಮಾನ ಚಿನ್ನಸ್ವಾಮಿ, ಗ್ರಾಪಂ ಉಪಾಧ್ಯಕ್ಷ ಸಿ.ಸೋಮಣ್ಣ, ಸರ್ಕಾರಿ ಶಾಲೆ ಮುಖ್ಯೋಪಾಧ್ಯಾಯ ಟಿ.ಎಸ್. ನಾಗೇಂದ್ರ, ಸಹ ಶಿಬಿರಾಧಿಕಾರಿ ಚಲುವರಾಜು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಶಿಬಿರವನ್ನು ತಾಲೂಕು ಬಗರ್ ಹುಕುಂ ಸಮಿತಿ ಅಧ್ಯಕ್ಷ ಶೇಷಾದ್ರಿ ಉದ್ಘಾಟಿಸಿದರು.

ಒಳ ಮೀಸಲಾತಿಯಲ್ಲಿ ಅನ್ಯಾಯ ವಿರೋಧಿಸಿ

ಬಲಗೈ ಸಮುದಾಯಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ

ತಿ.ನರಸೀಪುರ, ಮಾ.2– ಒಳ ಮೀಸಲಾತಿಯಲ್ಲಿ ಪ.ಜಾತಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವವರೆಗೆ ಹಿಂದಿನ ಮೀಸಲಾತಿಯನ್ನೇ ಮುಂದುವರೆಸಬೇಕು ಹಾಗೂ ಪ್ರವರ್ಗ–ಎ, ಬಿ, ಸಿ ಪ್ರಮಾಣ ಪತ್ರಗಳನ್ನು ನೀಡದೆ ಹಳೆ ಜಾತಿ ಪ್ರಮಾಣ ಪತ್ರವನ್ನು ನೀಡಿ ಅದನ್ನೇ ಪುರಸ್ಕರಿಸಬೇಕೆಂದು ಒತ್ತಾಯಿಸಿ ತಾಲೂಕು ಬಲಗೈ ಸಮುದಾಯಗಳ (ಹೊಲೆಯ) ಒಕ್ಕೂಟದ ಸದಸ್ಯರು ಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದ ಬಳಿ ಜಮಾಯಿಸಿದ ಬಲಗೈ ಸಮುದಾಯದ ನೂರಾರು ಸದಸ್ಯರು ಅಲ್ಲಿಂದ ಮೆರವಣಿಗೆ ಹೊರಟು ಮಾರುಕಟ್ಟೆ ರಸ್ತೆ, ಲಿಂಕ್ ರಸ್ತೆ, ಕಾಲೇಜು ರಸ್ತೆ ಮೂಲಕ ತಾಲೂಕು ಆಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರ, ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ನಾವು ಯಾರ ಮೀಸಲಾತಿ ಕಿತ್ತುಕೊಂಡು, ಮತ್ತೊಬ್ಬರನ್ನು ತುಳಿದು ಬದುಕುತ್ತಿಲ್ಲ. ನಮ್ಮ ಸಮುದಾಯ ಅವರ ಅರ್ಹತೆ, ಶೈಕ್ಷಣಿಕ ಸಾಧನೆ ಆಧಾರದ ಮೇಲೆ ಉದ್ಯೋಗಗಳನ್ನು ಪಡೆದಿದ್ದಾರೆ. ಒಳ ಮೀಸಲಾತಿ ಪ್ರಸ್ತಾವನೆ ಮಾಡಿದ ವೇಳೆ ನಾವು ಮಾತನಾಡಲಿಲ್ಲ. ಇದೀಗ ರಾಜ್ಯದಲ್ಲಿ ಪ.ಜಾತಿಯಲ್ಲಿ 101 ಜಾತಿಗಳ ಒಳಮೀಸಲಾತಿ ವಿಚಾರವು ಗೊಂದಲದ ಗೂಡಾಗಿದೆ. ಹೈಕೋರ್ಟ್ ಒಳ ಮೀಸಲಾತಿ ನೀಡಬಹುದೆಂದು ಹೇಳಿದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಒಳ ಮೀಸಲಾತಿ ವರ್ಗೀಕರಣಕ್ಕೆ ಆಯೋಗ ರಚಿಸಿತು. ಆಯೋಗವು ಪರಿಶಿಷ್ಟ 101 ಜಾತಿಗಳನ್ನು ಎ,ಬಿ,ಸಿ,ಡಿ,ಇ ಎಂದು 5 ವರ್ಗಗಳಾಗಿ ವಿಂಗಡಿಸಿ ವರದಿ ನೀಡಿತು ಎಂದರು.


ಈ ವರ್ಗೀಕರಣ ಅವೈಜ್ಞಾನಿಕವೆಂದು ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸರ್ಕಾರ ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಂಡು 5 ಗುಂಪುಗಳನ್ನು 3 ಗುಂಪುಗಳಾಗಿ ಪ್ರವರ್ಗ–ಎ, ಪ್ರವರ್ಗ–ಬಿ, ಪ್ರವರ್ಗ–ಸಿ ಎಂದು ವಿಂಗಡಿಸಿ 6:6:5ರ ಅನುಪಾತದಲ್ಲಿ ಒಳಮೀಸಲಾತಿ ನೀಡಲು ಮುಂದಾಗಿ ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಪಾಸ್ ಮಾಡಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿತು. ಇದರಲ್ಲಿನ ಗೊಂದಲ ಮತ್ತು ರಾಜ್ಯ ನ್ಯಾಯಾಲಯದಲ್ಲಿನ ಪ್ರಕರಣ ಎರಡನ್ನೂ ಗಮನಿಸಿ ರಾಜ್ಯಪಾಲರು ಈ ಮಸೂದೆಗೆ ಸಹಿ ಮಾಡದೇ ಹಾಗೆಯೇ ಉಳಿಸಿದ್ದರು. ಈ ನಡುವೆ ಸರ್ಕಾರವು ರೋಸ್ಟರ್ ಬಿಂದುವನ್ನು ಸಿದ್ಧಪಡಿಸಿ ಆದೇಶ ಹೊರಡಿಸಿತು. ಈ ರೋಸ್ಟರ್ ಬಿಂದುವಿನಲ್ಲಿ ಪರಿಶಿಷ್ಟರ ಬಲಗೈ ಸಂಬಂಧಿತ ಜಾತಿಗಳ ಪ್ರವರ್ಗ–ಬಿ 9ನೇ ಸ್ಥಾನಕ್ಕೆ ಹಾಗೂ ಪ್ರವರ್ಗ–ಸಿ 5ನೇ ಸ್ಥಾನಕ್ಕೆ ಕಳುಹಿಸುವ ಮೂಲಕ ಈ ಎರಡೂ ವರ್ಗಗಳನ್ನು ಮೀಸಲಾತಿ ಪ್ರಕ್ರಿಯೆಯಿಂದಲೇ ಹೊರಹಾಕುವ ಹುನ್ನಾರವನ್ನು ಈ ಸರ್ಕಾರ ಕೈಗೊಂಡಿರುವುದು ದುರಾದೃಷ್ಟಕರ. ಹಾಗಾಗಿ ಈ ಒಳಮೀಸಲಾತಿ ವರ್ಗೀಕರಣದಲ್ಲಿ ಪ.ಜಾತಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಈ ಕೂಡಲೇ ಸರಿಪಡಿಸಬೇಕು. ಇದನ್ನು ಸರಿಪಡಿಸುವ ತನಕ ಒಳಮೀಸಲಾತಿ ಜಾರಿಗೊಳಿಸಬಾರದು. ಅಲ್ಲಿವರೆಗೂ ದೃಢೀಕರಣ ಪತ್ರಗಳನ್ನು ಹಿಂದಿನ ಮಾದರಿಯಲ್ಲಿಯೇ ನೀಡಬೇಕೆಂದು ಬಲಗೈ ಸಮುದಾಯದ ಒಳ ಮೀಸಲಾತಿ ಹೋರಾಟ ಸಮಿತಿ ಒತ್ತಾಯಿಸುತ್ತದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್. ಲಿಂಗಪ್ಪಾಜಿ, ಆಲಗೂಡು ಚಂದ್ರಶೇಖರ್, ಮಂಜು, ಮೂಗೂರು ಸಿದ್ದರಾಜು, ಶಿವಕುಮಾರ್, ಪುಟ್ಟಮಲ್ಲಯ್ಯ, ಮಾದಾಪುರ ಬಸವರಾಜು, ಕನ್ನಹಳ್ಳಿ ಲಕ್ಷ್ಮಣ್, ಶಿವಕುಮಾರ್, ಮಾವಿನಹಳ್ಳಿ ರಾಜೇಶ್, ತುಂಬಲ ಗವಿಸಿದ್ದಯ್ಯ, ಕುಕ್ಕೂರು ರಾಜು, ನಿಲಸೋಗೆ ಬಸವರಾಜು, ತ್ರಿವೇಣಿ ನಗರ ಮಹದೇವಮ್ಮ, ದೊಡ್ಡೇಬಾಗಿಲು ಮಹದೇವಣ್ಣ, ಕೊಳತ್ತೂರು ಸೋಮಣ್ಣ, ಸೋಮನಾಥಪುರ ಗಣೇಶ್, ಯಡದೊರೆ ಪ್ರಕಾಶ್, ಧರ್ಮ ರತ್ನಾಕರ, ಬನ್ನಹಳ್ಳಿ ಹುಂಡಿ ಪುಟ್ಟಸ್ವಾಮಿ, ಸಾಮ್ರಾಟ್ ಸುಂದರೇಶನ್, ವಕೀಲರ ಸಂಘದ ಬಲಗೈ ಮುಖಂಡರು ಹಾಜರಿದ್ದರು.



ತಿ.ನರಸೀಪುರದಲ್ಲಿ ಬಲಗೈ ಸಮುದಾಯಗಳ ಒಕ್ಕೂಟದ ಸದಸ್ಯರು ಬೃಹತ್ ಪ್ರತಿಭಟನೆ ನಡೆಸಿದರು.

2028ರಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ



ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡವರನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಪಕ್ಷಕ್ಕೆ ಬರಮಾಡಿಕೊಂಡರು.

ಕೆ.ಆರ್.ನಗರ, ಮಾ.2– ಮುಂಬರುವ 2028ಕ್ಕೆ ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ದೆಗ್ಗನಹಳ್ಳಿ ಗ್ರಾಮದ ಕುರುಬ ಸಮುದಾಯ ಸುಮಾರು 25ಕ್ಕೂ ಹೆಚ್ಚು ಯುವಕರು, ಮುಖಂಡರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡ ಹಿನ್ನೆಲೆಯಲ್ಲಿ ಅವರಿಗೆ ಪಕ್ಷದ ಶಾಲು ಹೊದಿಸಿ, ಬಾವುಟ ನೀಡಿ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ಆಡಳಿತ ಟೀಕಿಸಿದರು. ಅಲ್ಲದೇ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಜೆಡಿಎಸ್ ಕಾರ್ಯಕರ್ತರು ಸೈನಿಕರಂತೆ ತುದಿಗಾಲಲ್ಲಿ ನಿಂತಿದ್ದಾರೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷವಾದರೂ, ಸರ್ಕಾರ ಗ್ಯಾರಂಟಿ ಯೋಜನೆಗಳಲ್ಲಿಯೇ ಮುಳುಗಿದ್ದು, ಅಭಿವೃದ್ಧಿ ಶೂನ್ಯವಾಗಿದೆ. ಗ್ರಾಮೀಣ ಭಾಗದ ಅಭಿವೃದ್ಧಿಯನ್ನು ಸಂಪೂರ್ಣ ಮರೆತಿರುವ ಸರ್ಕಾರ ಕೇವಲ ತಮ್ಮ ಪಕ್ಷದ ಪ್ರಣಾಳಿಕೆಯ 5 ಗ್ಯಾರಂಟಿ ಯೋಜನೆಗಳನ್ನು ಮಾತ್ರ ಗುಣಗಾನ ಮಾಡುತ್ತಿದ್ದು, ಎಲ್ಲಾ ಅಭಿವೃದ್ಧಿ ಕಾಮಗಾರಿಗಳಿಗೂ ಹಿನ್ನಡೆಯಾಗಿದೆ. ಇದರಿಂದ ಗ್ರಾಮೀಣ ಭಾಗದಲ್ಲಿ ಭಾರೀ ಜನಾಕ್ರೋಶ ವ್ಯಕ್ತವಾಗುತ್ತಿದೆ. ಕಾಂಗ್ರೆಸ್ ಪಕ್ಷ ದಲಿತರಿಗೆ ಮೀಸಲಿಟ್ಟ 20 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿದೆ. ಗ್ರಾಪಂಗಳಿಗೆ ಒಂದೇ ಒಂದು ಆಶ್ರಯ ಮನೆ ನೀಡಿಲ್ಲ. ಇದರಿಂದಾಗಿ ಗ್ರಾಪಂ ಸದಸ್ಯರು ಸರ್ಕಾರದ ವಿರುದ್ಧ ಹಿಡಿಶಾಪ ಹಾಕಿ ತಮ್ಮ 5 ವರ್ಷದ ಅಧಿಕಾರದಿಂದ ಇಳಿಯುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ದೆಗ್ಗನಹಳ್ಳಿ ಗ್ರಾಮದ ನಿವಾಸಿಗಳಾದ ನಂಜೇಗೌಡ, ಯೋಗೇಶ್, ಸಂತೋಷ್, ವಿನೋದ್, ಡಿ.ಎಂ.ಮನು, ದಿಲೀಪ, ಕಾರ್ತಿಕ್, ಮಂಜು, ತಿಲಕ್, ಶಿವರಾಜು, ಮನುಗೌಡ, ನಂಜುಂಡ, ಚೇತನ್, ಸಿದ್ದೇಗೌಡ, ಅರುಣ, ಯೋಗೇಶ್ ಜೆಡಿಎಸ್‌ಗೆ ಸೇರ್ಪಡೆಗೊಂಡು ಮಾತನಾಡಿ, ನಮ್ಮ ಗ್ರಾಮದಲ್ಲಿ ಕುರುಬ ಸಮುದಾಯ ಮಾತ್ರವಿದ್ದು, ಕಾಂಗ್ರೆಸ್ ಬೆಂಬಲಿಸುತ್ತಾ ಡಿ.ರವಿಶಂಕರ್ ಅವರಿಗೆ ಮತ ಹಾಕಿದ್ದೇವು. ಆದರೆ ಅವರು ಗ್ರಾಮದ ಅಭಿವೃದ್ಧಿಗೆ ಮುಂದಾಗಲಿಲ್ಲ. ಇದರಿಂದ ಬೇಸತ್ತು ಜೆಡಿಎಸ್ ಸೇರ್ಪಡೆಗೊಂಡಿದ್ದೇವೆ ಎಂದರು.

ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗೆರೆ ಕುಚೇಲ, ಜೆಡಿಎಸ್ ಮುಖಂಡ ಚಿಕ್ಕಕೊಪ್ಪಲು ಲೋಕೇಶ್, ಜೆಡಿಎಸ್ ಮುಖಂಡರಾದ ಭಾಸ್ಕರ್, ಸತ್ಯನಾರಾಯಣ, ವಿಶ್ವನಾಥ್, ಬಾಬು, ಸುನೀಲ್ ಇತರರಿದ್ದರು.

ಮೈಸೂರು ಮಿತ್ರ

ಮಂಗಳವಾರ 3 ಮಾರ್ಚ್ 2026

ಇ-ಸ್ವತ್ತು 2.0 ತಂತ್ರಾಂಶದಡಿ ರಾಜ್ಯದಲ್ಲಿ 1,14,907 ಅರ್ಜಿ ವಿಲೇವಾರಿ

● ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ● 1,38,470 ಅರ್ಜಿ ಸ್ವೀಕೃತ; 23,563 ಬಾಕಿ ಇವೆ ● ಬಡಾವಣೆ, ಅಪಾರ್ಟ್‌ಮೆಂಟ್‌ಗಳಿಗೂ ಗ್ರಾಪಂ ಹಂತದಲ್ಲೇ ಅನುಮೋದನೆ



ಬೆಂಗಳೂರು, ಮಾ. 2(ಕೆಎಂಶಿ)- ಇ-ಸ್ವತ್ತು 2.0 ತಂತ್ರಾಂಶದಡಿ ರಾಜ್ಯದಲ್ಲಿ 1,14,907 ಅರ್ಜಿಗಳನ್ನು ಅನುಮೋದಿಸಿ ವಿಲೇವಾರಿ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಇಂದಿಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕರಿಂದ ಇದುವರೆಗೆ ಒಟ್ಟು 1,38,470 ಅರ್ಜಿಗಳು ಸ್ವೀಕೃತವಾಗಿದ್ದು, 23,563 ಅರ್ಜಿಗಳು ಅನುಮೋದನೆಗಾಗಿ ಬಾಕಿ ಉಳಿದಿವೆ ಎಂದಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಇಲಾಖೆಯ ವಿವಿಧ ಕಾರ್ಯಕ್ರಮ ಪರಿಶೀಲಿಸಿ ಮಾತನಾಡಿದ ಅವರು, ಇ-ಸ್ವತ್ತು 2.0 ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮತ್ತು ಅರ್ಜಿಗಳ ಅನುಮೋದನೆ ಸಮಯದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿತು.

ಈ ಹಿನ್ನೆಲೆಯಲ್ಲಿ ಇ-ಸ್ವತ್ತು ತಂತ್ರಾಂಶ ನಿರ್ವಹಿಸುತ್ತಿರುವ ಕೇಂದ್ರ ಸರ್ಕಾರದ ಎನ್‌ಐಸಿ ಸಂಸ್ಥೆ ಮೂಲಕ ಉದ್ಭವಿಸಿರುವ ಇ-ಸ್ವತ್ತು 2.0 ತಂತ್ರಾಂಶದ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲು ಮತ್ತು ಉಳಿದ ಮಾಡ್ಯುಲ್‌ಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸಲು ಜನವರಿಯಲ್ಲಿ ಕೇಂದ್ರದ ಮಾಹಿತಿ ತಂತ್ರಜ್ಞಾನ ಹಾಗೂ ಎಲೆಕ್ಟ್ರಾನಿಕ್ಸ್ ಖಾತೆಯ ಸಚಿವರಿಗೆ ತಾವು ಬರೆದಿದ್ದ ಪತ್ರಕ್ಕೆ ಸಂಬಂಧಿಸಿದಂತೆ ಇ-ಸ್ವತ್ತು 2.0 ತಂತ್ರಾಂಶದಲ್ಲಿ ಬದಲಾವಣೆ ಮಾಡಿ ಕೆಲವು ಸಮಸ್ಯೆಗಳನ್ನು ಬಗೆಹರಿಸಲಾಗಿದೆ.

ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದ್ದು, ಈವರೆಗೆ 478 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 54 ಹೊಸ ಬಡಾವಣೆಗಳಿಗೆ ಗ್ರಾಮ ಪಂಚಾಯಿತಿ ಹಂತದಲ್ಲಿ ಅನುಮೋದನೆ ನೀಡಲಾಗಿದೆ ಹಾಗೂ ಹೊಸ ಬಹುಮಹಡಿ (ಅಪಾರ್ಟ್‌ಮೆಂಟ್) ಕಟ್ಟಡಗಳಿಗೆ ಅರ್ಜಿ ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ನಿಯೋಗವೊಂದು ತಮ್ಮನ್ನು ಭೇಟಿಯಾಗಿ ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್ ಫೇಸ್ ಮೂಲಕ ಅರ್ಜಿ ಸಲ್ಲಿಸುವಾಗ ತಮ್ಮ ಭಾಗದಲ್ಲಿ ಚಾಲ್ತಿಯಲ್ಲಿರುವ ಸೆಂಟ್ಸ್ ಪದ್ಧತಿಯಂತೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಕೋರಿದ್ದರು.

ಅದರಂತೆ ಗುಂಟೆ ಮತ್ತು ಸೆಂಟ್ಸ್ ಅಳತೆಯಲ್ಲಿರುವ ಭೂಮಿಯ ವಿಸ್ತೀರ್ಣವನ್ನು ಚದರ ಮೀಟರ್‌ನಲ್ಲಿ ಪರಿವರ್ತಿಸಿ, ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.

ಹೊಸದಾಗಿ ಅನುಮೋದನೆಗೊಂಡ ಆಸ್ತಿಗಳಿಗೆ ತಿದ್ದುಪಡಿ ಅವಕಾಶ ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ದರವನ್ನು ಇ-ಸ್ವತ್ತು ತಂತ್ರಾಂಶದೊಂದಿಗೆ ಸಂಯೋಜನೆ ಮಾಡುವ ಕಾರ್ಯಕ್ಕೆ ಮುಂದಿನ 10 ದಿನಗಳೊಳಗೆ ಕ್ರಮವಹಿಸಲಾಗುವುದು.

ಇ-ಸ್ವತ್ತು ತಂತ್ರಾಂಶದ ಬಳಕೆದಾರರು ಎದುರಿಸುತ್ತಿರುವ ಲಾಗಿನ್‌ನಲ್ಲಿನ ಸಣ್ಣ ಪುಟ್ಟ ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲಾಗುವುದು. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಇ-ಸ್ವತ್ತು ತಂತ್ರಾಂಶದಲ್ಲಿರುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ, ಮತ್ತಷ್ಟು ಸರಳೀಕರಿಸಲು ಕ್ರಮವಹಿಸಲಾಗುತ್ತಿದೆ.

ಅರ್ಜಿ ಸಲ್ಲಿಸಲು ಯಾವುದೇ ಕಾಲಾವಧಿ ನಿಗದಿಪಡಿಸಿಲ್ಲ. ಸಾರ್ವಜನಿಕರು ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡದೆಯೇ ತಾವಿರುವಲ್ಲಿಯೇ ತಮ್ಮ ಆಸ್ತಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಇ-ಸ್ವತ್ತು ತಂತ್ರಾಂಶದ ಮೂಲಕ ಪಡೆಯಬಹುದಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ -1 ಪ್ರದರ್ಶನ (ಕ), ಫೋರ್ತ್ ಫ್ಲೋರ್-3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಯಗ್ರೀವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ವೀರ ಕಂಬಳ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಸೂರಿ ಅಣ್ಣ (ಕ)	4 ಪ್ರದರ್ಶನಗಳು

ಸೈಬರ್ ಇಂಟೆಲಿಜೆನ್ಸ್, ಡೇಟಾ ಅನಾಲಿಟಿಕ್ಸ್

ಡಿಜಿಟಲ್ ಯುಗದ ರಕ್ಷಣೆ ಕುರಿತು ಕಾರ್ಯಾಗಾರ

ಮೈಸೂರು, ಮಾ. 2- ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಗಣಕ ವಿಜ್ಞಾನ ವಿಭಾಗ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ ಮೈಸೂರು ವಿಶ್ವವಿದ್ಯಾನಿಲಯದ ಕೆರಿಯರ್ ಹಬ್‌ನ ಆಶ್ರಯದಲ್ಲಿ ಮತ್ತು ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ ಸಹಯೋಗದೊಂದಿಗೆ ಸೈಬರ್ ಇಂಟೆಲಿಜೆನ್ಸ್ ಮತ್ತು ಡೇಟಾ ಅನಾಲಿಟಿಕ್ಸ್: ಡಿಜಿಟಲ್ ಯುಗದ ರಕ್ಷಣೆ ಕುರಿತು ಕಾರ್ಯಾಗಾರ ಆಯೋಜಿಸಲಾಗಿತ್ತು

ಮೈಸೂರು ವಿಶ್ವವಿದ್ಯಾನಿಲಯದ ಗಣಕವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಎಚ್. ಎಸ್. ನಾಗೇಂದ್ರ ಸ್ವಾಮಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಡೇಟಾ ಸೈನ್ಸ್ ಮತ್ತು ಸೈಬರ್ ಸುರಕ್ಷತೆಯ ನಡುವಿನ ನಿರ್ಣಾಯಕ ಸಂಬಂಧವನ್ನು ವರ್ತಮಾನದ ಸಂದರ್ಭದಲ್ಲಿ ಅದರ ಬಳಕೆಯ ವಿಸ್ತೃತ ದೃಷ್ಟಿಕೋನಗಳನ್ನು ತಿಳಿಸಿ ಸಮಾಜದ ಡಿಜಿಟಲ್ ಹೆಜ್ಜೆ ಗುರುತು ವಿಸ್ತರಿಸುತ್ತಿರುವಂತೆ, ಅದನ್ನು ರಕ್ಷಿಸಲು ಬಳಸುವ ತಂತ್ರಜ್ಞಾನಗಳು ಹೆಚ್ಚು ಸುಧಾರಿತ ಮತ್ತು ಹೊಂದಿಕೊಳ್ಳುವಂತಿರಬೇಕು. ಕಳೆದ ಕೆಲವು ವರ್ಷಗಳ ಸೈಬರ್ ಅಪರಾಧ' ಘಟನೆಗಳು ಮತ್ತು ಚೇತರಿಕೆಯ ಅಂಕಿಅಂಶಗಳನ್ನು ಮಂಡಿಸಿದ ಅವರು, ಮುಂದಿನ ವರ್ಷಗಳಲ್ಲಿ ಸೈಬರ್ ಅಪರಾಧಗಳ ಮಟ್ಟವು ಗಣನೀಯವಾಗಿ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಎಚ್ಚರಿಸಿದರು.

ವಿಶ್ವವಿದ್ಯಾನಿಲಯದ ಕೆರಿಯರ್ ಹಬ್‌ನ ನಿರ್ದೇಶಕ ಮತ್ತು ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಪ್ರಾಧ್ಯಾಪಕರಾದ ಪ್ರೊ. ಆರ್. ಮಹೇಶ್ ಮಾತನಾಡಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಳೆಯುತ್ತಿರುವ ಉದ್ಯೋಗಾವಕಾಶಗಳ ಬಗ್ಗೆ ವಿವರಿಸಿ ವಿದ್ಯಾರ್ಥಿಗಳು ತಮ್ಮ ವೃತ್ತಿಪರ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು RUSA 2.0 ಅನುದಾನದಂತಹ ವಿಶ್ವವಿದ್ಯಾನಿಲಯದ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಪ್ರಾಂಶುಪಾಲರಾದ ಪ್ರೊ. ಎನ್. ಭಾರತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಮಕ್ಕಳಲ್ಲಿರುವ ವಾಕ್-ಶ್ರವಣ ದೋಷ ಪತ್ತೆಗೆ 'ಸಾರಥಿ' ಸಕ್ರಿಯ

ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪೋಸ್ಟರ್ ಬಿಡುಗಡೆ; ಜಿಲ್ಲಾಡಳಿತ, ಆಯಿಷ್ ನಡುವೆ ಎಂಓಯು



ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಸೋಮವಾರ ಮಕ್ಕಳಲ್ಲಿ ವಾಕ್-ಶ್ರವಣ ದೋಷ ಪತ್ತೆಗೆ ರೂಪಿಸಿರುವ 'ಸಾರಥಿ' ಕಾರ್ಯಕ್ರಮದ ಪೋಸ್ಟರ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿದರು.

ಮೈಸೂರು, ಮಾ.2- ಜಿಲ್ಲಾಡಳಿತ ಹಾಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್) ಸಹಯೋಗದಲ್ಲಿ 'ಸಾರಥಿ' ಕಾರ್ಯಕ್ರಮದಡಿ ಜಿಲ್ಲೆಯ 3 ರಿಂದ 10 ವರ್ಷದೊಳಗಿನ ಅಂಗನವಾಡಿ ಹಾಗೂ ಪ್ರಾಥಮಿಕ ಶಾಲಾ ಮಕ್ಕಳಲ್ಲಿ ವಾಕ್ ಮತ್ತು ಶ್ರವಣ ದೋಷ ಪತ್ತೆಗೆ ಮುಂದಾಗಿದ್ದು, ಈ ಸಂಬಂಧಿತ ಪೋಸ್ಟರ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಬಿಡುಗಡೆ ಮಾಡಿದರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ವಿಶ್ವ ಶ್ರವಣ ದಿನಾಚರಣೆ ಅಂಗವಾಗಿ ಇಂದು ಮಕ್ಕಳಲ್ಲಿ ವಾಕ್ ಶ್ರವಣ ದೋಷ ಪತ್ತೆ ಹಚ್ಚುವ ಕಾರ್ಯಕ್ರಮದ ಒಪ್ಪಂದ(ಎಂಓಯು)ಕ್ಕೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಹಾಗೂ ಆಯಿಷ್ ನಿರ್ದೇಶಕಿ ಡಾ.ಪುಷ್ಪಾವತಿ ಸಹಿ ಹಾಕಿದರು. ಇದೇ ವೇಳೆ ಪೋಸ್ಟರ್ ಬಿಡುಗಡೆ ಮಾಡಿದ ಸಚಿವರು, 'ಸಾರಥಿ' ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯುಕೇಶ್ ಕುಮಾರ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ವಿಷ್ಣುವರ್ಧನ, ಆಯಿಷ್‌ನ ಸಂವಹನ ಅಸ್ವಸ್ಥತೆಗಳ ಸಾರ್ವಜನಿಕ ಶಿಕ್ಷಣ ಸಂಸ್ಥೆಯ ಡಾ. ಶ್ರೀದೇವಿ ಹಾಗೂ ಡಾ.ದೇವಿ ಮತ್ತಿತರರ ಅಧಿಕಾರಿಗಳು ಉಪಸ್ಥಿತರಿದ್ದರು.

ಶಾಲಾ ಆಧಾರಿತ ಸಂವಹನ ತೊಂದರೆಯ ಬಗ್ಗೆ ಶಿಕ್ಷಕರಿಗೆ ತರಬೇತಿ ಹಾಗೂ ಶಾಲಾ ಮಕ್ಕಳಿಗೆ ವಾಕ್ ಮತ್ತು ಶ್ರವಣ ತಪಾಸಣೆ ಮಾಡುವುದು 'ಸಾರಥಿ' ಕಾರ್ಯಕ್ರಮದ ಉದ್ದೇಶವಾಗಿದೆ. ಈ ಕಾರ್ಯಕ್ರಮದಡಿ ಈಗಾಗಲೇ ಮೊದಲ ಹಂತದಲ್ಲಿ ಮೈಸೂರು ದಕ್ಷಿಣ, ಉತ್ತರ, ನಗರ ಮತ್ತು ಗ್ರಾಮೀಣ ಶಿಕ್ಷಣ ಕ್ಷೇತ್ರಗಳ 518 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 512 ಪ್ರಾಥಮಿಕ ಶಿಕ್ಷಕರಿಗೆ ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳನ್ನು ಗುರುತಿಸುವ ಬಗ್ಗೆ ತರಬೇತಿ ನೀಡಲಾಗಿದೆ. ಎರಡನೇ ಹಂತದಲ್ಲಿ ತರಬೇತಿ ಪಡೆದ ಅಂಗನವಾಡಿ ಸಹಾಯಕರು 5057 ಮಕ್ಕಳು ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರು 8859 ಮಕ್ಕಳ ತಪಾಸಣೆ ನಡೆಸಿ, ಕ್ರಮವಾಗಿ ಶೇ.7.8ರಷ್ಟು ಹಾಗೂ ಶೇ.6.23ರಷ್ಟು ಮಕ್ಕಳಲ್ಲಿ ವಾಕ್ ಅಥವಾ ಶ್ರವಣ ದೋಷ ಇರುವುದಾಗಿ ವರದಿ ನೀಡಿದ್ದಾರೆ. ಗುರುತಿಸಿರುವ ಮಕ್ಕಳನ್ನು ತಪಾಸಣೆ ನಡೆಸಿದ ನಂತರ ವಾಕ್ ಮತ್ತು ಶ್ರವಣ ದೋಷ ಇರುವ ಮಕ್ಕಳ ನಿಖರ ಮಾಹಿತಿ ದೊರೆಯಲಿದೆ. ಬಳಿಕ ಅಗತ್ಯವಿದ್ದವರಿಗೆ ಥೆರಪಿ ಅಥವಾ ಚಿಕಿತ್ಸೆ ನೀಡಲಾಗುವುದು ಎಂದು ಆಯಿಷ್ ನಿರ್ದೇಶಕರಾದ ಡಾ.ಪುಷ್ಪಾವತಿ ತಿಳಿಸಿದ್ದಾರೆ.

'ಮರಗಣತಿ'ಯಲ್ಲಿ ಹೋಟೆಲ್ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳು ಭಾಗಿ



ಮೈಸೂರು, ಮಾ. 2- ನಗರದಲ್ಲಿ ರಾಜಕುಮಾರಿ ತ್ರಿಷಿಕಾ ಕುಮಾರಿ ಅವರ ಗಂಡಭೇರುಂಡ ಪ್ರತಿಷ್ಠಾನ, ಸಿ ಎಫ್ ಎ ಎಲ್ ಹಾಗು ಎಂ ಜಿ ಪಿ ಸಂಸ್ಥೆಗಳ ವತಿಯಿಂದ ನಡೆಯುತ್ತಿರುವ ಮರ ಗಣತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಮೈಸೂರು ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್ಮೆಂಟ್ & ಕ್ಯುಲಿನರಿ (ಎಂಐಎಚ್‌ಎಂಸಿ) ಆಡಳಿತ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಾಲೇಜಿನ ನಿರ್ದೇಶಕಿ ಶ್ರೀಮತಿ ಅರ್ಪಿತಾ ಡಿ.ವಿ. ಹಾಗೂ ಪ್ರಾಂಶುಪಾಲ ವಿಕ್ಟರ್ ಹೇಮಂತ್ ಕುಮಾರ್ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮರಗಣತಿಯಲ್ಲಿ ಪಾಲ್ಗೊಂಡಿದ್ದರು. ಕಾಲೇಜಿನ ಮುಖ್ಯ ಬಾಣಸಿಗ ಸತೀಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ತಜ್ಞರ ಮಾರ್ಗದರ್ಶನದಲ್ಲಿ ಮರಗಣತಿ ನಡೆಸಿ ವಿವರಗಳನ್ನು ದಾಖಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಲೇಜಿನ ನಿರ್ದೇಶಕಿ ಶ್ರೀಮತಿ ಅರ್ಪಿತಾ ಡಿ.ವಿ, ಮೈಸೂರಿನ ಸುಸ್ಥಿರ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ. ವಿದ್ಯಾರ್ಥಿಗಳು ಪರಿಸರ ಪ್ರಜ್ಞೆಯನ್ನು ಎಳವೆಯಲ್ಲೇ ರೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ನಮ್ಮ ಪರಿಸರ ಸಮತೋಲನಕ್ಕೆ ಮರಗಳ ರಕ್ಷಣೆ ಅತಿ ಅಗತ್ಯ. ಮೈಸೂರು ಇಲ್ಲಿನ ಪಾರಂಪರಿಕ ಮರಗಳಿಗೆ ಹೆಸರುವಾಸಿ. ಮರಗಳಿದ್ದರೆ ಬರವಿಲ್ಲ. ಮರಗಳಿದ್ದರೆ ಹವಾಮಾನ ಬದಲಾವಣೆ ತಪ್ಪಿಸಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಸೈರನ್ ಮೊಳಗುತ್ತಿದ್ದಂತೆ ಮಿಸ್ಸೈಲ್, ಬಾಂಬ್‌ಗಳ ಮಳೆಯಾಗುತ್ತಿದೆ!


ಜೀವ ಭಯದಲ್ಲಿ ಪ್ರತಿ ನಿಮಿಷ ಕಳೆಯುವುದು ಕಷ್ಟಕರವಾಗಿದೆ: ಬಹರೇನ್‌ನಲ್ಲಿರುವ ಮೈಸೂರಿನ ಲಿಂಗರಾಜು ಆತಂಕದ ಮಾತು

ಮೈಸೂರು, ಮಾ.2(ಬಿಎಲ್‌ಯು)- ಸೈರನ್ ಶಬ್ಧ ಮೊಳಗುತ್ತಿದ್ದಂತೆ ಇರಾನ್ ಪಡೆಗಳು ಬಾಂಬ್, ಮಿಸ್ಸೈಲ್‌ಗಳ ಮಳೆ ಸುರಿಸುತ್ತಿವೆ. ಸದಾ ಜೀವ ಭಯದಲ್ಲಿ ಕಾಲ ಕಳೆಯುತ್ತಿದ್ದೇವೆ.

ಯುದ್ಧಪೀಡಿತ ಬಹರೇನ್‌ನಲ್ಲಿರುವ ಮೈಸೂರಿನ ಇಟ್ಟಿಗೆಗೂಡಿನ ನಿವಾಸಿ ಕೆ.ಲಿಂಗರಾಜು, ಯುದ್ಧನೆಲೆಯ ಪರಿಸ್ಥಿತಿಯನ್ನು ಆತಂಕ, ದುಗುಡದಿಂದಲೇ ವಿವರಿಸಿದರು.

'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಸದ್ಯ ಇನ್ನೇನು ತೊಂದರೆ ಇಲ್ಲ ಎಂದು ನಿಟ್ಟುಸಿರು ಬಿಡುತ್ತಿದ್ದಂತೆ ಸೈರನ್ ಕೂಗುತ್ತದೆ. ಅದರ ಹಿಂದೆಯೇ ಮಿಸ್ಸೈಲ್‌ಗಳು ಬಂದು ಅಪ್ಪಳಿಸುತ್ತಿವೆ ಎಂದು ಹೇಳಿದರು.

ಕಳೆದ ಒಂದೂವರೆ ವರ್ಷದಿಂದ ಬಹರೇನ್‌ನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿದ್ದು, ಯುದ್ಧದ ಕಾರಣ ಗ್ರಾಹಕರು ಬರುತ್ತಿಲ್ಲ. ಯಾರೂ ಹೊರಗೆ ಓಡಾಡಬಾರದು ಎಂದು ಸರ್ಕಾರ ಆಗಾಗ್ಗೆ ಹೇಳುತ್ತಿರುವ ಕಾರಣ ಜನರ ಓಡಾಟ ಬಹಳ ಕಡಿಮೆ ಇದೆ ಎಂದರು.



ಅಮೇರಿಕಾದ ಯುದ್ಧ ನೆಲೆಗಳು ಬಹಳ ಸನಿಹದಲ್ಲಿವೆ. ಅಲ್ಲಿರುವ 8 ಯುದ್ಧ ನೆಲೆಗಳ ಮೇಲೆ ಇರಾನ್ ಮನಸ್ಸೋ ಇಚ್ಛೆ ಮಿಸ್ಸೈಲ್ ದಾಳಿ ನಡೆಸುತ್ತಿದೆ. ಅವುಗಳಲ್ಲಿ ಕೆಲವು ಗುರಿತಪ್ಪಿ ಬಹರೇನ್ ನಗರದಲ್ಲಿ ಸ್ಫೋಟಿಸುತ್ತಿವೆ ಎಂದು ಹೇಳಿದರು.

ಇದರಿಂದ ಜನರು ಭಯಭೀತರಾಗಿದ್ದಾರೆ. ಜೀವ ಭಯದಲ್ಲಿ ಸಮಯ ಕಳೆಯುತ್ತಿದ್ದಾರೆ. ಇಲ್ಲಿ ಪ್ರತಿ ನಿಮಿಷ ಕಳೆಯುವುದು ಕಷ್ಟಕರವಾಗಿದೆ. ಯಾವಾಗ, ಏನಾಗುತ್ತದೆಯೊ, ಮಿಸ್ಸೈಲ್, ಬಾಂಬ್‌ಗಳು ಇಲ್ಲಿ ಅಪ್ಪಳಿಸುತ್ತವೆಯೋ ಎಂಬ ಭಯದಲ್ಲಿ ಸಮಯ ದೂಡುತ್ತಿದ್ದೇವೆ

ಸುರಕ್ಷಿತವಾಗಿ ಇರಲು ಇಲ್ಲಿ ಬಂಕರ್‌ಗಳಿಲ್ಲ. ಆದರೆ, ಭಯಭೀತಿಗೊಳಗಾದವರು ಸರ್ಕಾರಿ ಶಾಲೆ, ಮಾಲ್‌ಗಳಲ್ಲಿ ಆಶ್ರಯ ಪಡೆಯಬಹುದು ಎಂದು ಸರ್ಕಾರ ಸಲಹೆ ನೀಡಿದೆ ಎಂದು ಲಿಂಗರಾಜು ಅಲ್ಲಿನ ಪರಿಸ್ಥಿತಿಯ ಭೀಕರತೆಯನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸಿದರು.

ಬಹರೇನ್‌ನಲ್ಲಿ ಸುಮಾರು 4 ಸಾವಿರ ಕನ್ನಡಿಗರಿದ್ದಾರೆ. ಮೈಸೂರು, ಬೆಂಗಳೂರಿನವರಿಗಿಂತ ಮಂಗಳೂರು, ಉಡುಪಿಯವರು ಹೆಚ್ಚಾಗಿದ್ದಾರೆ. ಕನ್ನಡ ಸಂಘ ಕೂಡ ಇಲ್ಲಿದೆ. ಯುದ್ಧ ಪರಿಸ್ಥಿತಿ ಕಾರಣ ಎಲ್ಲರೂ ಭಯಭೀತರಾಗಿದ್ದಾರೆ ಎಂದು ತಿಳಿಸಿದರು.

ನಮ್ಮ ಕುಟುಂಬಸ್ಥರೆಲ್ಲಾ ಮೈಸೂರಿನಲ್ಲೇ ಇದ್ದಾರೆ. ನನಗೆ ಇಲ್ಲಿನ ಸಂಪಾದನೆ, ಆದಾಯ ಏನು ಬೇಡ, ಬದುಕಿದರೆ ಸಾಕು. ಯುದ್ಧ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ತಿಳಿಯಾಗಿ ವಿಮಾನ ಹಾರಾಟ ಆರಂಭವಾದರೆ ತಕ್ಷಣ ನನ್ನ ತಾಯ್ನಾಡಿಗೆ ಬಂದು ಸೇರುತ್ತೇನೆ ಎಂದು ಆತಂಕ ತೋಡಿಕೊಂಡರು.

ಮಾ. 5ಕ್ಕೆ ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಮಾ. 2- ಮೈಸೂರು ಮಹಾಜನ ವಿದ್ಯಾಸಂಸ್ಥೆಯ ಎಸ್.ಬಿ. ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಆಂಗ್ಲಭಾಷಾ ವಿಭಾಗ ಮತ್ತು ಆಂತರಿಕ ಗುಣಮಟ್ಟದ ಭರವಸೆಕೋಶ ಸಹಯೋಗದೊಂದಿಗೆ ಮಾ. 5 ರಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ.

ಸಂಪ್ರದಾಯಗಳು ಮತ್ತು ಪರಿವರ್ತನೆಗಳ ನಡುವೆ – ಸಮಕಾಲೀನ ಭಾರತೀಯ ಸಾಹಿತ್ಯ ಮತ್ತು ಸಿನಿಮಾದಲ್ಲಿ ಮಹಿಳಾ ಧ್ವನಿ ವಿಷಯ ಕುರಿತಾಗಿ ವಿಚಾರ ಸಂಕಿರಣ ಜರುಗಲಿದೆ.

ಶಸ್ತ್ರವೈದ್ಯೆ ಹಾಗೂ ಕಾದಂಬರಿಗಾರ್ತಿ ಡಾ॥ ಕಾವೇರಿ ನಂಬಿಸನ್ ಈ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ.

ಹಿರಿಯ ಪ್ರಾಧ್ಯಾಪಕರಾದ ವಿಜಯ್ ಶೇಷಾದ್ರಿ, ಡಾ. ಎಚ್.ಕೆ ಕಲ್ಪನರಾವ್, ಡಾ. ಶಿವಲಿಂಗಸ್ವಾಮಿ ಎಚ್.ಕೆ. ಇವರುಗಳು ಸಮಗ್ರ ಅಧಿವೇಶನಗಳನ್ನು ನಡೆಸಿಕೊಡಲಿದ್ದಾರೆ. ಪ್ರಾಧ್ಯಾಪಕರಾದ ನಿರ್ಮಲ ಸಿ ಪ್ರಕಾಶ್ ಸಮಾರಂಭದ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದು ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಹಾಗೂ ವಿಚಾರ ಸಂಕಿರಣದ ಕಾರ್ಯದರ್ಶಿ ಶ್ರೀಮತಿ ಚಂದನ ಕೆ ಅವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಇಚ್ಛಿಸುವವರು ಮಾ. 5 ರಂದು ಬೆಳಗ್ಗೆ 9.00 ರಿಂದ 9.45ರ ಒಳಗಾಗಿ ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳಬಹುದೆಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಮೂರು ದಿನಗಳ ನಾಟಕೋತ್ಸವಕ್ಕೆ ಚಾಲನೆ



ಮೂರು ದಿನಗಳ ನಾಟಕೋತ್ಸವವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಉದ್ಘಾಟಿಸಿದರು.

ಮೈಸೂರು, ಮಾ.2(ಎಸ್‌ಪಿಎನ್)- ಇಂದಿನ ವಿದ್ಯಾರ್ಥಿಗಳಿಗೆ ರಂಗ ಚಟುವಟಿಕೆಗಳಲ್ಲಿ ಭಾಗಿಯಾಗಲು ಪೋಷಕರು ಪ್ರೋತ್ಸಾಹಿಸಬೇಕು ಎಂದು ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಸಲಹೆ ನೀಡಿದರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ನಾದರಂಗ ಸಂಸ್ಥೆ ಹಾಗೂ ಕನ್ನಡ, ಸಂಸ್ಕೃತಿ ನಿರ್ದೇಶನಾಲಯ ಸಹಯೋಗದೊಂದಿಗೆ ಆಯೋಜಿಸಿದ್ದ ಮೂರು ದಿನಗಳ ನಾಟಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಂಗ ಚಟುವಟಿಕೆಗಳಲ್ಲಿ ಭಾಗಿಯಾಗುವ ವಿದ್ಯಾರ್ಥಿಗಳು ಇತರೆ ಕ್ಷೇತ್ರದಲ್ಲೂ ಸಾಧನೆ ಮಾಡಬಹುದು. ರಂಗಭೂಮಿ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ವಿಕಸನಕ್ಕೆ ಉತ್ತಮ ವೇದಿಕೆ ಎಂದರು.

ನಗರ ಪ್ರದೇಶದ ಮಕ್ಕಳ ಬಾಲ್ಯ ಪೂರ್ಣ ಶಾಲೆಯಲ್ಲಿ ಕಳೆಯಬೇಕಾಗಿರುವ ಸನ್ನಿವೇಶವಿದೆ. ಇಂತಹ ಸನ್ನಿವೇಶವನ್ನು ಎದುರಿಸಲು ರಂಗಭೂಮಿ ಉತ್ತಮ ವೇದಿಕೆ. ಪ್ರಸ್ತುತ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವುದು ಅವಶ್ಯ. ಈ ಹಿನ್ನೆಲೆಯಲ್ಲಿ ರಂಗಚಳವಳಿಯನ್ನು ಮುಂದುವರೆಸಲು ಯುವಕರ ಪಾತ್ರ ದೊಡ್ಡದು ಎಂದರು.

ಮಕ್ಕಳ ವ್ಯಕ್ತಿತ್ವ, ಸೃಜನಶೀಲತೆಯನ್ನು ಪ್ರದರ್ಶಿಸಲು ರಂಗಭೂಮಿ ಸೂಕ್ತ ವೇದಿಕೆ. ಜಗತ್ತಿನ ವಿವಿಧ ದೇಶಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿವೆ. ಇದರಿಂದ ಅಮಾಯಕ ಜನರು ಜೀವ ಉಳಿಸಿಕೊಳ್ಳುವುದೇ ದೊಡ್ಡ ಸಮಸ್ಯೆಯಾಗಿದೆ. ಜಗತ್ತಿನ ಯಾವುದೇ ವಿಷಯವನ್ನು ಪ್ರಸ್ತುತ ಪಡಿಸಲು ರಂಗ ಭೂಮಿ ಸೂಕ್ತ ವೇದಿಕೆ ಎಂದು ಹೇಳಿದರು.

ಹಿರಿಯ ಕಲಾವಿದೆ ಇಂದಿರಾ ನಾಯರ್ ಮಾತನಾಡಿ, ಚಿಕ್ಕವಯಸ್ಸಿನಿಂದಲೇ ಮಕ್ಕಳು ರಂಗಭೂಮಿಯಲ್ಲಿ ತೊಡಗಿಸಿಕೊಂಡರೆ, ಮುಂದಿನ ಜೀವನ ನಡೆಸಲು ಸಹಕಾರಿಯಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಯಾವುದೇ ಕ್ಷೇತ್ರದಲ್ಲಿದ್ದರೂ ಕೌಶಲ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ರಂಗಸಮಾಜ ಸದಸ್ಯ ಎಚ್.ಎಸ್. ಸುರೇಶ್‌ಬಾಬು, ಮಹಾರಾಜ ಕಾಲೇಜಿನ ಪ್ರಾಚಾರ್ಯ ಉದಯ್‌ಶಂಕರ್, ಎಸ್.ರಾಘವೇಂದ್ರ, ವೆಂಕೋಬರಾವ್, ರಾಜೇಶ್ವರಿ ವಸ್ತ್ರಲಂಕಾರ, ಇಂಡಿಯನ್ ಥಿಯೇಟರ್ ಸಿರಿಕನ್ನಡ ಕನ್ನಡ ಬಳಗ, ರಂಗಾನಂದ ಕಲಾ ಸಂಘ ಸೇರಿದಂತೆ ಇತರೆ ಸಂಘ-ಸಂಸ್ಥೆಗಳು ಮುಖ್ಯಸ್ಥರು ಭಾಗಿಯಾಗಿದ್ದರು.

ವೇದಿಕೆ ಕಾರ್ಯಕ್ರಮದಲ್ಲಿ ರಂಗಸ್ವಾಮಿ, ಸುದರ್ಶನ್, ಕಿರಣ್ ಉಪಸ್ಥಿತರಿದ್ದರು. ಈ ವೇಳೆ ರಮೇಶ್‌ಬಾಬು, ಸುದರ್ಶನ್, ಕಿರಣ್ ನಿರ್ದೇಶನದ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನಗೊಂಡಿತು.

ಇರಾನ್ ಮೇಲೆ ಇಸ್ರೇಲ್, ಅಮೆರಿಕಾ ದಾಳಿ ಖಂಡಿಸಿ ಮೈಸೂರಲ್ಲಿ ಎಸ್‌ಯುಸಿಐ ಪ್ರತಿಭಟನೆ

ಮೈಸೂರು,ಮಾ.2(ಎಂಟಿವೈ)- ಇರಾನ್ ಮೇಲೆ ಇಸ್ರೇಲ್ ಹಾಗೂ ಅಮೆರಿಕಾದ ದಾಳಿ ಖಂಡಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ-ಕಮ್ಯೂನಿಸ್ಟ್) ಸಂಘಟನೆಯ ಕಾರ್ಯಕರ್ತರು ಮೈಸೂರಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿದ ಎಸ್‌ಯುಸಿಐ ಕಾರ್ಯಕರ್ತರು ಇರಾನ್‌ನಲ್ಲಿ ಇಸ್ರೇಲ್ ಮತ್ತು ಅಮೆರಿಕಾ ನಡೆಸಿದ ದಾಳಿಯಿಂದಾಗಿ ಮಕ್ಕಳೂ ಸೇರಿದಂತೆ ನೂರಾರು ಮಂದಿ ಸಾವನ್ನಪ್ಪಿದ್ದಾರೆ. ಇರಾನ್ ದೇಶದ ಸರ್ವೋಚ್ಚ ನಾಯಕ ಖಮೇನಿ ಮತ್ತು ಕುಟುಂಬಸ್ಥರನ್ನು ಹತ್ಯೆ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಸೈನ್ಯ ದುಬೈ, ಇಸ್ರೇಲ್, ಯುಎಇಗಳ ಮೇಲೆ ನಡೆಸಿದ ದಾಳಿಯಲ್ಲಿ ನಾಗರಿಕರು ಜೀವ ಕಳೆದುಕೊಂಡಿದ್ದಾರೆ. ಈ ಅರಬ್ ದೇಶಗಳಲ್ಲಿರುವ ಲಕ್ಷಾಂತರ ಭಾರತೀಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಯುದ್ಧದಿಂದ ಅಮಾಯಕರ ಪ್ರಾಣ ಹೋಗುತ್ತಿದೆ ಎಂದು ಕಿಡಿಕಾರಿದರು.



ಇರಾನ್ ಮೇಲೆ ಇಸ್ರೇಲ್ ಹಾಗೂ ಅಮೆರಿಕಾದ ದಾಳಿ ಖಂಡಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ-ಕಮ್ಯೂನಿಸ್ಟ್) ಸಂಘಟನೆಯ ಕಾರ್ಯಕರ್ತರು ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿದರು.

ಅಮೆರಿಕಾದ ಮಿತ್ರ ರಾಷ್ಟ್ರ ಇಸ್ರೇಲ್ ಪರಮಾಣು ಬಾಂಬ್ ಹೊಂದಿದ್ದು, ತನ್ನ ಸುತ್ತಲಿನ ಪ್ರತಿಯೊಂದು ದೇಶದ ಮೇಲೂ ಆಕ್ರಮಣ ನಡೆಸಿದೆ. ಅರಬ್ ಪ್ರದೇಶದ ತೈಲ ಸಂಪನ್ಮೂಲದ ಮೇಲೆ ಕಣ್ಣಿಟ್ಟಿರುವ ಅಮೆರಿಕಾ, ಅಲ್ಲಿನ ರಾಜಕೀಯ, ಆರ್ಥಿಕತೆಯ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸುತ್ತಲೇ ಇದೆ. ಸೌದಿ ಅರೇಬಿಯಾ, ಯುಎಇ, ಕುವೈತ್, ಕತಾರ್ ಸೇರಿದಂತೆ ವಿವಿಧ ದೇಶಗಳಲ್ಲಿ ಅಮೆರಿಕಾದ ಸೇನಾ ನೆಲೆಗಳಿವೆ. ಆದರೆ, ಇರಾನ್ ಮಾತ್ರ ಅಮೆರಿಕಾದ ಸಾಮ್ರಾಜ್ಯಶಾಹಿ ದಬ್ಬಾಳಿಕೆಗೆ ತಲೆ ಬಾಗುತ್ತಿಲ್ಲ. ಈ ಕಾರಣಕ್ಕೆ ಇರಾನಿನ ಮೇಲೆ ಯುದ್ಧ ಹೂಡಲಾಗಿದೆಯೇ ಹೊರತು ಬೇರ್ಯಾವ ಕಾರಣಕ್ಕೂ ಅಲ್ಲ. ಅಮೆರಿಕಾ ಬೆಂಬಲಿತ ಗಾಜಾ ಮೇಲಿನ ದಾಳಿಯಿಂದ ಈಗಾಗಲೇ ಸುಮಾರು 50,000 ಮಂದಿ ನಾಗರಿಕರು ಸಾವನ್ನಪ್ಪಿದ್ದಾರೆ. ವೆನೆಜುವೆಲಾದ ಚುನಾಯಿತ ಅಧ್ಯಕ್ಷರನ್ನು ರಾತ್ರೋರಾತ್ರಿ ಅಪಹರಣ ಮಾಡಿದೆ. ಗ್ರೀನ್‌ಲ್ಯಾಂಡ್ ದ್ವೀಪವೇ ತನಗೆ ಬೇಕು ಎಂದು ಅಮೆರಿಕಾ ಹಠ ಹಿಡಿದಿದೆ. ಕೆಲವು ವರ್ಷಗಳ ಹಿಂದೆ ಲಿಬಿಯಾದ ಅಧ್ಯಕ್ಷ ಗಡಾಫಿಯನ್ನು ಕೊಲೆ ಮಾಡಿದೆ. ಇರಾಕ್ ಮೇಲೆ ಯುದ್ಧ ಹೂಡಿ ಅಲ್ಲಿನ ಅಧ್ಯಕ್ಷ ಸದ್ದಾಂ ಹುಸೇನ್‌ಗೆ ಮರಣ ದಂಡನೆ ನೀಡಿದೆ. ಇಂದು ಸಾಮ್ರಾಜ್ಯಶಾಹಿ ಅಮೆರಿಕಾ ಇಡೀ ಜಗತ್ತಿನ ಶಾಂತಿಗೆ ಅತಿದೊಡ್ಡ ಕಂಟಕ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಉಗ್ರನರಸಿಂಹೇಗೌಡ, ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಸದಸ್ಯರಾದ ಎಂ.ಉಮಾದೇವಿ, ಚಂದ್ರಶೇಖರ ಮೇಟಿ, ಪಿ.ಎಸ್.ಸಂಧ್ಯಾ, ಜಿ.ಎಸ್.ಸೀಮಾ, ಟಿ.ಆರ್.ಸುನಿಲ್, ಸುಭಾಷ್, ಬಸವರಾಜು, ಸುಮಾ, ಚಂದ್ರಕಲಾ, ಆಸಿಯಾ ಬೇಗಂ, ನೀತುಶ್ರೀ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ನಾಳೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಮಾರಂಭ

ಮೈಸೂರು, ಮಾ.2– ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಮಾರಂಭವನ್ನು ಮಾ.4ರ ಬೆಳಗ್ಗೆ 11 ಗಂಟೆಗೆ ವಿವಿಯ ಕ್ರಾಫರ್ಡ್ ಭವನದಲ್ಲಿ ಆಯೋಜಿಸಲಾಗಿದೆ.

ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಂಬೈನ ಭಾಭಾ ಪರಮಾಣು ಸಂಶೋಧನಾ ಕೇಂದ್ರ ರೇಡಿಯೊಕೆಮಿಸ್ಟ್ರಿ ವಿಭಾಗದ ವಿಶ್ರಾಂತ ಮುಖ್ಯಸ್ಥ ಪ್ರೊ. ವಿ.ಕೆ. ಮನ್‌ಚಂದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಳೆದ 70 ವರ್ಷಗಳಲ್ಲಿ ಭಾರತದ ಪರಮಾಣು ಶಕ್ತಿ ಪ್ರಯಾಣ ಕುರಿತು 'ವಿಜ್ಞಾನ ದಿನ'ದ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಇವರು ದಿನಾಂಕ 02–03–26 ಸೋಮವಾರ ದೈವಾಧೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು

ಶ್ರೀಮತಿ ಮಂಗಳ

ದುಃಖತಪ್ತರು: ಆರ್. ರವಿಕುಮಾರ್, ಸ್ವಾಗತ್ ಬೋಲ್ಟ್ ನಟ್ಸ್ ಸೆಂಟರ್, ದೇವರಾಜ ಮೊಹಲ್ಲಾ, ಮೈಸೂರು ಹಾಗೂ ಕುಟುಂಬವರ್ಗ

15ನೇ ವರ್ಷದ ಸವಿನೆನಪು



ಶ್ರೀ ಕೆ. ತಿಮ್ಮಯ್ಯ (ತಿಮ್ಮಣ್ಣ), B.S.N.L

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ ಗಾಯಿತ್ರಿ, ಮಕ್ಕಳು ಮತ್ತು ಕುಟುಂಬವರ್ಗದವರು, ರಾಮಕೃಷ್ಣನಗರ, ಮೈಸೂರು

11ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,

ತೆನ್ನೀರಾ ಟಿ.ಎಂ. ಪೂವಯ್ಯ

ನಿವೃತ್ತರು, ಪೊಲೀಸ್ ಇಲಾಖೆ

ದುಃಖತಪ್ತರು: ಪತ್ನಿ, ಸೊಸೆ, ಮಕ್ಕಳು ಅಳಿಯಂದಿರು ಮತ್ತು ಕುಟುಂಬ ವರ್ಗದವರು

WANTED

Required the following persons

1) **SUPERVISOR (SALES):** 1 post
   Preferably Graduate
2) **SALES BOYS / GIRLS:** 3 Posts.
   To work as Sales Assistants-cum-Cashier
3) **PART TIME ACCOUNTANT:** B.Com. Graduate with experience to handle commercial Accounts, qualified in Tally computer operation. To work for 4-5 hours per day.
4) **CAR DRIVER** with valid license.

Interested may contact: **Mob: 9606222435**

CHANGE OF NAME

I, SAKARDE ISMAIL ARFAIN MOHIEDDIN S/o S.G MOHAMMED ISMAIL, Residing at No. 4690, 2nd Cross, Shivaji Road, N.R mohalla, Mysuru-570007, have Changed my daughter's name from AAIRAH AFSHEEN SAKARDE to HAMNAH SAKARDE on my own Free Will Sworn in Before Notary C.R Seetharam Mysore vide affidavit dated 20.02.2026

Sd/- SAKARDE ISMAIL ARFAIN MOHIEDDIN

JOB OPPORTUNITY

Central Govt. approved financial Co., invites retired officials for job. Programme in Sharada Platina, 1st Floor, Opp. Big Clock Tower, Mysore on 4-3-2026 to 8-3-26. Timing: 10.30 am - 3.30 pm. Education: SSLC & above bring necessary documents.

Mob: 9449068132



PUBLIC NOTICE

Notice is given to the general public at large that my client is negotiating and intending to purchase the notice schedule property from its owner namely S. Jayashree wife of Late. M. Swamy Gowda, and Vijays S Gowda daughter of Late. M. Swamy Gowda, residents of Gopalapura Village & Post, Jayapura Hobli, Mysuru Taluk. Any Individuals, banks, financial institutions, governmental agencies, statutory bodies, etc having any objections for my client entering into any transaction including purchase of the notice schedule property is hereby required to communicate their objections in writing to my office with documentary evidence within 07 days from the date of this publication. In the absence of any authenticated objections /claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that piece and parcel of the agricultural land property bearing Sy.No. 129/1, situated at Mullur Village, Jayapura Hobll, Mysuru Taluk measuring 2 acres 26 guntas and bounded on the East by : Devagalli Border, West by: Sy.No, 129/2, North by : Road South by: Property of Shivaprakash.

Sd/- DINESH SOLANKI
Advocate & Legal Consultant
Office: #1197, 12/2, K.R.B. Road, Chamarajapuram, Mysore-570005
Ph: 9343430011



PUBLIC NOTICE

Form No. URC-2

Advertisement giving notice about registration under Part I of Chapter XXI
[Pursuant to section 374(b) of the companies Act, 2013 and rule 4(1) of the companies (Authorised to Register) Rules, 2014]

Notice is hereby given that in pursuance of sub-section (2) of section 366 of the Companies Act, 2013, an application has been made to the Registrar at E' Wing, 2nd Floor, Kendriya Sadana, Kormangala, Bangalore-560034, Karnataka, that PRUDENT PARTNERS LLP an LLP may be registered under Part I of Chapter XXI of the Companies Act 2013, as a company limited by shares.

The principal objects of the company is Data annotation and BPM Services.

A copy of the draft memorandum and articles of association of the proposed company may be inspected at the office at NO 667, NRUPATUNGA ROAD, KUVEMPUNAGAR (MYSORE), MYSORE, KARNATAKA, INDIA 570023, at working hours between 9:30 am to 6:00 pm on any working days.

Notice is hereby given that any person objecting to this application may communicate their objection in writing to the Registrar at 'E' Wing, 2nd Floor, Kendriya Sadana, Kormangala, Bangalore - 560034, Karnataka within twenty one days from the date of publication of this notice, with a copy to the company at its registered office at NO 667, NRUPATUNGA ROAD, KUVEMPUNAGAR (MYSORE), MYSORE, KARNATAKA, INDIA-570023.

Dated this 06 day of January 2026

For and on behalf of
PRUDENT PARTNERS LLP
SINDHUSHREE MYSORE TULASIRAM
Designated Partner/CMD
DPIN: 08516589



IN THE COURT OF SENIOR CIVIL JUDGE AT VIRAJPET

OS No.: 23/2016

Plaintiffs: Kameyanda Prathap and another

-Vs-

Defendants: Kameyanda Eshwarappa and others.

Notice to the proposed 5th defendant


5) K. A. Somaiah, aged 62 years, S/o Appanna Kunjilageri Village, Madikeri Taluk, Kodagu District.

The proposed 5th Defendant is hereby notified that the Plainitffs have filed the above Suit for the relief of Partition. The case is posted to 4-3-2026 for appearance of the above Defendant.

Hence the proposed 5th Defendant is hereby notified to appear before this Hon'ble Court either personally or through Advocate on 4-3-2026 at 11 am failing which the case will proceed placing you exparte.

By order of Court
Sd/- Chief Ministerial Officer, Senior Civil Judge & JMFC Court, Virajpet

Sd/- I.P. Pramod,
Advocate, Virajpet.
Virajpet, Date: 17-2-2026



ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

FOR SALE

Tata Ace Zip
(Goods Vehicle)
Single owner, Company owned, 2012 model with all documents
Brokers excuse, genuine buyers contact:
Mob: 8884638771

REQUIRED

REPUTED DISTRIBUTOR COMPANY IN HEBBAL INDUSTRIAL AREA

1. MARKETING EXECUTIVES - 2 No's
   MALE CANDIDATES
   Education: ITI/Dip in Mech
   1 Year Experience
2. DELIVERY BOYS - 2 No's
   SSLC/PUC - WITH DL

7899947666

MAHATHMA GANDHI B.ED COLLEGE

Sathagalli, Mysuru

Academic Year: 2025-2026

ADMISSION FOR B.Ed (Last Few Seats Left)

Contact No: ●0821-2513349 ●93438 28203

Office: Mahathma Gandhi Trust, (Inside Geethanjali International Global School) #CA-7, BEML Layout, 2nd Stage, Srirampura, Mysore. Email: mahatmagandhitrust@gmail.com



NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ:ಮೈಅಪ್ರಾ/ವಿ.ತ–04/ಪಿಆರ್–35/2025–26 ದಿನಾಂಕ: 04–02–2026

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ತ ಮಂಡಳಿ, ಮೈಸೂರು ವತಿಯಿಂದ ಶ್ರೀ ವೈ.ಹೆಚ್. ಅನಂತ ನಾರಾಯಣರವರಿಗೆ ದಿ. 27–4–1968 ರಂದು ಗೋಕುಲಂ 2ನೇ ಹಂತ ಬಡಾವಣೆಯಲ್ಲಿ ನಿವೇಶನ ಸಂಖ್ಯೆ: 258 ಅಳತೆ: 30x45 ಅಡಿ ಅಳತೆಯ ನಿವೇಶನವು ಮಂಜೂರಾಗಿರುತ್ತದೆ. ದಿ: 15–12–1969 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ನಂತರ ಅಂದಿನ ಅಧ್ಯಕ್ಷರ ಆದೇಶದ ಮೇರೆಗೆ ರೂ. 600/–ಗಳನ್ನು ಚ.ಸಂ. 7837/79, ದಿ: 17–01–1976ರಂದು ಪಾವತಿಸಿಕೊಂಡು ಶ್ರೀ ಕೆ.ಆರ್. ವೆಂಕಟಾಚಲ ರವರ ಹೆಸರಿಗೆ ದಿ: 17–01–1976ರಂದು ವರ್ಗಾವಣೆ ಪತ್ರ ನೀಡಲಾಗಿರುತ್ತದೆ.

ವರ್ಗಾವಣೆದಾರರಾದ ಶ್ರೀ ಕೆ.ಆರ್. ವೆಂಕಟಾಚಲ ರವರು ಸದರಿ ನಿವೇಶನವನ್ನು 3ನೇ ಪುಸ್ತಕದ 152ನೇ ಸಂಪುಟದಲ್ಲಿ 52–54ನೇ ಪುಟದಲ್ಲಿ 222ನೇ ನಂಬರಾಗಿ ದಿ: 05–11–2001 ರಂದು ಅವರ ಮಗನಾದ ಶ್ರೀ ಕೆ.ವಿ. ಶ್ರೀನಾಥ್ ರವರಿಗೆ ವಿಲ್ ಯಾ ಮರಣ ಶಾಸನ ಪತ್ರ ಮಾಡಿರುತ್ತಾರೆ.

ಶ್ರೀ ಕೆ.ಆರ್. ವೆಂಕಟಾಚಲ ರವರು ದಿ: 21–10–2011ರಂದು ಮತ್ತು ಇವರ ಪತ್ನಿ ಶ್ರೀಮತಿ ಶಶಿರೇಖಾ .ಎ. ರವರು ದಿ: 25–04–2012ರಂದು ಹಾಗೂ ಅರ್ಜಿದಾರರ ಅಣ್ಣನಾದ ಶ್ರೀ ಡಾ॥ ಕೆ.ವಿ. ನಾಗರಾಜು ರವರು ದಿ: 04–11–2011ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಪತ್ರ ನೀಡಿರುತ್ತಾರೆ. ದಿ: 12–09–2012ರ ಮೃತರ ಕುಟುಂಬ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ: ಕುಜಿಸವಿವ/ಕಸಬಾ/1679/2012–13ರಂತೆ ಲೇ॥ ಡಾ. ಕೆ.ವಿ. ನಾಗರಾಜು ಮತ್ತು ಇವರ ಪತ್ನಿ ಶ್ರೀಮತಿ ತಾರಾ ನಾಗರಾಜು, ಶ್ರೀಮತಿ ಕೆ.ವಿ. ವೀಣಾ (ಮಗಳು) ಶ್ರೀ ಕೆ.ವಿ. ರಮೇಶ್ (ಮಗ), ಶ್ರೀ ಕೆ.ವಿ. ಮೀರಾ (ಮಗಳು), ಶ್ರೀ ಕೆ.ವಿ. ಶ್ರೀನಾಥ್ (ಮಗ) ರವರುಗಳಿದ್ದು, ಇವರುಗಳಲ್ಲಿ ಒಬ್ಬರಾದ ಶ್ರೀ ಕೆ.ವಿ. ಶ್ರೀನಾಥ್ ರವರಿಗೆ ಇವರ ತಂದೆ ಶ್ರೀ ಕೆ.ಆರ್. ವೆಂಕಟಾಚಲ ರವರು ಅವರ ಜೀವಿತ ಅವಧಿಯಲ್ಲಿ ದಿ: 06–11–2001ರಂದು ಸದರಿ ನಿವೇಶನದ "ಎ" ಷೆಡ್ಯೂಲ್ ಸ್ವತ್ತು ಸೇರಿರುವುದಾಗಿ ನೊಂದಾಯಿತ ವಿಲ್ ನೀಡಿರುತ್ತಾರೆ.

ಅದರಂತೆ ಶ್ರೀ ಕೆ.ವಿ. ಶ್ರೀನಾಥ್ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ಪೌತಿ ರೀತ್ಯಾ ವರ್ಗಾವಣೆ ಹಾಗೂ ಕ್ರಯಪತ್ರ ಕೋರಿ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಮೇಲ್ಕಂಡ ನಿವೇಶನದ ವರ್ಗಾವಣೆ ಮತ್ತು ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಛೇರಿ–04
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: 31/2025–26, ದಿನಾಂಕ: 23–02–2026

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೈಸೂರು ಜಿಲ್ಲೆಯ ಕಾರ್ಯನಿವಾಹಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಮೈಸೂರು/ನಂಜನಗೂಡು/ಪಿರಿಯಾಪಟ್ಟಣ/ಹುಣಸೂರು/ಚಾಮರಾಜನಗರ/ ಗುಂಡ್ಲುಪೇಟೆ ತಾಲ್ಲೂಕುಗಳ ಈ ಕೆಳಕಂಡ ಸರ್ಕಾರಿ ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಮೀನುಪಾಶುವಾರು ಹಕ್ಕನ್ನು 2026–27 ರಿಂದ 2030–31ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ 01.04.2026ರಿಂದ 31.3.2031ರ ವರೆಗೆ) ಒಟ್ಟು 05 (ಐದು) ವರ್ಷಗಳ ಅವಧಿಗೆ ಇ–ಟೆಂಡರ್ ಮೂಲಕ ಈ ಕೆಳಗೆ ನಮೂದಿಸಿರುವ ಕೆ.ಡಬ್ಲ್ಯು–1ರ ಪ್ರಕಾರ "ಕೆ.ಪಿ.ಪಿ.ಪಿ" ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಈ ಕೆಳಕಂಡಂತೆ ನಮೂದಿಸಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗೆ ನಮೂದಿಸಿರುವ ವೇಳಾ ಪಟ್ಟಿಯನ್ವಯ ಸರ್ಕಾರದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರದ ಈ ಸಂಗ್ರಹಣಾ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಅಹ್ವಾನಿಸಲಾಗಿದೆ.

Last Date And Time For Submit The Queries: 02.03.2026, 5-30 PM. Date And Time To Confirm Participation Of Interest In Auction: 07.03.2026, 5-30 PM. End Date And Time For Bidding: 23.03.2026, 5-30 PM Delta Time For Bidding: 5 Minutes

ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ "https://kppp.karnataka.gov.in " ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿದ್ದನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್

DIPR/DDMYS/1762/KSMCA/995/2025-26